# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 3 ಮಾರ್ಚ್ 2023



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರು ಜೆಎಸ್‌ಎಸ್ ಔಷಧವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವವನ್ನು ಕೇರಳದ ರಾಜ್ಯಪಾಲರಾದ ಘನತೆವೆತ್ತ ಶ್ರೀ ಆರಿಫ್ ಮೊಹಮ್ಮದ್ ಖಾನ್‌ರವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿದರು. ಡಾ. ಬಿ. ಸುರೇಶ್ ಡಾ. ಸುರೀಂದರ್ ಸಿಂಗ್, ಶ್ರೀ ಜೆ.ಸಿ. ಮಾಧುಸ್ವಾಮಿ, ಡಾ. ಸಿ.ಜಿ. ಬೆಟಸೂರಮಠ ಮತ್ತು ಡಾ. ಟಿ.ಎನ್. ಪ್ರಮೋದ್ ಕುಮಾರ್‌ರವರುಗಳಿದ್ದಾರೆ (17 ಫೆಬ್ರವರಿ 2023)




ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಹದಿಮೂರನೆಯ ಘಟಿಕೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಬಿ. ಮಂಜುನಾಥ್, ಡಾ. ಆರ್. ಸುಧೀಂದ್ರ ಭಟ್, ಡಾ. ಹೆಚ್. ಬಸವನಗೌಡಪ್ಪ ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ಶ್ರೀ ದತ್ತಾತ್ರೇಯ ಹೊಸಬಾಳೆ ಗೌ.ನ್ಯಾ. ಶ್ರೀ ಶಿವರಾಜ್ ಪಾಟೀಲ್, ಡಾ. ಬಿ. ಸುರೇಶ್, ಡಾ. ಎಂ.ಎನ್. ಸುಮಾ ಹಾಗೂ ಪದಕ ವಿಜೇತ ಪದವೀಧರರುಗಳಿದ್ದಾರೆ (6 ಫೆಬ್ರವರಿ 2023)

**ಸಂಪುಟ 38 : ಸಂಚಿಕೆ 3** **ಮಾರ್ಚ್ 2023**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ศ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ವಜ್ರ ಮಹೋತ್ಸವ ಹಾಗೂ ಜೆಎಸ್‌ಎಸ್ ಬಹುಮಾಧ್ಯಮ ಸಂಪನ್ಮೂಲ ಕೇಂದ್ರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾದ ಘನತೆವೆತ್ತ ಶ್ರೀ ಮನೋಜ್ ಸಿನ್ಹಾರವರು ಉದ್ಘಾಟಿಸುತ್ತಿರುವುದು. ಡಾ. ಎ.ಎನ್. ಸಂತೋಷ್ ಕುಮಾರ್, ಡಾ. ಬಿ. ಸುರೇಶ್, ಶ್ರೀ ಎಲ್. ನಾಗೇಂದ್ರ, ಪ್ರೊ. ಎಂ.ಎಚ್. ಧನಂಜಯ, ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಎಸ್.ಬಿ. ಕಿವಡೆರವರುಗಳಿದ್ದಾರೆ (11 ಫೆಬ್ರವರಿ 2023)

**ದಶ ವಾರ್ಷಿಕ : 500/- * : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಸತ್ಯದೃಷ್ಟಿ 10
**ಶ್ರೀ ಸಿದ್ಧೇಶ್ವರ ಸ್ವಾಮಿಗಳು**
(ಪ್ರವಚನಸಾರ)

ಪೂರ್ಣದೃಷ್ಟಿ 14
**ಡಾ. ಎಂ.ಎನ್. ನಂದೀಶ್ ಹಂಚೆ**

ಶಬರಶಂಕರ ವಿಲಾಸ–ಟೀಕು 17
**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**
(ವೀರಶೈವ ಟೀಕು ಸಾಹಿತ್ಯ ಸರಣಿ)

ನೀಲಮ್ಮನ ಸ್ತೋತ್ರ 20
**ಡಾ. ವೈ.ಸಿ. ಭಾನುಮತಿ**
(ವೀರಶೈವ ಅಪ್ರಕಟಿತ ಕೃತಿಮಾಲಿಕೆ)

ಬೋಗಾದಿ ಗ್ರಾಮದ ಚಾರಿತ್ರಿಕ ಅಧ್ಯಯನ 29
**ಡಾ. ಎಸ್.ಜಿ. ರಾಮದಾಸ ರೆಡ್ಡಿ**
(ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ)

ಶರಣರ ಮಹಿಳಾಪರ ಚಿಂತನೆಗಳು 35
**ಡಾ. ಆರ್.ಬಿ. ಚಿಲುಮಿ**

ವಚನ ಚಳವಳಿ ಮತ್ತು ಭಾರತ ಸಂವಿಧಾನ 40
**ಡಾ. ಸೀ.ಚ. ಯತೀಶ್ವರ**

ಸಾಂಸ್ಕೃತಿಕ ರಾಯಭಾರಿ ಪ್ರೊ. ಮಲೆಯೂರು ಗುರುಸ್ವಾಮಿ 44
**ನಗರ್ಲೆ ಶಿವಕುಮಾರ**

ಮಲೆಯೂರ ಮಣ್ಣು !! 49
**ಸು. ಬಸವರಾಜ ದೊಡ್ಡಟ್ಟಿ**

ನುಡಿ ನಮನ 50
**ಎಸ್. ಪುಟ್ಟಪ್ಪ ಮುಡಿಗುಂಡ**

ಗ್ರಂಥ ಪರಾಮರ್ಶೆ 51

ವಾರ್ತಾವಿಹಾರ 52
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 63

# ಗುರುವಾಣಿ

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥

ಸುಖ–ದುಃಖಗಳನ್ನು, ಲಾಭ–ನಷ್ಟಗಳನ್ನು, ಸೋಲು–ಗೆಲುವುಗಳನ್ನು ಸಮಭಾವದಿಂದ ಕಂಡು ಸದಾ ಹೋರಾಟದಲ್ಲಿ ನಿರತನಾದವನಿಗೆ ಯಾವ ಪಾಪವೂ ಅಂಟುವುದಿಲ್ಲ. ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿನ ಮೂವತ್ತೆಂಟನೆಯ ಈ ಶ್ಲೋಕವು ಮನುಷ್ಯನಿಗೆ ಇರಲೇಬೇಕಾದ ಸಮಚಿತ್ತ ಹಾಗೂ ಸಮದೃಷ್ಟಿಯನ್ನು ನಿರೂಪಿಸುತ್ತದೆ. ಪೂರ್ವಿಕರು ಜಗತ್ತನ್ನು, ಜೀವನವನ್ನು ನೋಡಿದ ಬಗೆಯಿದು. ಅವರ ಪ್ರತಿಯೊಂದು ಆಚರಣೆಯಲ್ಲಿಯೂ ಇಂತಹ ಮಹತ್ವದ ತತ್ತ್ವವಡಗಿರುತ್ತದೆ. ಅದನ್ನು ನೋಡುವ, ಪರಿಭಾವಿಸುವ ವ್ಯವಧಾನವಿರಬೇಕು, ಅಷ್ಟೆ. ಈ ತಿಂಗಳು ಎರಡು ಸಂಭ್ರಮಗಳಿವೆ. ಒಂದು ಯುಗಾದಿ, ಮತ್ತೊಂದು ಶ್ರೀರಾಮನವಮಿ. ಪುರಾಣಗಳ ಪ್ರಕಾರ ಯುಗಾದಿಯ ದಿನ ಬ್ರಹ್ಮನು ಸೃಷ್ಟಿಯನ್ನು ನಿರ್ಮಿಸಲು ಆರಂಭಿಸಿದನು. ಬಳಿಕ ಆತ ಸಮಯವನ್ನು ತಿಳಿಯಲು ಕಾಲವನ್ನು ಅಂದರೆ ವರ್ಷ, ವಾರ, ದಿನ, ತಿಂಗಳುಗಳನ್ನು ನಿರ್ಮಿಸಿದನು. ಈ ಹಿನ್ನೆಲೆಯಲ್ಲಿ ಬ್ರಹ್ಮಾಂಡದ ಸೃಷ್ಟಿಯ ಮೊದಲ ದಿನವನ್ನು ಯುಗಾದಿ ಎಂದು ಭಾವಿಸಲಾಗಿದೆ. ಈ ಸಂದರ್ಭದಲ್ಲಿ ಜನಪದರ ಅನೇಕ ಆಚರಣೆಗಳನ್ನು ನೋಡಬಹುದು. ಹೊನ್ನೇರು ಕಟ್ಟುವುದು ಇಂಥ ಆಚರಣೆಗಳಲ್ಲಿ ಒಂದು. ಹೊಸದಾಗಿ ಭೂಮಿಯನ್ನು ಉಳುಮೆ ಮಾಡುವುದು ಎಂದು ಇದರ ಅರ್ಥವಲ್ಲ. ಪ್ರಕೃತಿಯನ್ನು ಕೃಷಿ ಮಾಡಲು ಬ್ರಹ್ಮದೇವ ಮೊದಲುಮಾಡಿದ ಸಂಕೇತವದು. ಯುಗಾದಿಯಂದು ದೇವರ ಪೂಜೆಯ ನಂತರ, ಬೇವು–ಬೆಲ್ಲವನ್ನು ಸೇವಿಸುವ ಕ್ರಮವಿದೆ. ಇದರ ಹಿನ್ನೆಲೆಯೇ ಭಗವದ್ಗೀತೆಯ ಶ್ಲೋಕದ ಭಾವಾರ್ಥ.

ಜೀವನದಲ್ಲಿ ಸುಖ ಮತ್ತು ದುಃಖಗಳು ಅನಿರೀಕ್ಷಿತವೇನೂ ಅಲ್ಲ, ಅವು ಅನಿವಾರ್ಯ. ಕೇವಲ ಸುಖವನ್ನು ಅಥವಾ ಕೇವಲ ದುಃಖವನ್ನು ಮಾತ್ರ ಯಾರೂ ಅನುಭವಿಸಿರಲಾರರು. ಅವು ಒಂದನ್ನೊಂದು ಸದಾ ಹಿಂಬಾಲಿಸುತ್ತವೆ. ಹಗಲು–ರಾತ್ರಿಗಳ ತರಹ. ಹಗಲಷ್ಟೇ ಅಥವಾ ರಾತ್ರಿಯಷ್ಟೇ ಬೇಕೆಂದರೆ ಆಗದು. ರಾತ್ರಿಯನ್ನು ಯಾರು ಬಯಸುತ್ತಾರೆ

ಎಂದು ಅನ್ನಿಸಬಹುದು. ಕೋಗಿಲೆಗೆ ಹಗಲು ಇಷ್ಟವಾದರೆ ಗೂಬೆಗೆ ಇರುಳು ಪ್ರಿಯ. ಅವರವರ ಸ್ವಭಾವಕ್ಕೆ ತಕ್ಕಂತೆ ಅವರವರ ಬಯಕೆಗಳು. ಇಲ್ಲಿ ಸರಿ ತಪ್ಪುಗಳ ಪ್ರಶ್ನೆಗಿಂತ ಪ್ರಕೃತಿಯ ರೀತಿ ಮತ್ತು ವಿಸ್ಮಯವನ್ನು ನೋಡಬೇಕಾದುದು ಅಗತ್ಯ.

ಬದುಕಿನ ಯಶಸ್ಸಿನ ಸೂತ್ರವಿರುವುದು, ಜಯಿಸಬೇಕು ಎನ್ನುವ ಸ್ವಾರ್ಥವಿಲ್ಲದೆ, ಅಹಂ ಇಲ್ಲದೆ, ಎಲ್ಲವೂ ಭಗವಂತನ ಕೃಪೆ, ಕರ್ತವ್ಯ ಮಾತ್ರ ನನ್ನದು ಎಂದು ಅರಿಯುವುದರಲ್ಲಿ. ಇದನ್ನು ಬಲ್ಲವನು ಎಂದೂ ದುಃಖಿಯಾಗಿರಲಾರ. ಆತನ ಪಾಲಿಗೆ ಸೋಲು ಸೋಲಲ್ಲ, ದುಃಖ ದುಃಖವಲ್ಲ. ಅಂಥವನು ಮಾತ್ರ ಆತ್ಮ ಮತ್ತು ಪರಮಾತ್ಮನ ಸ್ವರೂಪವನ್ನು ಅರಿಯಬಲ್ಲ. ಆದರೆ ಕ್ಷಣಭಂಗುರವಾದ ಬದುಕು ಈ ಅಧ್ಯಾತ್ಮದ ಅಂಶವನ್ನು ತಿಳಿಯಗೊಡಿಸದೆ ಲೌಕಿಕದಲ್ಲೇ ಮನಸ್ಸು ಮುಳುಗುವಂತೆ ಮಾಡಿಬಿಡುತ್ತದೆ. ಆಗಾಗ ಬೆಳಕು ಮೂಡಿದರೂ ಕತ್ತಲೆಯಂತೆ ಕವಿದಿರುವ ತೀರದ ಬಯಕೆ ಕುರುಡಾಗಿಸುತ್ತದೆ. ಕತ್ತಲೆಯನ್ನು ಮೀರಿ, ಚಿರಂತನ ಸತ್ಯವನ್ನು ಅರ್ಥಮಾಡಿಕೊಳ್ಳಲು ಯುಗಾದಿ ಹಬ್ಬ ಮಾರ್ಗದರ್ಶನ ನೀಡುತ್ತದೆ.

ಇದೇ ತಿಂಗಳು ಶ್ರೀರಾಮನವಮಿ ಕೂಡ ಬರುತ್ತದೆ. ಇದು ಬರುವುದು ಬಿರು ಬೇಸಿಗೆಯಲ್ಲಿ. ಹೇಮಂತ ಮತ್ತು ಶಿಶಿರ ಕಳೆದು ವಸಂತಋತುವಿನ ಚೈತ್ರಮಾಸದಲ್ಲಿ. ಈ ಹಿನ್ನೆಲೆಯಲ್ಲಿ ಗೋಪಾಲಕೃಷ್ಣ ಅಡಿಗರು "ಶ್ರೀರಾಮನವಮಿಯ ದಿವಸ" ಎಂಬ ಕವಿತೆಯನ್ನು ರಚಿಸಿದ್ದಾರೆ. ಅದರಲ್ಲಿ ರಾಮನ ಆಗಮನದ ಹಿಂದಿರುವ ಸಾಂಕೇತಿಕತೆಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮಕ್ಕಳಿಲ್ಲದೆ ಪರಿತಪಿಸಿ ಋಷಿಗಳ ನಿರ್ದೇಶನದಂತೆ ಯಾಗ ಮಾಡಿ ಮಗುವಿಗಾಗಿ ಕಾದಿರುವ ದಶರಥ; ಮೃಗೀಯ ಸ್ವಭಾವವನ್ನು ಕಳೆದುಕೊಂಡ ಬೇಡ ತಪಸ್ಸಿಗೆ ಕುಳಿತು ಆತನ ಸುತ್ತ ಹುತ್ತ ಬೆಳೆದರೂ ಅದರ ಪರಿವೆಯೇ ಇಲ್ಲದೆ, ಆತನ ಮನಸ್ಸಿನಲ್ಲಿ ರೂಪುಗೊಂಡ ಯುಗಪುರುಷ ರಾಮನ ಚಿತ್ರ; ದಾನವರ ಉಪಟಳದಿಂದ ಬೇಸತ್ತು ಅವರ ಸಂಹಾರಕ್ಕಾಗಿ ಮಹಾವೀರನೊಬ್ಬನ ಆಗಮನಕ್ಕಾಗಿ ಋಷಿಮುನಿಗಳು; ತನ್ನ ಮೋಕ್ಷಕ್ಕಾಗಿ ಕಲ್ಲಾಗಿ ಕುಳಿತ ಅಹಲ್ಯೆ; ಭಕ್ತಿಯಿಂದ ಪುರುಷೋತ್ತಮನ ಆಗಮನದ ನಿರೀಕ್ಷೆಯಲ್ಲಿರುವ ಶಬರಿ ಇವರೆಲ್ಲರ ಬೇಡಿಕೆಯೂ ಏಕತ್ರಗೊಂಡ ಗಳಿಗೆಯಲ್ಲಿ ಜನಿಸಿದವನು ಶ್ರೀರಾಮ. ಪ್ರಕೃತಿಯ ವೈಚಿತ್ರ್ಯವೆಂದರೆ, ಬೇಸಿಗೆಯ ದಾಹವನ್ನು ತಣಿಸುವ ಎಲ್ಲ ಬಗೆಯ ಹಣ್ಣುಗಳೂ ಈ ಕಾಲದಲ್ಲಿಯೇ ದೊರೆಯುತ್ತವೆ. ಇಂತಹ ವಿಸ್ಮಯವನ್ನು ನೋಡಿ ಅರಿಯುವ ತವಕ ಬರಬೇಕು. ಆಗ ಮನುಷ್ಯ ಪ್ರಕೃತಿ ಹಾಗೂ ಪರಿಸರ–ಪ್ರಕೃತಿ ಎರಡೂ ಭಿನ್ನವಲ್ಲ ಎನ್ನುವುದು ಅರ್ಥವಾಗುತ್ತದೆ. ಸಂಕೇತವನ್ನಷ್ಟೇ ನಂಬಿ ಅದರ ಹಿಂದಿನ ಅರ್ಥವನ್ನು ಅರಿಯದಿದ್ದರೆ ಏನೂ ಫಲವಿಲ್ಲ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ.....

ವರುಷಕೊಂದು ಹೊಸತು ಜನ್ಮ ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾಲಕೆ
ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರಯ ನಮಗದಷ್ಟೆ ಏತಕೋ...

ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ.

ಬೇಂದ್ರೆಯವರ ಈ ಕವಿತೆ ಪ್ರಕೃತಿ ಮತ್ತು ಮನುಷ್ಯನನ್ನು ತುಲನಾತ್ಮಕವಾಗಿ ಪರಿಭಾವಿಸಿರುವ ರೀತಿ ಅದ್ಭುತವಾದದ್ದು. ಜಗತ್ತಿನ ಜೀವಸೃಷ್ಟಿಯಲ್ಲಿ ಎಲ್ಲವೂ ಪ್ರಕೃತಿಯ ಜೊತೆಗೆ ಹೊಂದಿಕೊಂಡೇ ಜೀವಿಸುತ್ತವೆ. ಆದರೆ ಮನುಷ್ಯ ಮಾತ್ರ ಯಾಕೋ ಪ್ರಕೃತಿಯಿಂದ ಅಂತರ ಕಾಯ್ದುಕೊಂಡಿದ್ದಾನೆ. ಪ್ರಕೃತಿಯೇ ಬಹುಶಃ ಮನುಷ್ಯನನ್ನು ತನ್ನಿಂದ ದೂರವಿಟ್ಟಂತೆಯೂ ಅನ್ನಿಸದಿರದು. ಅದು ಮನುಷ್ಯನನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಲು ನಿರಾಕರಿಸಿದೆಯೋ ಅಥವಾ ಮನುಷ್ಯನೇ ಪ್ರಕೃತಿಯ ಜೊತೆ ಹೋಗಲು ತಯಾರಿಲ್ಲವೋ ತಿಳಿಯದು. ಆದರೆ ಈ ವೈರುಧ್ಯದಿಂದ ನಷ್ಟವಾಗುತ್ತಿರುವುದು ಮನುಷ್ಯನಿಗೆ ಮಾತ್ರ. ಮನುಷ್ಯ ಮೊದಲಿನಿಂದಲೂ ಇಡೀ ಜಗತ್ತು ಇರುವುದು ತನ್ನ ಅನುಕೂಲಕ್ಕೆ ಎಂದುಕೊಂಡೇ ವ್ಯವಹರಿಸುತ್ತಿದ್ದಾನೆ. ದೇವರು ಈ ಜಗತ್ತನ್ನು ಸೃಷ್ಟಿ ಮಾಡಿದ್ದಾನೆ ಎಂದುಕೊಂಡ ಆಸ್ತಿಕರು ಹಾಗೂ ಇದೊಂದು ಭೌತಿಕ ಜಗತ್ತು ಮಾತ್ರ ಎಂದುಕೊಂಡ ನಾಸ್ತಿಕರು ಇಬ್ಬರೂ ಕೂಡ ಜಗತ್ತನ್ನು ಅನುಭವಿಸುವ ವಿಷಯದಲ್ಲಿ ಸಾಮ್ಯತೆಯನ್ನು ಹೊಂದಿದ್ದಾರೆ. ಅದು ಜಗತ್ತು ಅನುಭವಿಸಲಷ್ಟೆ ಇರುವ ವಸ್ತು ಎಂದು. ಆದರೆ ವಾಸ್ತವದಲ್ಲಿ ಜಗತ್ತಿನ ಸೃಷ್ಟಿ ಮನುಷ್ಯನಿಂದ ಆಗಿಲ್ಲದ ಕಾರಣ, ಸೃಷ್ಟಿಯಲ್ಲಿ ಈತನೂ ಒಬ್ಬನಾದ ಕಾರಣ ಇನ್ನಿತರ ಚರಾಚರವಸ್ತುಗಳಿಗೆ ಈ ಜಗತ್ತಿನಲ್ಲಿ ಜೀವಿಸುವ ಹಕ್ಕು ಎಷ್ಟಿದೆಯೋ ಅಷ್ಟು ಮಾತ್ರವೇ ಮನುಷ್ಯನಿಗೂ ಇದೆ. ಈತ ವಿಶೇಷವೇನೂ ಅಲ್ಲ. ಆದರೆ ಇದರ ಅರಿವು ಮನುಷ್ಯನಿಗೂ ಇಲ್ಲ, ಮನುಷ್ಯನಿಂದ ಸೃಷ್ಟಿಯಾದ ಬಹುತೇಕ ಧರ್ಮ ಮತ ಪಂಥಗಳಿಗೂ ಇಲ್ಲ. ಭಾರತೀಯರಲ್ಲೂ, ಚಾರ್ವಾಕರು ಭೌತ ನೀತಿಯನ್ನೇ ನಂಬಿದ್ದರು, ಅದನ್ನೇ ಬೋಧಿಸಿದರು. ಆದರೆ

ಉಪನಿಷತ್ತುಗಳು ಮಾತ್ರ ಜಗತ್ತನ್ನು ಬೆರಗಿನ ಕಣ್ಣಿನಿಂದ ನೋಡಿ ವಿಸ್ಮಯಗೊಂಡವು. ಜಗತ್ತಿನ ಜೊತೆ ಮನುಷ್ಯ ಹೇಗೆ ತಾದಾತ್ಮ್ಯವನ್ನು ಸಾಧಿಸಬೇಕು ಎನ್ನುವುದನ್ನು ಕಲಿಸಿದವು.

ಮನುಷ್ಯನಿಗೆ ಇರುವುದನ್ನು ಅರಿಯುವುದಕ್ಕಿಂತ, ಮರೆಯುವುದನ್ನು ಬೆನ್ನತ್ತಿ ಹೋಗುವುದು ಮುಖ್ಯವಾಗಿಬಿಟ್ಟದೆ. ಆತನಿಗೆ ವರ್ತಮಾನಕ್ಕಿಂತ ಭವಿಷ್ಯದಲ್ಲಿಯೇ ಹೆಚ್ಚು ತವಕ. ಭೂತದಲ್ಲಿ ಆತನಿಗೆ ಲವಲೇಶವೂ ಆಸಕ್ತಿ ಇದ್ದಂತಿಲ್ಲ. ಇದ್ದಿದ್ದರೆ ಆತ ತನ್ನ ವರ್ತಮಾನದಲ್ಲಿಯೇ ಭವಿಷ್ಯವನ್ನು ಕಂಡುಕೊಳ್ಳುತ್ತಿದ್ದ. ಭವಿಷ್ಯವಿಲ್ಲದೇ ವರ್ತಮಾನಕ್ಕೆ ಅರ್ಥವಿಲ್ಲವೆಂದು ಹಲವರಿಗೆ ಅನ್ನಿಸಬಹುದು. ಆದರೆ ವರ್ತಮಾನದ ಸರಿಯಾದ ಶೋಧನೆ ಮಾತ್ರ ಸಶಕ್ತ ಭವಿಷ್ಯಕ್ಕೆ ದಾರಿಮಾಡಿಕೊಡಬಲ್ಲದು. ಭವಿಷ್ಯದ ಅತಿಯಾದ ಬಯಕೆಯೇ ಮಾನವನನ್ನು ಸ್ವಾರ್ಥಿಯನ್ನಾಗಿಸಿದೆ. ಆತನಿಗೆ ಜಗತ್ತಿನ ಎಲ್ಲವನ್ನೂ ಅನುಭವಿಸುವ, ಕಬಳಿಸುವ, ಸ್ವಾಧೀನಪಡಿಸಿಕೊಳ್ಳುವ ಹಂಬಲ.

ಪಂಪನ ಆದಿಪುರಾಣದಲ್ಲಿ ಒಂದು ಸೊಗಸಾದ ಚಿತ್ರಣವಿದೆ. ಭೂಮಂಡಲದ ಮೊದಲ ಚಕ್ರವರ್ತಿ ವೃಷಭದೇವ, ಮಾನವ ಸಂಸ್ಕೃತಿಯ ಸ್ಥಾಪಕ. ಮೊದಲನೆಯ ಜಿನ ಕೂಡ. ಅದೇನೇ ಇರಲಿ, ಆತ ಭೂಮಂಡಲದಲ್ಲಿ ನಾಗರಿಕ ಸಮಾಜವನ್ನು ಸೃಷ್ಟಿಸಿದ್ದರಿಂದ ಸಂತಸಗೊಂಡ ಇಂದ್ರದೇವನು ವೃಷಭದೇವನನ್ನು ತನ್ನ ಲೋಕಕ್ಕೆ ಆಹ್ವಾನಿಸಿ, ಸತ್ಕರಿಸಲು ನಿರ್ಧರಿಸಿದನು. ಅಂತೆಯೇ ಇಂದ್ರಲೋಕಕ್ಕೆ ತೆರಳಿದ ವೃಷಭನಾಥನಿಗೆ ಇನ್ನಿಲ್ಲದ ಗೌರವಾದರಗಳು ದೊರೆತವು. ಅವನಿಗಾಗಿ ಇಂದ್ರನು ನಿಲಾಂಜನೆಯ ನೃತ್ಯವನ್ನು ಏರ್ಪಡಿಸಿದನು. ಆಕೆಯ ಅದ್ಭುತ ನೃತ್ಯವನ್ನು ಏಕಾಗ್ರ ಚಿತ್ತದಿಂದ ವೃಷಭದೇವ ನೋಡುತ್ತಿದ್ದಂತೆಯೇ ಅವಳ ಆಯುಷ್ಯ ಮುಗಿದು ಆಕೆ ಸಾಯುವ ಸಮಯ ಬಂದಿತು. ಆದರೆ ಮಧ್ಯದಲ್ಲಿಯೇ ನೃತ್ಯ ನಿಂತುಹೋದರೆ ವೃಷಭದೇವನ ರಸಭಂಗವಾಗುತ್ತದೆ ಎಂದುಕೊಂಡ ಇಂದ್ರನು ಆಕೆಯಲ್ಲಿ ಬೇರೊಂದು ಜೀವವನ್ನು ಪ್ರತಿಷ್ಠಾಪಿಸಿದನು. ನೃತ್ಯ ಪೂರ್ಣವಾಯಿತು. ಆದರೆ ಅದು ವೃಷಭದೇವನಿಗೆ ಸಂತಸವನ್ನು ತರುವುದಕ್ಕೆ ಬದಲಾಗಿ ಖಿನ್ನತೆಯನ್ನು ಉಂಟುಮಾಡಿತು. ಭೋಜನದ ಸಮಯದಲ್ಲಿ ಖಿನ್ನತೆಯ ಕಾರಣವನ್ನು ಕೇಳಿದ ಇಂದ್ರನಿಗೆ 'ನೃತ್ಯದ ಮಧ್ಯೆ ಏನೋ ಸಂಭವಿಸಿದೆ' ಎಂದು ವೃಷಭದೇವನು ಹೇಳಿದನು. ಇಂದ್ರನು ವೃಷಭದೇವನ ಸೂಕ್ಷ್ಮದೃಷ್ಟಿಗೆ ನಿಬ್ಬೆರಗಾಗಿ ನಡೆದ ಸಂಗತಿಯನ್ನು ವಿವರಿಸಿದನು. ಇದರಿಂದ ವೈರಾಗ್ಯಹೊಂದಿದ ವೃಷಭದೇವನು ಭೂಮಿಗೆ ಬಂದೊಡನೆ ತನ್ನ ಸಮಸ್ತ ರಾಜ್ಯವನ್ನೂ ಮಕ್ಕಳಿಗೆ ಸಮವಾಗಿ ಹಂಚಿಕೆ ಮಾಡಿ, ವೈರಾಗ್ಯವನ್ನು ತಾಳಿ ತಪಸ್ಸಿಗೆ ತೊಡಗಿದನು. ವೃಷಭನಾಥನಿಗೆ ಜ್ಞಾನೋದಯವಾಗುವ ಹೊತ್ತಿಗೆ ಸರಿಯಾಗಿ ಭರತಚಕ್ರವರ್ತಿಗೆ ಮೊದಲ ಮಗು ಜನಿಸಿತು. ಆಗಷ್ಟೇ ಅವನ ಆಯುಧಾಗಾರದಲ್ಲಿ ಚಕ್ರರತ್ನ ಉದಿಸಿತು. ಇದರಿಂದ ಉತ್ಸುಕನಾದ ಭರತನು ದಿಗ್ವಿಜಯಕ್ಕೆ ಹೊರಟನು. ಭೂಮಂಡಲದ ಎಲ್ಲ ರಾಜರುಗಳನ್ನೂ ಗೆದ್ದು ಕೊನೆಗೆ ತನ್ನ ತಮ್ಮ ಬಾಹುಬಲಿಯ ಪೌದನಪುರವನ್ನು ಗೆಲ್ಲಲು ಬಂದು

ಯುದ್ಧದಲ್ಲಿ ಸೋತುಹೋದನು. ಆದರೆ ಸೋತವನು ರಾಜ್ಯಭಾರ ಮಾಡಿದನು; ಗೆದ್ದ ಬಾಹುಬಲಿ ವೈರಾಗ್ಯ ಹೊಂದಿದನು. ಈ ಕಥೆಯಲ್ಲಿನ ಒಂದು ಮುಖ್ಯವಾದ ವಿಚಾರವೆಂದರೆ, ಭರತನಿಗೆ ಮಗ ಹುಟ್ಟಿ ಚಕ್ರರತ್ನ ಉದಿಸಿದ ದಿನವೇ ಆತನ ತಂದೆ ವೃಷಭನಾಥನಿಗೆ ಜ್ಞಾನೋದಯವಾಗಿದ್ದು. ಇದರಿಂದ ಭರತನಿಗೆ ಅರ್ಥವಾಗಬೇಕಿದ್ದುದು ಬದುಕಿನ ಅನಿತ್ಯತೆ. ಆದರೆ ಆತ ಚಿರಂತನೆಗೆ ಬೆನ್ನುತಿರುಗಿಸಿ ವಿಜಯಯಾತ್ರೆಯ ಕ್ಷಣಿಕತೆಯತ್ತ ನಡೆದ. ತಮ್ಮನಿಂದ ಸೋತರೂ ಜೀವನದ ಕ್ಷಣಿಕತೆ ಅರ್ಥವಾಗಲಿಲ್ಲ. ಆತನಿಂದಲೇ ನಮ್ಮಲ್ಲಿ ಭರತವರ್ಷ ಆರಂಭವಾಯಿತು ಎನ್ನುವ ಮಾತಿದೆ. ಅಂದರೆ ನಮ್ಮೆಲ್ಲರೊಳಗೂ ಒಬ್ಬ ಭರತನೊಬ್ಬನಿದ್ದಾನೆ. ನಮಗೆ ವೃಷಭನಾಥನ ಜ್ಞಾನೋದಯವಾಗಲಿ, ಬಾಹುಬಲಿಯ ವೈರಾಗ್ಯವಾಗಲಿ ಮುಖ್ಯವಾಗುವುದೇ ಇಲ್ಲ. ಅದು ಅಣ್ಣನಿರಲಿ ತಮ್ಮನಿರಲಿ ನಮಗೆ ಗೆಲ್ಲುವುದರಲ್ಲಿ ಅನುಭವಿಸುವುದರಲ್ಲಿ ಮಾತ್ರ ಆಸಕ್ತಿ ಮತ್ತು ಧಾವಂತ. ಆದುದರಿಂದಲೇ ಪ್ರಕೃತಿ ನಮ್ಮನ್ನು ಮರೆತು ಮುಂದೆ ಚಲಿಸುತ್ತಿದೆ. ಆದರೆ ಅದರೊಡನೆ ನಡೆಯಲು ನಾವು ಮಾತ್ರ ಸಿದ್ಧರಿಲ್ಲ.

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

ಪ್ರವಚನಸಾರ

# ಸತ್ಯದೃಷ್ಟಿ

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ವಸ್ತುಗಳು ಜಗತ್ತಿನಲ್ಲಿ ಹೊರಗೆ: ಆ ವಸ್ತುಗಳನ್ನು ಅನುಭವಿಸುವ ಮನಸ್ಸು ನಮ್ಮೊಳಗೆ. ವಸ್ತುಗಳಿಗೆ ಒಂದೇ ಮುಖ ಇರುವುದಿಲ್ಲ, ಹಲವಾರು ಮುಖಗಳು. ಆ ವಸ್ತುಗಳನ್ನು ಅನುಭವಿಸುವ ನಮ್ಮ ಮನದಲ್ಲಿ ಕೂಡಾ ಒಂದೇ ಭಾವ ಇರುವುದಿಲ್ಲ. ಹತ್ತು ಹಲವು ಭಾವಗಳು. ಆದ್ದರಿಂದ ಒಂದು ವಸ್ತುವನ್ನು ಇಬ್ಬರು ವ್ಯಕ್ತಿಗಳು ಒಂದೇ ರೀತಿ ನೋಡಲಾರರು. ಅಷ್ಟೇ ಏಕೆ, ಒಬ್ಬನೇ ವ್ಯಕ್ತಿ ಎರಡು ಭಿನ್ನ ಕ್ಷಣಗಳಲ್ಲಿ ಒಂದು ವಸ್ತುವನ್ನು ಒಂದೇ ರೀತಿ ನೋಡಲಾರ!

ಇನ್ನೊಂದು ಹೂವಿದೆ. ಇದಕ್ಕೆ ಹಲವು ಮುಖಗಳು ವರ್ಣ, ಆಕಾರ, ಸುಗಂಧ, ಮಕರಂದ ಇತ್ಯಾದಿ. ಆ ಹೂವನ್ನು ನೋಡುವ ಮನುಷ್ಯ ಒಮ್ಮೆ ಹೂವಿನ ಬಣ್ಣದತ್ತ ಲಕ್ಷ್ಯ ಕೊಡುತ್ತಾನೆ. ಇನ್ನೊಮ್ಮೆ ಅದರ ಆಕಾರ, ಸೌಂದರ್ಯ, ಸುಗಂಧದತ್ತ ಲಕ್ಷ್ಯ ಕೊಡುತ್ತಾನೆ. ಹೀಗಾಗಿ ಅವನಿಗೆ ಪ್ರತಿ ಸಲ ಆ ಹೂವು ಬೇರೆಬೇರೆಯಾಗಿಯೇ ತೋರುತ್ತದೆ!

ಅದೇ ಹೂವು ನಾವು ಸುಖದ ಭಾವದಲ್ಲಿದ್ದಾಗ ಒಂದು ರೀತಿಯಾಗಿ ಕಾಣುತ್ತದೆ. ದುಃಖದ ಭಾವದಲ್ಲಿದ್ದಾಗ ಇನ್ನೊಂದು ತೆರನಾಗಿ ಕಾಣುತ್ತದೆ. ಆದ್ದರಿಂದ ಒಂದು ವಸ್ತುವನ್ನು ಕುರಿತು ನಾನು ಏನು ತಿಳಿದಿರುತ್ತೇನೆಯೋ ಅದು ಪರಮ ಸತ್ಯವಲ್ಲ, ಅದು ನನ್ನ ಈಗಿನ ಒಂದು ಭಾವಕ್ಕೆ ಆ ವಸ್ತುವಿನ ಒಂದು ಮುಖಕ್ಕೆ ಸಂಬಂಧಿಸಿದ ಸೀಮಿತ ತಿಳಿವಳಿಕೆ ಅಷ್ಟೆ!

ಒಬ್ಬ ವ್ಯಕ್ತಿ ನನಗೆ ಒಮ್ಮೆ ಒಳ್ಳೆಯವನಾಗಿ ಕಾಣುತ್ತಾನೆ. ಇನ್ನೊಮ್ಮೆ ಒಳ್ಳೆಯವನಲ್ಲ ಎನಿಸುತ್ತಾನೆ. ಆದರೆ ಆ ವ್ಯಕ್ತಿಯಾಗಲೀ, ಆ ವ್ಯಕ್ತಿಯನ್ನು ನೋಡುವ ನನ್ನ ದೃಷ್ಟಿಕೋನ ಅಥವಾ ಭಾವನೆಗಳಾಗಲೀ ಯಾವುದೂ ಸ್ಥಿರವಲ್ಲ. ಆದ್ದರಿಂದ ಯಾವುದೇ ವಸ್ತು ಅಥವಾ ವ್ಯಕ್ತಿಯನ್ನು ಕುರಿತು 'ಇದಮಿತ್ಥಂ' ಇದು ಹೀಗೆ, ಇವನು ಹೀಗೆ ಎಂದು ಹೇಳಲಾಗದು!

---

**ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಪ್ರವಚನಮಾಲಿಕೆಯು ಈ ಸಂಚಿಕೆಯಿಂದ ಪ್ರಕಟವಾಗಲಿದೆ. ಅದರಂತೆ ಅವರ ಭಕ್ತಿಯೋಗ ಕೃತಿಯ ಪ್ರವಚನದ ಸಾರ ಇದಾಗಿದೆ.**

ಆದರೂ ನಾವೀ ಪ್ರಪಂಚದಲ್ಲಿ ಸ್ಥಿರತೆಯನ್ನು ಬಯಸುತ್ತೇವೆ. ನಮ್ಮ ಮನೆ–ಮಠ, ಸ್ನಾನ–ಮಾನ, ಸಿರಿ–ಸಂಪದ ಎಲ್ಲವೂ ಸ್ಥಿರವಾಗಿರಬೇಕು ಎನ್ನುತ್ತೇವೆ. ಪ್ರತ್ಯಕ್ಷ ಇಂದ್ರನಗರವೆನಿಸಿದ್ದ ಕೃಷ್ಣಪರಮಾತ್ಮನೇ ಕಟ್ಟಿದ್ದ ದ್ವಾರಕೆಯೇ ಸ್ಥಿರವಾಗಿ ಉಳಿಯಲಿಲ್ಲ. ಇನ್ನು ನಾವು ಕಟ್ಟಿದ್ದು ಉಳಿಯುವುದೇ? ಸ್ಥಿರವಾಗಿರುವುದು ನಾವು ಕಟ್ಟಿಕೊಂಡ ಪ್ರಪಂಚವಲ್ಲ, ದೇವರು ಕರುಣಿಸಿದ ಪರಮಾರ್ಥ! ಭಕ್ತಿ, ಜ್ಞಾನ, ವೈರಾಗ್ಯ ಮೊದಲಾದವುಗಳು!!

ಹೊಸದಾಗಿ ಕಟ್ಟಿಕೊಂಡ ಮನೆ ಸ್ವರ್ಗದಂತೆ ಕಾಣುತ್ತದೆ. ನಾಲ್ಕೈದು ಮಕ್ಕಳು, ಮೊಮ್ಮಕ್ಕಳು ಸಾಲ ಶೂಲವಾದಾಗ ಹಾಗೆ ಕಾಣುವುದೇ? ಮೊದಲ ಸಲ ಮನೆಗೆ ಬರುವ ಸೊಸೆಯನ್ನು 'ಗೃಹಲಕ್ಷ್ಮಿ' ಎಂದೂ, ಅಳಿಯನನ್ನು 'ದೇವರು' ಎಂದು ಕರೆಯುತ್ತಾರೆ. ಮುಂದೆಯೂ ಅವರನ್ನೆಲ್ಲ ಹಾಗೆಯೇ ಕರೆಯಲು ಸಾಧ್ಯವೇ?

ಅದರರ್ಥ ಈಗ ಆ ಮನೆಯಾಗಲಿ, ಮನೆಯೊಳಗೆ ಇರುವವರಾಗಲೀ ಬದಲಾಗಿಲ್ಲ, ಅದೇ ಮನೆ ಇದೆ. ಅದೇ ಮನುಷ್ಯರಿದ್ದಾರೆ. ಆದರೆ ಅವರ ಭಾವ ಬದಲಾಗಿದೆಯಷ್ಟೆ. ಹಿಮಾಲಯದ ದೈತ್ಯಾಕಾರದ ಬೆಟ್ಟಗಳೂ ಕೆಲವು ವರ್ಷಗಳ ಹಿಂದೆ ಇದ್ದಂತೆ ಇಂದಿಲ್ಲ. ಜಡವಾದ ಬೆಟ್ಟಗಳೇ ಬದಲಾಗುವಾಗ ನಮ್ಮ ಭಾವನೆಗಳು ಬದಲಾಗದೆ ಹೇಗೆ ಇರುತ್ತವೆ? ನಮ್ಮ ಇಂದಿನ ಭಾವನೆಗಳು, ವಿಚಾರಗಳು ಇಂದಿನಂತೆಯೇ ಮುಂದೆಯೂ ಇರುವುದೆಂದು ತಿಳಿದಿರುವುದು ಸತ್ಯದೃಷ್ಟಿ!

ನಾವು ಪ್ರೇಮಭಾವದಿಂದ ನೋಡಿದಾಗ ಈ ಜಗತ್ತೆಲ್ಲ ಸುಖಕರವಾಗಿ, ಸುಂದರವಾಗಿ ಕಾಣುತ್ತದೆ. ಭಕ್ತಿಭಾವದಿಂದ ನೋಡಿದಾಗ ಅದೇ ಜಗತ್ತು ಭಗವನ್ಮಯವಾಗಿ, ಆನಂದಮಯವಾಗಿ ಕಾಣುತ್ತದೆ.

ಒಂದು ಬೌದ್ಧ ಮಠ. ಅದರ ಹಿರಿಯರು ಒಬ್ಬ ಝುನ್ ಗುರುಗಳು. ಅವರು ವಯೋವೃದ್ಧರು, ಜ್ಞಾನವೃದ್ಧರು, ಕೈಯಲ್ಲಿ ಒಂದು ಕೋಲು ಹಿಡಿದಿದ್ದಾರೆ. ಚಳಿಗಾಲದ ಬೆಳಗಿನ ಸಮಯ. ಹಿತವಾದ ಬಿಸಿಲನ್ನು ಸವಿಯುತ್ತ ಮಠದ ಎದುರು ತಿರುಗಾಡುತ್ತಿದ್ದಾರೆ.

ಸಿರಿವಂತ ಶಿಷ್ಯನೊಬ್ಬನು ಗುರುಗಳಿಗೆ ವಂದಿಸಿ ಹೇಳಿದ, "ಪೂಜ್ಯರೇ, ನನಗೆ ಅಂತಿಮ ಸತ್ಯವನ್ನು ತಿಳಿದುಕೊಳ್ಳುವ ಹಂಬಲವಾಗಿದೆ. ತಾವು ಪರಮ ಅನುಭಾವಿಗಳು. ನನಗೆ ದಯವಿಟ್ಟು ಸತ್ಯಸಾಕ್ಷಾತ್ಕಾರದ ಮಾರ್ಗವನ್ನು ಅರುಹಿರಿ."

ಗುರುಗಳಿಗೆ ಅವನ ಸತ್ಯದ ಹಂಬಲ ಕಂಡು ಸಂತೋಷವಾಯಿತು. ತಮ್ಮ ಕೈಯೊಳಗಿದ್ದ ಕೋಲನ್ನು ಆತನಿಗೆ ಕೊಡುತ್ತಾ "ತೆಗೆದುಕೊ ಸತ್ಯವನ್ನು!" ಎಂದರು. ಶಿಷ್ಯನು ಆಶ್ಚರ್ಯಚಕಿತನಾಗಿ, "ಇದು ಕೋಲು! ಸತ್ಯವೆಲ್ಲಿ?" ಎಂದು ಕೇಳಿದ. "ಇರುವುದೇ ಸತ್ಯವೆಂದು ಗುರುತಿಸದವರಿಗೆ ಇನ್ನೆಲ್ಲಿ ಸತ್ಯಸಾಕ್ಷಾತ್ಕಾರ?" ಎಂದು ಗುರುಗಳು ನುಡಿದಾಗ ಶಿಷ್ಯನ ಕಣ್ಣುಗಳ ಮುಂದೆ ಪರಮಸತ್ಯ ಸುಳಿದಿತ್ತು!!

ನಾವು ಈ ಸತ್ಯದೃಷ್ಟಿಯಿಂದ ನೋಡಿದಾಗ ಎಲ್ಲವೂ ಸತ್ಯ–ಶಿವ–ಸುಂದರ ಮಧುರ, ಮಂಗಳಕರ! ಹಾಗೆ ನೋಡುವುದು, ಭಾವಿಸುವುದು ಭಕ್ತಿಯೋಗ !!

ಪ್ರತಿಯೊಬ್ಬ ಪುರುಷನೂ, 'ತನ್ನ ಸತಿ ಸಾವಿತ್ರಿ ಆಗಿರಬೇಕು' ಎಂದು ಬಯಸುತ್ತಾನೆ. ತಾನು ಮಾತ್ರ 'ಸತ್ಯವಾನನು' ಆಗಿರಬೇಕು ಎಂಬುದನ್ನು ಮರೆಯುತ್ತಾನೆ. ನಾವು ಸ್ವತಃ ಹೇಗಾದರೂ ಇರಬಹುದು, ಈ ಜಗತ್ತು ಮಾತ್ರ ಸದಾ ಪರಿಪೂರ್ಣವಾಗಿರಬೇಕು ಎಂದು ಬಯಸುತ್ತೇವೆ.

ಸ್ಥಿರವಾದ ಸತ್ಯ ಒಂದೇ. ನಿತ್ಯ ಪರಿಪೂರ್ಣ. ಅಸ್ಥಿರವಾದ ಜಗತ್ತು ಎಂದೂ ಪರಿಪೂರ್ಣವಾಗದು. ಅಂತೆಯೇ ಪ್ಲೇಟೋ ಹೇಳಿದ, "ಪರಿಪೂರ್ಣತೆ ಎನ್ನುವುದು ವೈಚಾರಿಕವಾದ ಆದರ್ಶ ಜಗತ್ತಿನಲ್ಲಿ ಕಾಣಬೇಕೇ ವಿನಾ ವಾಸ್ತವಿಕ ಜಗತ್ತಿನಲ್ಲಿ ಅಲ್ಲ! ಆದ್ದರಿಂದ ಈ ಜಗತ್ತು ಆದರ್ಶ ಜಗತ್ತಿನ ನೆರಳು ಮಾತ್ರ!!"

ಭಗವಂತನೇ ಈ ಪ್ರಪಂಚವನ್ನೆಲ್ಲ ಸೃಷ್ಟಿಸಿರುವನು. ಆದ್ದರಿಂದ ಈ ಪ್ರಪಂಚದಲ್ಲಿ ಬರುವ ಕಷ್ಟ–ಸುಖ, ಸೋಲು–ಗೆಲುವು, ಸ್ತುತಿ–ನಿಂದೆ ಎಲ್ಲವೂ ಆ ಭಗವಂತನ ಪ್ರಸಾದವೇ! ಈ ಭಾವದಿಂದ ನೋಡಿದಾಗ ಜಗವಿದೆಲ್ಲವೂ ಭವ್ಯ–ದಿವ್ಯ! ಅದು ಸತ್ಯದೃಷ್ಟಿ!

ಒಂದು ಮರ, ಅದರಲ್ಲೊಂದು ಕಾಗೆಯ ಮನೆ. ಅದರಲ್ಲಿ ಕೋಗಿಲೆಯೂ ಮೊಟ್ಟೆ ಇಟ್ಟಿತ್ತು. ಅದು ಮುಂದೆ ಮರಿಯಾಗಿ ಹೊರಬಂದಿತು. ವಸಂತದ ಗಾಳಿ ಬೀಸಿತು. ನಿಸರ್ಗವೆಲ್ಲ ನಲಿಯಿತು. ಕೋಗಿಲೆಯ ಹೃದಯದಿಂದ ಮೃದುಮಧುರ ಗೀತೆ ಹೊರಹೊಮ್ಮಿದವು!

ವಸಂತದ ಅರಿವಿಲ್ಲದ ಕಾಗೆಗಳು ಕೋಗಿಲೆಯ ತಲೆ ಕುಕ್ಕಿದವು. "ನಾವು ಕಾ ಕಾ ' ಎಂದು ಸಮೂಹಗಾನ ಮಾಡುತ್ತಿದ್ದೇವೆ, ಈತ 'ಕುಹೂ ಕುಹೂ ಎಂದು ಅಪಸ್ವರ ನುಡಿಯುತ್ತಿದ್ದಾನೆ. ಈತ ನಮ್ಮವನಲ್ಲ!' ಎಂದು ಕಾಗೆಗಳೆಲ್ಲ ಸೇರಿ ಕೋಗಿಲೆಯನ್ನು ಹೊರದೂಡಿದವು.

ಕೋಗಿಲೆಯು ಆಗಸದಲ್ಲಿ ಸ್ವಲ್ಪ ದೂರ ಹಾರಿತು. ವಿಶಾಲ ಮಾಮರ ಕಂಡು ಕೆಳಗಿಳಿಯಿತು. ಮನಸಾರೆ ಹಾಡಿ ತಣಿಯಿತು. ಅಲ್ಲಿದ್ದ ಗಿಳಿ ಹೇಳಿತು. "ಇಂಥ ಮಧುರ ಕಂಠದ ನಿನಗೆ ಕಾಗೆಗಳು ಇಷ್ಟೊಂದು ಕಷ್ಟ ಕೊಡಬಾರದಾಗಿತ್ತು!"

'ಕಷ್ಟವಲ್ಲ ಗೆಳೆಯನೆ ಒಳ್ಳೆಯದೇ ಆಯಿತು!' ಎಂದಿತು ಕೋಗಿಲೆ. ಆಶ್ಚರ್ಯಚಕಿತವಾದ ಗಿಳಿ ಕೇಳಿತು, "ಅದು ಹೇಗೆ?"

"ಕಾಗೆಗಳೊಂದಿಗೆ ಕೂಡಿ ಇಷ್ಟು ದಿನ 'ನಾನಾರು?' ಎಂಬುದೇ ಮರೆತಿದ್ದೆ! ಅವು ನನ್ನನ್ನು ಹೊರದೂಡಿದ್ದರಿಂದ ನಾನು ಕಾಗೆಯಲ್ಲ, ಕೋಗಿಲೆ ಎಂಬ ಅರಿವಾಯಿತು!" ಎಂದಿತು ಕೋಗಿಲೆ.

ಕೋಗಿಲೆಯ ಭಾವವೆ ಸುಭಾವ! ಅದರ ದೃಷ್ಟಿಯೇ ಸಮದೃಷ್ಟಿ, ಸತ್ಯದೃಷ್ಟಿ!!

ಈ ಸತ್ಯದೃಷ್ಟಿ, ಸತ್ಯದ ಪ್ರೇಮ, ಅದು ಭಕ್ತಿ! ಅಂಥ ಸತ್ವದೃಷ್ಟಿಯುಳ್ಳ ಸದ್ಭಕ್ತನು ಅಸ್ಥಿರ ಪ್ರಪಂಚದ ಹಿಂದೆ ಹರಿಯನು, ನಶ್ವರ ಸ್ಥಾನ–ಮಾನ, ಸಿರಿ–ಸಂಪದ, ಕೀರ್ತಿ–ವಾರ್ತೆಗಳನ್ನೆಂದೂ ಬಯಸನು!

ಜಪಾನ್ ದೇಶದಲ್ಲಿ ಒಬ್ಬ ಝುನ್ ಗುರುಗಳಿದ್ದರು. ತುಂಬಾ ವಯಸ್ಸಾಗಿತ್ತು. ಮರಣದ ಹಾಸಿಗೆಯಲ್ಲಿ ಮಲಗಿದ್ದರು. ಅವರ ಸುತ್ತಲೂ ಶಿಷ್ಯರು ನಿಂತಿದ್ದರು. ಒಬ್ಬ ಶಿಷ್ಯನು ಅವರ ಉತ್ತರಾಧಿಕಾರಿಯಾಗಬೇಕೆಂದು ಬಯಸಿದ್ದನು. ಆ ಶಿಷ್ಯನು ಕೇಳಿದ, "ಗುರುಗಳೇ, ನಿಮ್ಮ ಧರ್ಮದಂಡವು ಯಾರಿಗೆ?"

"ನಿನಗೇ! ತೆಗೆದುಕೋ" ಎಂದು ಗುರುಗಳು ಬರೀ ಕೈ ಮುಂದೆ ಮಾಡಿದರು.

"ಇದು ಬರೀ ಕೈ, ಧರ್ಮದಂಡ, ಅಧಿಕಾರದಂಡ ಎಲ್ಲಿದೆ?" ಎಂದ ಶಿಷ್ಯ.

'ಕಾಣದವರಿಗೆ ಕೊಡಲಾಗದು' ಎಂದರು ಗುರುಗಳು.

ಅಲ್ಲೇ ಇದ್ದ ಮತ್ತೊಬ್ಬ ಶಿಷ್ಯನಿಗೆ 'ತೆಗೆದುಕೋ ಈ ಧರ್ಮದಂಡ' ಎಂದು ಅದೇ ರೀತಿ ಬರಿಗೈ ಮುಂದೆ ಮಾಡಿದರು ಗುರುಗಳು.

"ಕ್ಷಮಿಸಿ ಗುರುಗಳೇ, ಈ ಧರ್ಮದಂಡದ ಅವಶ್ಯಕತೆ ನನಗಿಲ್ಲ. ಈ ಮೊದಲೇ ತಾವು ಕರುಣಿಸಿದ್ದ ಇನ್ನೊಂದು ದಂಡವನ್ನು ನಾನು ಹಿಡಿದಿದ್ದೇನೆ" ಎಂದ ಶಿಷ್ಯ.

"ನೀನು ಧನ್ಯನು!" ಎಂದು ಗುರುಗಳು ಹರ್ಷೋದ್ಗಾರದೊಂದಿಗೆ ನುಡಿದಾಗ ಅಲ್ಲಿ ಆತ್ಮಾನಂದದ ಬೆಳಕು ಚೆಲ್ಲುವರಿದಿತ್ತು!!!

ಆ ಶಿಷ್ಯ ಹಿಡಿದಿದ್ದು 'ಸತ್ಯದೃಷ್ಟಿಯ' ದಂಡ. ಅದನ್ನು ಗುರು ಕೊಡಬಾರದು. ಶಿಷ್ಯ ಪಡೆಯದೇ ಇರಬಾರದು!! ಈ ಸತ್ಯದೃಷ್ಟಿಯಿಂದ ಭಕ್ತಿಯೋಗದ ಭೂಮಿಕೆಯು ಭದ್ರವಾಗುತ್ತದೆ !!

□

;
;
;
;
!
– ಬಸವಣ್ಣ

# ಪೂರ್ಣದೃಷ್ಟಿ

**ಡಾ. ಎಂ.ಎಸ್. ನಂದೀಶ್ ಹಂಚೆ**

ಆಗತಾನೆ ಪೂಜೆ ಮುಗಿಸಿ, ಕಚೇರಿಯ ಕಾಗದಪತ್ರಗಳನ್ನು ಪರಿಶೀಲಿಸುತ್ತಿದ್ದ ಪೂಜ್ಯ ರಾಜೇಂದ್ರ ಶ್ರೀಗಳವರ ಕಣ್ಣಿಗೆ, ಮುದ್ದಾದ ಅಕ್ಷರಗಳಿಂದ ಬರೆಯಲ್ಪಟ್ಟ ಕಾಗದವೊಂದು ಕಾಣಿಸಿತು. ಕಾಗದವನ್ನು ಕೈಗೆತ್ತಿಕೊಂಡ ಶ್ರೀಗಳಿಗೆ ಇದು ಯಾರೋ ಪರಿಚಯಸ್ಥರೇ ಬರೆದ ಪತ್ರದ ಹಾಗೆ ತೋರಿತು. ಆದರೆ ಪತ್ರದ ಕೊನೆಯಲ್ಲಿ ಸಹಿ ಇರದೆ, ಕೇವಲ 'ಶ್ರೀಮಠದ ಭಕ್ತ' ಎಂದಷ್ಟೆ ನಮೂದಿಸಿತ್ತು. ಕಾಗದದ ಒಕ್ಕಣೆ ಶ್ರೀಮಠಕ್ಕೆ ಬಹಳ ಬೇಕಾಗಿದ್ದ ವ್ಯಕ್ತಿಯ ಬಗ್ಗೆ ಬಂದ ದೂರು. ಅದನ್ನು ಸಮಾಧಾನ ಮತ್ತು ಏಕಾಗ್ರತೆಯಿಂದ ಪರಿಶೀಲಿಸಿದ ಶ್ರೀಗಳು ಸ್ವಲ್ಪ ಹೊತ್ತು ಚಿಂತಾಕ್ರಾಂತರಾದರು. ಶ್ರೀಗಳ ಮುಖದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗೆರೆಯನ್ನೂ ತದೇಕಚಿತ್ತದಿಂದ ಗಮನಿಸುವ, ಶ್ರೀಗಳ ಆಪ್ತರಾಗಿದ್ದ ಕ್ಯಾತನಹಳ್ಳಿ ಪ್ರಭುಸ್ವಾಮಿಗಳು, ಶ್ರೀಗಳನ್ನು ಕುರಿತು "ಏನಾಯ್ತು ಬುದ್ಧಿ, ಆ ಪತ್ರದಲ್ಲೇನಿದೆ" ಎಂದರು. ಶ್ರೀಗಳು "ಯಾರೋ ನಮ್ಮ ಶಿವಪ್ಪನ ಬಗ್ಗೆ ಮೂಗರ್ಜಿ ಬರೆದಿದ್ದಾನೆ. ಪತ್ರವನ್ನು ಯಾರೋ ಗೊತ್ತಿರುವವರೇ ಬರೆದಂತಿದೆ. ಆದರೆ ಆತ ತನ್ನ ಹೆಸರನ್ನು ಕಾಗದದಲ್ಲಿ ಬರೆದಿಲ್ಲ, ಶ್ರೀಮಠದ ಭಕ್ತ ಎಂದಷ್ಟೇ ಬರೆದಿದ್ದಾನೆ" ಎಂದರು. ಶ್ರೀ ಪ್ರಭುಸ್ವಾಮಿಗಳು "ಅದರಲ್ಲಿ ಅಂಥದ್ದು ಏನಿದೆ ಬುದ್ಧಿ" ಎಂದರು. ಅದಕ್ಕೆ "ಶಿವಪ್ಪ ಶಾಲೆಯಲ್ಲಿ ಹಣ ದುರುಪಯೋಗಪಡಿಸಿಕೊಂಡಿದ್ದಾನೆ ಅಂತ ಬರೆದಿದೆ. ಯಾರೋ ಹೊಟ್ಟೆಕಿಚ್ಚಿಗೆ ಬರೆದಿರಬೇಕು, ಬಿಡಿ ಅದಕ್ಕೆ ಏಕೆ ತಲೆಕೆಡಿಸಿಕೊಳ್ಳಬೇಕು" ಎಂದ ಶ್ರೀಗಳ ಮಾತಿಗೆ ಪ್ರಭುಸ್ವಾಮಿಗಳು ಅಸಮ್ಮತಿ ವ್ಯಕ್ತಪಡಿಸಿದರು. "ಯಾರೋ ಬರೆದ ಪತ್ರವನ್ನು ನೆಪಮಾಡಿಕೊಂಡು ನಾವು ಬಲ್ಲವರನ್ನು ಅನುಮಾನಿಸುವುದು ಅವಮಾನಿಸಿದಂತೆಯೇ ಅಲ್ಲವೇ" ಎಂದರು. ಆದರೆ ಪ್ರಭುಸ್ವಾಮಿಗಳವರು ಮೊದಲಿನಿಂದಲೂ ಯಾರನ್ನೂ ಯಾವುದನ್ನೂ ಸುಲಭವಾಗಿ ಒಪ್ಪುತ್ತಿರಲಿಲ್ಲ. ಅವರಿಗೆ ಶ್ರೀಗಳು ಹಾಗೂ ಶ್ರೀಮಠಕ್ಕಿಂತ ಬೇರಾವುದೂ ದೊಡ್ಡದಾಗಿ ಕಾಣಿಸುತ್ತಿರಲಿಲ್ಲ. ಅವರು ಶ್ರೀಗಳಿಗೆ ಪರಿಪರಿಯಾಗಿ ವಿನಂತಿಸಿ, "ಯಾರೋ ಸುಮ್ಮನೆ ಬರೆದಿದ್ದಾರೆ ಎಂದು ನಿರ್ಲಕ್ಷಿಸುವುದು ಸರಿಯಲ್ಲ. ಶಿವಪ್ಪ ತಪ್ಪು ಮಾಡಿಲ್ಲದಿದ್ದರೆ ಏನೂ ಆಗುವುದಿಲ್ಲವಲ್ಲ. ನಾವು ಬಂದ ಪತ್ರವನ್ನು ಹೀಗೆ ನಿರ್ಲಕ್ಷ್ಯ ಮಾಡಿದರು ಎನ್ನುವುದು ಹೊರಗಿನವರಿಗೆ ಗೊತ್ತಾದರೆ, ನಾಳೆ ಮುಖ್ಯವಾದ ಅವಘಡ ಸಂಭವಿಸಿದರೂ

ಯಾರೂ ಏನನ್ನೂ ಹೇಳುವುದಿಲ್ಲ. ಆದುದರಿಂದ ಪತ್ರದ ವಿವರಗಳ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಹೇಳೋಣ" ಎಂದರು. ಒಲ್ಲದ ಮನಸ್ಸಿನಿಂದ ಶ್ರೀಗಳು ಒಪ್ಪಿದರು.

ಶಿವಪ್ಪನವರು ಶ್ರೀಮಠಕ್ಕೆ ಬಹಳ ಬೇಕಾದ ವ್ಯಕ್ತಿ. ಒಳ್ಳೆಯ ಭಾಷಾ ಅಧ್ಯಾಪಕರು. ವ್ಯಾಕರಣದಲ್ಲಿ ನಿಷ್ಣಾತರು. ಶ್ರೀಮಠದಿಂದ ಸರ್ಕಾರಕ್ಕೆ ಪತ್ರ ಬರೆಯಬೇಕಾದಾಗ ಅವರಿಗೇ ವಹಿಸಲಾಗುತ್ತಿತ್ತು. ಒಮ್ಮೆ ಅವರಿಗೆ ವಿಷಯವನ್ನು ಹೇಳಿದರೆ ಅದಕ್ಕೆ ಬೇಕಾದ ಕಾಗದವನ್ನು ಅಚ್ಚುಕಟ್ಟಾಗಿ ಸ್ವಲ್ಪವೂ ತಿದ್ದುಪಡಿಗೆ ಅವಕಾಶವಿಲ್ಲದಂತೆ ಸಿದ್ಧಪಡಿಸುತ್ತಿದ್ದರು. ಅವರ ಬಗ್ಗೆ ಶ್ರೀಗಳಿಗೆ ವಿಶೇಷ ಪ್ರೀತಿ. ಶಿವಪ್ಪನವರಿಗೂ ಶ್ರೀಗಳು ಹಾಗೂ ಶ್ರೀಮಠದ ಬಗ್ಗೆ ವಿಶೇಷ ಭಕ್ತಿ. ಆದರೆ ಅವರಿಗಿದ್ದ ಕೆಲವು ವೈಯಕ್ತಿಕ ಅಭ್ಯಾಸಗಳು ಬೆಳೆಯಬೇಕಾದಷ್ಟು ಎತ್ತರಕ್ಕೆ ಬೆಳೆಯಲು ಅವರಿಗೆ ಅವಕಾಶ ನೀಡಲಿಲ್ಲ. ಶಿವಪ್ಪನವರು ಮೈಸೂರಿನ ಒಂದು ಶಾಲೆಯ ಮುಖ್ಯಸ್ಥರು. ಅಲ್ಲಿಯೇ ಅವ್ಯವಹಾರವಾಗಿದೆ ಎಂಬುದು ಪತ್ರದ ಒಕ್ಕಣೆ. ಸಂಸ್ಥೆಯಲ್ಲಿ ಶಿಸ್ತಿಗೆ ಹೆಸರಾಗಿದ್ದ ಚನ್ನಬಸಪ್ಪ ಹಾಗೂ ಮತ್ತಿಬ್ಬರನ್ನು ಸೇರಿಸಿ ಸಮಿತಿಯೊಂದನ್ನು ರಚಿಸಿ ಪತ್ರದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಒಂದು ವಾರದಲ್ಲಿ ವರದಿ ನೀಡುವಂತೆ ಶ್ರೀಗಳು ಸೂಚಿಸಿದರು.

ಚನ್ನಬಸಪ್ಪನವರ ತಂಡ ನಾಲ್ಕು ದಿನಗಳಲ್ಲೇ ವರದಿಯನ್ನು ಸಿದ್ಧಪಡಿಸಿ ಶ್ರೀಗಳಿಗೆ ಸಲ್ಲಿಸಿತು. ಮರುದಿನ ಸಂಜೆ ಚನ್ನಬಸಪ್ಪನವರಿಗೆ ಶ್ರೀಮಠಕ್ಕೆ ಬರಬೇಕೆಂದು ಬುಲಾವ್ ಬಂತು. ಕೇವಲ ನಾಲ್ಕು ದಿನಗಳಲ್ಲಿ ಸಮಗ್ರ ವರದಿಯನ್ನು ಸಿದ್ಧಪಡಿಸಿರುವ ಬಗ್ಗೆ, ಅದರಲ್ಲೂ ಶ್ರೀಮಠ ವಿಶೇಷವಾಗಿ ನಂಬಿಕೆ ಇಟ್ಟಿದ್ದ ವ್ಯಕ್ತಿಯ ಅಪರಾಧವನ್ನು ಸಮಗ್ರವಾಗಿ ತನಿಖೆ ಮಾಡಿ ದೋಷಿಗಳೆಂದು ಕಂಡುಹಿಡಿದಿರುವ ಬಗ್ಗೆ ಅವರಿಗೆ ಅಭಿಮಾನ. ಶ್ರೀಗಳು ತನ್ನ ವರದಿಯನ್ನು ನೋಡಿ ಸಂತೋಷಪಟ್ಟು ಹೇಳಿಕಳುಹಿಸಿದ್ದಾರೆ ಎಂದು ಅವರ ಭಾವನೆ. ಸಂಜೆಯಾಗುವುದನ್ನೇ ನಿರೀಕ್ಷಿಸುತ್ತಿದ್ದ ಚನ್ನಬಸಪ್ಪನವರು ಶ್ರೀಮಠಕ್ಕೆ ತೆರಳಿದರು. ಶ್ರೀಗಳು ಚನ್ನಬಸಪ್ಪನವರು ಬಂದದ್ದನ್ನು ಅರಿತೂ ತಮ್ಮ ಕಾರ್ಯಕ್ರಮವನ್ನು ವ್ಯತ್ಯಯ ಮಾಡದೆ ಅವರ ಸರದಿ ಬಂದಾಗ ಒಳಕ್ಕೆ ಕರೆದರು. ಎಲ್ಲರನ್ನು ಹೊರಕಳುಹಿಸಿ, ವರದಿಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೀಗಳು 'ಇದೇನಿದು' ಎಂದರು. ಅಭಿಮಾನದ ಮಾತನ್ನು ನಿರೀಕ್ಷಿಸಿದ್ದ ಚನ್ನಬಸಪ್ಪನವರಿಗೆ ಶ್ರೀಗಳ ಮಾತು ಸೋಜಿಗವಾಗಿ ಕಂಡಿತು. ಸಾವರಿಸಿಕೊಂಡ ಚನ್ನಬಸಪ್ಪನವರು 'ವರದಿ ಬುದ್ಧಿ' ಎಂದರು. 'ಅದು ಸರಿ. ಆದರೆ ಇದರಲ್ಲಿ ಏನಿದೆ?' ಎಂದರು. ಬಹುಶಃ ಶ್ರೀಗಳು ತಮ್ಮ ಕಾರ್ಯದ ಒತ್ತಡದಲ್ಲಿ ವರದಿಯನ್ನು ಓದಿಲ್ಲವೆಂದು ಭಾವಿಸಿ ಚನ್ನಬಸಪ್ಪನವರು ವರದಿಯ ವಿವರಗಳನ್ನು ತಿಳಿಸಲು ಉದ್ಯುಕ್ತರಾದರು. ಆಗ ಶ್ರೀಗಳು "ನಾವು ವರದಿ ಓದಿದ್ದೇವೆ. ಅವನು ತಪ್ಪು ಮಾಡಿದ್ದಾನೆ ನಿಜ. ಆದರೆ ಅದಕ್ಕೇ ತಾವು ಶಿಕ್ಷೆಗೆ ಏನನ್ನು ಶಿಫಾರಸ್ಸು ಮಾಡಿದ್ದೀರಿ" ಎಂದರು. ಅದಕ್ಕೆ ಚನ್ನಬಸಪ್ಪನವರು "ಬುದ್ದಿ ದುರುಪಯೋಗದ ಬಾಬ್ತು ಹಣವನ್ನು ಅವರ ಸಂಬಳ ಹಾಗೂ ಅವರು ನಿವೃತ್ತರಾದ ನಂತರ ಬರುವ ಗ್ರ್ಯಾಚ್ಯುಯಿಟಿ

ಎಲ್ಲವನ್ನೂ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಫಾರಸ್ಸು ಮಾಡಿದ್ದೇವೆ. ವಾಸ್ತವವಾಗಿ ಈ ಎಲ್ಲವನ್ನು ಮಾಡಿದರೂ ಸಂಸ್ಥೆಯ ಹಣ ಪೂರ್ಣವಾಗಿ ಸಿಗುವುದಿಲ್ಲ. ಆದರೆ ಇದನ್ನು ಬಿಟ್ಟು ಬೇರೆ ದಾರಿ ಕಾಣಲಿಲ್ಲ" ಎಂದು ಅಭಿಮಾನದಿಂದ ಹೇಳಿದರು. ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡ ಶ್ರೀಗಳು "ಅಲ್ಲಪ್ಪಾ, ನೀನು ವಿದ್ಯಾವಂತ ಬುದ್ಧಿವಂತ. ಹೀಗಾ ವರದಿ ಕೊಡೋದು. ಅಲ್ಲಯ್ಯ, ಶಿವಪ್ಪ ತಪ್ಪು ಮಾಡಿದ್ದಾನೆ, ನಿಜ. ಆದರೆ ಅವನ ಮನೆಯವರು ಏನು ತಪ್ಪು ಮಾಡಿದ್ದಾರೆ, ಹೇಳು" ಎಂದರು. ಗಾಬರಿಗೊಂಡ ಚನ್ನಬಸಪ್ಪನವರು "ನಾನು ವರದಿಯಲ್ಲಿ ಅವರ ಮನೆಯವರ ಬಗ್ಗೆ ಏನೂ ಬರೆದಿಲ್ಲ ಬುದ್ದಿ" ಎಂದರು. "ದಡ್ಡ ನೀನೇನೂ ಬರೆದಿಲ್ಲ, ನಿಜ. ಆದರೆ ನಿನ್ನ ವರದಿಯ ಪ್ರಕಾರ ಕ್ರಮ ಕೈಗೊಂಡರೆ, ಅವನ ಪೂರ್ತಿ ಸಂಬಳವನ್ನು ಮುಟ್ಟುಗೋಲು ಹಾಕಿಕೊಂಡರೆ ಮನೆಯವರು ಜೀವನಕ್ಕೆ ಏನು ಮಾಡಬೇಕು. ಉಪವಾಸ ಸಾಯಬೇಕ. ಯಾರೋ ಮಾಡಿದ ತಪ್ಪಿಗೆ ಇನ್ನೊಬ್ಬರಿಗೆ ಶಿಕ್ಷೆಯಾಗಬೇಕ. ನೋಡು, ಯಾವಾಗಲೂ ನಾವು ಮಾಡದ ಕೆಲಸದಿಂದ ಅಥವಾ ಶಿಫಾರಸಿನಿಂದ ಯಾವೆಲ್ಲ ಬಗೆಯಲ್ಲಿ ಯಾರೆಲ್ಲರಿಗೆ ಸಮಸ್ಯೆ ಉಂಟಾಗುತ್ತದೆ ಎಂಬ ಪೂರ್ಣದೃಷ್ಟಿ ಇರಬೇಕು. ಮನಸ್ಸನ್ನು ಬುದ್ಧಿಯ ಕೈಗೆ ನೀಡಬಾರದು. ಹೃದಯದ ಕೈಗೆ ನೀಡಬೇಕು. ಅಲ್ಲವೆ" ಎಂದರು. ಚನ್ನಬಸಪ್ಪನವರು ಮನಸ್ಸಿನಲ್ಲೆ ಕುಸಿದುಹೋದರು. ಮುಖ ಬಾಡಿ ಅವರು ಮೌನಕ್ಕೆ ಜಾರಿದರು. ವರದಿಯನ್ನು ಚನ್ನಬಸಪ್ಪನವರ ಕೈಗಿತ್ತು "ಹೋಗು, ಬೇರೆ ವರದಿ ತಯಾರಿಸಿ ತಾ" ಎಂದರು. ವರದಿ ಪಡೆದು ಹಾಗೆಯೇ ನಿಂತಿದ್ದ ಚನ್ನಬಸಪ್ಪನವರು, "ಏನು ಮಾಡಲಿ ಬುದ್ದಿ" ಎಂದರು. "ನಿನ್ನ ಮನಸ್ಸು ಏನು ಹೇಳುತ್ತದೋ ಅದನ್ನು ಮಾಡು. ಬುದ್ದಿ ಹೇಳಿದ್ದನ್ನಲ್ಲ" ಎಂದರು. "ಆದರೆ ಶಿವಪ್ಪ ಮಾಡಿರುವುದು ತಪ್ಪಲ್ಲವೆ, ಬುದ್ದಿ" ಎಂದ ಚನ್ನಬಸಪ್ಪನವರಿಗೆ "ನೋಡು, ಅವನು ಮಾಡಿದ ತಪ್ಪನ್ನು ಗುರುತಿಸಿರುವುದೇ ಅವನಿಗೆ ನಾವು ನೀಡುವ ಶಿಕ್ಷೆ. ಅವನಿಗೆ ಕಠಿಣ ಶಿಕ್ಷೆ ನೀಡಿ ಆಗಬೇಕಾದದ್ದು ಏನೂ ಇಲ್ಲ. ತಾನು ಮಾಡಿರುವ ತಪ್ಪು ಶ್ರೀಗಳಿಗೆ ತಿಳಿಯಿತು ಎಂದರೆ ಆತನ ಮನಸ್ಸಿಗೆ ಎಷ್ಟು ನೋವಾಗಬಹುದು, ಯೋಚಿಸು. ಅದೂ ಅಲ್ಲದೆ ಎಲ್ಲರಿಗೂ ಈ ವಿಷಯ ತಿಳಿದರೆ ಅವನ ಮಾನಮರ್ಯಾದೆ ಏನಾಗಬೇಡ. ಮಾಡಿದ ತಪ್ಪು ಮನಸ್ಸಿಗೆ ಬಂದರೆ ಅದೇ ದೊಡ್ಡ ಶಿಕ್ಷೆ" ಎಂದರು. ಶ್ರೀಗಳವರ ಮಾತು ಚನ್ನಬಸಪ್ಪನವರ ಅಕ್ಷರದ ಅಹಂಕಾರದ ಹಿಂದಿನ ನಿರ್ಮಲ ಮನಸ್ಸಿನ ಕದವನ್ನು ತೆರೆಯುವಂತೆ ಮಾಡಿತು.

□

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

**ಅರ್ಥ॥** ಪಾರಿಶುದ್ಧ್ಯವಂ ಬಯಸುವವರು ತೀರ್ಥಸ್ನಾನವಂಗೈಯ್ಯಲ್ತಕ್ಕುದಲ್ಲವೆ ಆ ತೀರ್ಥಂಗಳು ಮಹಾನದಿಗಳೇ ಆಗಿರುವದರಿಂದ ಆ ನದೀನಾಮಗಳಿಗೆ ವಾಚ್ಯಳಾಗಿರುವಂತೆ ಗುಣಲೀಲಾಲಂಕಾರಮಂ ಪಡೆದ ಪಾರ್ವತಿಯು ನಮಗೆ ನಿರ್ಮಳತ್ವಮಂ ಮಾಡಲೆಂದು ಮರಳಿಯು ಶಿವಶಕ್ತಿ ಪ್ರಾರ್ಥನಾರೂಪವಾದ ಆಶೀರಾತ್ಮಕಮಂಗಳವನ್ನೇ ರಚಿಸುವನೆಂತನೆ,–

ಚಂ॥ ವಿಲಸಿತಕೃಷ್ಣವೇಣಿಸುಸರಸ್ವತಿಸನ್ನುತತುಂಗಭದ್ರೆ
ಮಂಜುಳ ಕಪಿಲಾಂಗಿಭೀಮರಥಿಸಂಗತೆಸೈಂಧವಿಧೂತಪಾಪೆ ಮಂ ॥

ಗಳರುಚಿಪೂರ್ಣಪುಷ್ಕರಣಿ ಗೋಮತಿಯೆಂದೆನಿಸಿರ್ದ
ನಿತ್ಯನಿರ್ಮಳೆ ಸಲೆ ಮಾಳ್ಕ ಹೈಮವತಿ ಸದ್ವಿಮಳತ್ವಮನೆಮ್ಮೀಳಾಪಗಂ ॥

**ಟೀಕ ॥** ಕೃಷ್ಣವೇಣಿ – ಕೃಷ್ಣಾನದಿಯು – ವೇಣೀನದಿಯು ಬೆರತಿರುವ ಪ್ರವಾಹವು – ತುಂಗಭದ್ರಾ ತುಂಗಾನದಿಯು – ಭದ್ರಾನದಿಯು ಬೆರತಪ್ರವಾಹವು – ಸರಸ್ವತಿ ಕಪಿಲೆ ಭೀಮರತಿ – ಸಿಂಧು ಪಾಪಘ್ನಿ ಪುಷ್ಕರಣಿ – ಗೋಮತಿ ಹೇಮಾವತಿ ಹೈಮವತಿಗಂಗೆ ಆವು ತೀರ್ಥನದಿಗಳ – ಹೆಸರುಗಳು ಇವೆಲ್ಲವು ಪಾರ್ವತಿಗೆ ವಿಶೇಷಣಗಳಾಗುವ ವರ್ಣನ ಬಗೆ ಹೇಗಂದರೆ – ವಿಲಸಿತ ಕೃಷ್ಣವೇಣಿ ವಿಲಸಿತ ವಿಶೇಷವಾಗಿ ಶೋಭಿಸುವ ಕೃಷ್ಣ ಕಪ್ಪುಬಣ್ಣವಾದ ವೇಣಿ ಜಡೆಯುಳ್ಳವಳು – ಸುಸರಸ್ವತಿಸನ್ನುತೆ ಸು – ಸಮೀಚೀನ ವಾದ ಸರಸ್ವತಿ ಭಾಷೆಯುಳ್ಳ – ಸತಿ ಸತ್ಪುರುಷರಿಂದ – ನುತೆ ಕೊಂಡಾಡಲ್ಪಟ್ಟವಳೇ. ತುಂಗಭದ್ರೆ ತುಂಗ ಉತ್ತಮವಾದ ಭದ್ರೆ ಮಂಗಳವುಳ್ಳವಳೆ ಮಂಜುಳ ಕಪಿಲಾಂಗಿ ಮಂಜುಳ ಮನೋಹರವಾದ – ಕಪಿಲ ಕಪಿಲವರ್ಣದೆ – ಕೆಂಪುಳ್ಳ ಹೊಂಬಣ್ಣದ ಅಂಗಿ ಮೈಯುಳ್ಳವಳೇ – ಭೀಮರಥಿಸಂಗತೆ – ಭೀಮಪಾಪಿಗಳಿಗೆ – ಭಯಂಕರ ನಾದ ರುದ್ರನೆಂಬ ರಥಿ ಪ್ರಪಂಚರಥವುಳ್ಳ ಪರಮೇಶ್ವರನೊಡನೆ – ಸಂಗತಿ ಸೇರಿದವಳೆ ಸೈಂಧವೆ ಸುಧಾಸಿಂಧುವೆಂಬ ಪಾಲ್ಗಡಲಲ್ಲಿರುವ ಪರಶಕ್ತಿಯೆ – ಧೂತಪಾಪೆ – ಕೊಡಹಲ್ಪಟ್ಟ ದುರಿತಗಳುಳ್ಳವಳೇ – ಮಂಗಳರುಚಿಪೂರ್ಣೆಮಂಗಳ – ಭದ್ರವಾದ ರುಚಿ ಕಾಂತಿಯಿಂದ ಪೂರ್ಣ ತುಂಬಿದವಳೇ – ಪುಷ್ಕರಣಿ ಪೀಠವಾಗಿಯು – ಹಸ್ತಧೃತಗಳಾಗಿಯು ತಾವರೆಗಳುಳ್ಳವಳೇ – ಅಥವಾ ಹಸ್ತದೃತವಾದ ಗಂಗೋದಕವುಳ್ಳವಳೇ – ಅಥವಾ ಸಂತಾನ ವಾದ ಆಕಾಶತತ್ವವುಳ್ಳವಳೆ – ಅಥವಾ ಆರ್ಕಪುಷ್ಕರಣಿ – ಚಂದ್ರಪುಷ್ಕರಣಿ ಅಗ್ನಿ ಪುಷ್ಕರಣಿಗಳೆಂಬ

ತೀರ್ಥಾಭಿಮಾನಿ ದೇವತೆಗಳು ಲೀಲಾಮೂರ್ತಿಗಳುಳ್ಳವಳೆ– ಗೋಮತಿ ನಿಜಸ್ಥಾನಕವಾದ – ವೇದವಾಕ್ಕುಳ್ಳವಳೇ ಅಥವಾ ರಸ್ಮಿಮಾಲಿನಿ – ಶಕ್ತಿಸ್ವರೂಪಳೇ – ಅಥವಾ ಅಶರೀರವಾಣಿ ನಿರ್ಗುಣ – ಶಿವತತ್ವದ ವಿದ್ಯಾಭಿಮಾನೀಂದ್ರಿಯಗಳುಳ್ಳ – ದಿವ್ಯಮೂರ್ತಿ ಸ್ವರೂಪಳೇ – ನಿತ್ಯನಿರ್ಮಳೆ ಸರ್ವದಾ ದೋಷವಿಲ್ಲದವಳೇ – ಎಂದೆನಿಸಿದ ಹೀಗೆನ್ನಿಸಿಕೊಂಡಿರುವ – ಹೈಮವತೀ ಹಿಮವಂತನಮಗಳು – ಎಮ್ಮೊಳು ನಮ್ಮಲ್ಲಿ ಆವಗುಂ – ಯಾವಾಗಲು ಸತಿ ಸತ್ಯವಾದ – ವಿಮಳತ್ವಮಂ ಶುದ್ಧಿಯನ್ನು ಸಲೆ ಚನ್ನಾಗಿ ಮಾಳ್ಕೆ ಮಾಡಲಿ

**ತಾತ್ವರ್ಯ** ॥ ತಾರುಣ್ಯಲಕ್ಷಣವಾದ ಕರೆಗುರುಳು, ಹೊಂಬಣ್ಣದ ಮೈ, ಭಾಗ್ಯಶ್ರೀಭರಿತತ್ವ, ಕಿರಣಮಾಲಿಕೆಗಳುಳ್ಳ ರುದ್ರಾಣಿಯೊದ, ಐಕಿಲ್ವೆಟ್ಟದಕುವರಿಯು ನಮಗೆ – ಶುದ್ಧತ್ವವನ್ನು ಸರ್ವದಾ – ದಯಮಾಡುತ್ತಿರಲೆಂದು ಕವಿಯು ಹಾರೈಸುವನು –

**ಕಥಾವಿಶೇಷಗಳು:** ಸುಸರಸ್ವತಿಗಳೆಂದರೆ, ವ್ಯಾಸಾದಿಕವಿಗಳಿಂದ ದೇವೀ ಭಾಗವತ ಕಾಳಿಕಾಪುರಾಣ ಲಲಿತಾಖಂಡ ಮಾರ್ಕ್ಕಂಡೇಯ ಪುರಾಣಾದಿಗಳಿಂದ ಸ್ತುತಿಸಲ್ಪಟ್ಟವ ಳೆಂದು–ಆಯಾ ಕಥೆಗಳಿಂದ ತಿಳಿಯಬರುತ್ತದೆ –

**ತುಂಗಭದ್ರ** ॥ಶ್ಲೋಕ॥ *ಮುಖ್ಯಂ ಶಿವಂ ಭವತಿ ಶಾಂಕರಮೇವ ತತ್ವಂ – ಗೌಣಂ ಹಿ ವಿಷ್ಣು ವಿಧಿಶಕ್ರಮುಖಾಮರೇಭ್ಯಃ –ತ್ವತ್ತೋಯತಸ್ಸಕಲಭಕ್ತ ಜನಸ್ಸಮೇತಿ – ತ್ವಂ ದೇವಿ ಶಾಂಭವಿ ತತಃ ಖಲು ತುಂಗಭದ್ರ.*

ಭದ್ರವೆಂದರೆ ಶಿವವು – ಅದರ ಮುಖ್ಯಾರ್ಥವು ಶಂಕರತತ್ವವೇ ಆಗಿದೆ ವಿಷ್ಣುಮಹೇಂದ್ರಾದಿ ದೇವತೆಗಳ ದೆಸೆಯಿಂದ – ಮನುಷ್ಯರು ಪಡೆಯುವ ಮಂಗಳವು – ಗೌಣ್ಯವೇ ಹೊರತು ಮುಖ್ಯವಲ್ಲವು. ಶರ್ವಾಣಿಯೆ ನಿನ್ನಿಂದಲಾಗುವ ಭದ್ರವು ಅದಕ್ಕಿಂತಲೂ ಉತ್ತಮವಾದ ಶಿವತತ್ವವಾದ್ದರಿಂದ ತುಂಗಭದ್ರೆಯೆಂಬ ಹೆಸರು ನಿನಗೆ ಸಲ್ಲುವದೆಂದು – ದೂರ್ವಾಸಕೃತವಾದ ದೇವಿಸ್ತುತಿಯಲ್ಲಿ ಶಿವತತ್ವಪ್ರದಾಯನಿಯೆಂಬ ನಾಮಾರ್ಥ ನಿರ್ವಚನ ಪ್ರಕರಣದಲ್ಲಿ ಹೇಳಲ್ಪಟ್ಟಿದೆ ॥ ಕಪಿಲಾನದಿಯು ಗರಳಪುರಿಕ್ಷೇತ್ರದಲ್ಲಿ ಸುಪ್ರಸಿದ್ಧವಾಗಿರುವದು

**ಸೈಂಧವಿ** ॥ ಶ್ಲೋಕ ॥ *ಸಿಂಧುದೇಶಸಮುದ್ಭೂತಾಸ್ಸೈಂಧವಾಂಪಾಲಿತಾಯಾಯಾ । ಜಯಾರ್ಥಿಶರಣಂಯಯಾತ್ತಾ ಮೈದ್ರೆಮಶ್ವವಾಹಿನಾಂ ॥*

ಸಿಂಧು ದೇಶದಲ್ಲಿ ಹುಟ್ಟಿದ ಕುದುರೆಗಳನ್ನು ಪಾಲಿಸಿದ ಅಶ್ವವಾಹಿನಿದೇವತೆಯಾಗಿ ಉಚ್ಚೈಶ್ರವವನ್ನೇರಿದ ಇಂದ್ರನಿಗೆ ಜಯವನ್ನು ಕೊಟ್ಟ ಶಿವಶಕ್ತಿಗೆ ಜಯಾರ್ಥಿಯಾದವನು ಶರಣಾಗತನಾಗಬೇಕೆಂದು ಅಶ್ವವಿದ್ಯೆಯೆಂಬ ಮಂತ್ರಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

ಶ್ಲೋಕ ॥ *ಸುಧಾಸಿಂಧುಮಣಿದ್ವೀಪೇ ಕದಂಬವನವಾಸಿನೀ । ಸೈಂಧವಿಸಾಪರಾಶಕ್ತಿಃ ಪಾತುಮಾಂಪರಮೇಶ್ವರೀ ॥*

ಸಮುದ್ರಪಾನ ಸಮಯದಲ್ಲಿ, ಅಗಸ್ತ್ಯರು ಹೇಳಿದ ಸೈಂಧವೀಸ್ತವದಲ್ಲಿದೆ. ಆದ್ದರಿಂದ ಸೈಂಧವೀಯೆಂಬ ದಿವ್ಯನಾಮವು ಶಿವಶಕ್ತಿ ಬೋಧಕವು.

**ಪುಷ್ಕರಣಿ** ॥ ಶ್ಲೋಕ ॥ *ಸೋಮಪುಷ್ಕರಣೀದೇವಿ ಸೂರ್ಯಪುಷ್ಕರಣೀ ತಥಾ। ವಹ್ನಿ ಪುಷ್ಕರಣೀಚೇತ್ರಿಕಾವೇರ್ಯಂ ತೀರ್ಥದೇವತಾಃ।* ಎಂದು ಕಾವೇರಿ ಮಾಹಾತ್ಮ್ಯದಲ್ಲಿ ಹೇಳಲ್ಪಟ್ಟಿದೆ, ಮತ್ತು ॥ ಶ್ಲೋ ॥ *ಪುಷ್ಕರಂ ಪೂಜ್ಯತೇ ವ್ಯೋಮ ವ್ಯೋಮಕೇಶೋ ಮಹೇಶ್ವರಃ । ತತ್ಸಂಗತಾಭವಾನಿತ್ಯಂದೇವಿ ಪುಷ್ಕರಣೀ ಸ್ಮೃತಾ ॥ ಇತಿ ನಾಮನಿರ್ವಚನಖಂಡೇ. ಶ್ಲೋ॥ ವಾಣೀಪದಾಸನಾಶೀನಾಲಕ್ಷ್ಮೀಃ ಕಮಲಧಾರಿಣೀ । ದೇವತೀಪರಿಚಾರಿಣೌ ತಂ ಹಿ ಪುಷ್ಕರಣೀ ಶಿವೇ ।* ಎಂದು ಕಾಮಾಕ್ಷೀ ಮಹಾತ್ಮ್ಯೆದಲ್ಲಿ. ಶ್ಲೋ ॥ *ಪುಷ್ಕರಂ ಜಲ ಮಾಖ್ಯಾತಂ ಶಿವನೇತ್ರಪಿಧಾಯಿನಿ। ಅಂಬತ್ಯತ್ಕರಪದ್ಮೋತ್ಥಂ ಗಂಗೇತಿ ಪ್ರತಿತುಭುವಿ ॥* ಮಂದರಾಚಲದಲ್ಲಿ ಲೀಲಾವಿನೋದಿನಿ ಯಾದ ಪಾರ್ವತಿಯು ಮುಕ್ಕಂಣನ ಕಂಗಳನ್ನು ಪಿಂದಣಿಂ ಬಂದು ಮುಚ್ಚಲು ಲೋಕವಂಧಕಾರಮಯವಾದುದು ಕೆಂಡಗಂಣಿಬನಬಿಸಿಯಂ ಸೈರಿಸಲಾರದೆ ಆಂಗೈಗಳಂ ತೆಗೆಯೆ ಹತ್ತು ಬೆರಳುಗಳಿಂದಲು ಶಿವನೇತ್ರೋದಕವು ದಶವಾಹಿನಿಯಾಗಿ ಹರಿದು ಲೋಕವಂ ಮುಳುಗಿಸುತ್ತಿರೆ ದೇವತಾ ಪ್ರಾರ್ಥಿತನಾ ಶಂಕರನು ಆ ಜಲವನ್ನಾಕರ್ಷಿಸಿ ಜಟಾಜೂಟದೊಳ್ಧರಿಸಿ ಗಂಗಾಧರಲೀಲೆಯಂ ಮೆರದನಾಗಿ ಗಂಗೋದಕವು ಪಾರ್ವತೀಕಮಲಸಂಜಾತವೆನಿಸಿದ್ದರಿಂದ ಪಾರ್ವತಿಗೆ ಪುಷ್ಕರಣೀಯೆಂಬ ಹೆಸರಾಯಿತೆಂದು ನವವಿಧವಾಗಿರುವ ಗಂಗಾಮಹಾತ್ಮ್ಯಗಳಲ್ಲಿಯೂ ಸ್ಕಾಂದದೊಳು ಅಂಧಕಾಸುರ ಸಂಹಾರಕಥೆಯಲ್ಲಿಯು ಹೇಳಲ್ಪಟ್ಟಿದೆ

॥ **ಗೋಮತಿ** ॥ ಶ್ಲೋಕ ॥ *ಗೋಮತಿರಶ್ಮಿ ಮಲೆಯಂ ಶಕ್ತಿ ಸ್ತೇಮಂತ್ರನಾಯಕಾ । ಸರ್ವೇಂದ್ರಿಯಾಭಿಮಾನಿನೋದೇವ್ಯೋಗೋಶಬ್ದ ಬೋಧಿತಃ । ಶಕ್ತಿರೂಪೆಶಿವಶ್ಯಾಂಗೇ ಮಂತ್ರಬೀಝುವಸಂತ್ಯಮೂಃ । ಸಾ ಶಕ್ತಿರ್ಗೋಮತಿ ಪೂಜ್ಯ ತದೇವ ಶಿವಪೂಜನಂ ।* ಎಂದು ದೇವಿರಹಸ್ಯದಲ್ಲಿ ಹೇಳಲ್ಪಟ್ಟಿದೆ ॥ ಅಥವಾ ಯಿಂಥಾ ಹೈಮವತೀ ಹಿಮಾಲಯದಲ್ಲಿ ಹುಟ್ಟಿದ ಗಂಗೆಯು – ಶುದ್ಧಿಯನ್ನುಂಟುಮಾಡಲೆಂದು – ಪೂರ್ಣಪದ್ಯಕ್ಕೆ ಗಂಗಾಪರವಾಗಿಯೂ – ಅರ್ಥ ಹೇಳಬಹುದು.

(ಮುಂದುವರಿಯುವುದು)

?

?

– ಬಸವಣ್ಣ

ವೀರಶೈವ ಅಪ್ರಕಟಿತ ಕೃತಿಮಾಲಿಕೆ

# ನೀಲಮ್ಮನ ಸ್ತೋತ್ರ

**ಡಾ. ವೈ.ಸಿ. ಭಾನುಮತಿ**

ಭಕ್ತಿಭಂಡಾರಿ ಬಸವಣ್ಣನವರ ಪತ್ನಿಯರಾದ ಗಂಗಾಂಬಿಕೆ ಮತ್ತು ನೀಲಾಂಬಿಕೆಯರಲ್ಲಿ ಸಾಹಿತ್ಯಕವಾಗಿ ಹೆಚ್ಚು ಪ್ರಸಿದ್ಧಳಾದವಳು ನೀಲಾಂಬಿಕೆ. ಈಕೆಯ ಸಾಹಿತ್ಯರಚನೆಯ ಹರವು ವಿಶಾಲವಾದುದು. ಈಕೆ ವಚನಗಳು, ಸ್ವರವಚನಗಳು ಮತ್ತು ಕಾಲಜ್ಞಾನ ವಚನಗಳನ್ನು ರಚಿಸಿದ್ದಾಳೆ. 'ಸಂಗಯ್ಯ' ಎಂಬುದು ಈಕೆಯ ಅಂಕಿತ. ಈಕೆಗೆ ಬಾಲಸಂಗಯ್ಯ ಎಂಬ ಪುತ್ರನಿದ್ದನೆಂದು, ಆತ ಅಲ್ಪಾಯುವಾಗಿದ್ದನೆಂದು ತಿಳಿದುಬರುತ್ತದೆ. ಕನ್ನಡ ಪುಸ್ತಕ ಪ್ರಾಧಿಕಾರದ "ಶಿವಶರಣೆಯರ ವಚನಸಂಪುಟ"ದಲ್ಲಿ (ಸಮಗ್ರ ವಚನ ಸಂಪುಟ ಭಾಗ 5) ಈಕೆಯ 287 ವಚನಗಳು ಪ್ರಕಟವಾಗಿವೆ. ಈಕೆ ಬಸವಣ್ಣನವರ ವಿಚಾರಪತ್ನಿಯಾಗಿದ್ದಳು. "ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿ ಯಾದೆನಯ್ಯ" ಎಂದು ತನ್ನ ವಚನದಲ್ಲಿ ಹೇಳಿಕೊಂಡಿರುವ ಈಕೆ ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶರಣ ಚಳವಳಿಗೆ ಸಾಕ್ಷಿಯಾಗಿದ್ದಳು ಮತ್ತು ಅದರಲ್ಲಿ ಮಹತ್ತರ ಪಾತ್ರ ವಹಿಸಿದ್ದಳು. ಅನಂತರದಲ್ಲಿ ತಂಗಡಗಿಯಲ್ಲಿ ಐಕ್ಯಳಾದಳೆಂದು ತಿಳಿದುಬರುತ್ತದೆ.

ನೀಲಾಂಬಿಕೆ ಲಿಂಗೈಕ್ಯಳಾದ ತರುವಾಯದಲ್ಲಿ ಕೂಡ ತನ್ನ ಅನನ್ಯ ಸಾಧನೆಯಿಂದ ಪ್ರಾತಃಸ್ಮರಣೀಯಳಾಗಿದ್ದಳು. ಹಾಗಾಗಿ ಈಕೆಯ ಅನಂತರದಲ್ಲಿ ಬಂದಂಥ ಹಲವು ಪೀಳಿಗೆಯ ವೀರಶೈವ ಕವಿಗಳು ನೀಲಮ್ಮನ ವೃತ್ತಾಂತವನ್ನು ಪ್ರಾಸಂಗಿಕವಾಗಿ, ಪ್ರತ್ಯೇಕವಾಗಿ ತಮ್ಮ ಸಾಹಿತ್ಯದಲ್ಲಿ ತಂದಿದ್ದಾರೆ. ನೀಲಮ್ಮನ ತ್ರಿವಿಧಿ, ನೀಲಮ್ಮನ ಸ್ತೋತ್ರ, ನೀಲಾಂಬಿಕಾ ಲಲಿತ ಸ್ತೋತ್ರ ಮುಂತಾದ ಕಿರು ಕೃತಿಗಳು ಈ ನಿಟ್ಟಿನಲ್ಲಿಯೆ ರಚಿತವಾದಂಥ ಕೃತಿಗಳು. ಪ್ರಸ್ತುತ ಪ್ರಕಟವಾಗುತ್ತಿರುವ "ನೀಲಮ್ಮನ ಸ್ತೋತ್ರ" ಅಥವಾ "ನೀಲಮ್ಮನ ತತ್ತ್ವಮಾಲಾ ಸ್ತೋತ್ರ"ವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಕೆ. 1543/16 ಕ್ರಮಸಂಖ್ಯೆಯ ಹಸ್ತಪ್ರತಿಯನ್ನಾಧರಿಸಿ ಸಂಪಾದಿಸಲಾಗಿದೆ. ಇದರಲ್ಲಿ 37 ವಾರ್ಧಕ ಷಟ್ಪದಿಗಳಿವೆ. ಈ ಕೃತಿಯ ಕರ್ತೃ ಸಿದ್ಧನಂಜೇಶ. ಈತನ ಕಾಲ ಕ್ರಿ.ಶ. ಸು. 1600. ಈತ ಗುರುರಾಜ ಚಾರಿತ್ರ, ರಾಘವಾಂಕ ಚರಿತೆ, ತೋಂಟದ ಸಿದ್ಧಲಿಂಗ ದೇಶಿಕನ ಭಾವರತ್ನಾಭರಣ, ಬಸವಶತಕ ಎಂಬ ನಿಡಿದಾದ ಕಾವ್ಯಗಳನ್ನು ರಚಿಸಿದ್ದು ಇವು ಪ್ರಾಚೀನ ಸಾಹಿತ್ಯಾಭ್ಯಾಸಿಗಳಿಗೆ ಚಿರಪರಿಚಿತವಾಗಿವೆ. ಕವಿ ಸಿದ್ಧನಂಜೇಶ ಪೂರ್ವೋಕ್ತ ಕೃತಿಗಳಷ್ಟೇ ಅಲ್ಲದೆ ಅದ್ಭುತ ಕಾಲಜ್ಞಾನ, ಗಂಗಮ್ಮನ ತ್ರಿವಿಧಿ, ಮುತ್ತಿನಕಂತೆ ದೇವರ ವಚನ, ದೇವಿಯ ಸ್ತೋತ್ರದ ತಾರಾವಳಿ, ನೀಲಾಂಬಿಕೆಯ ತತ್ತ್ವಮಾಲಾ

ಸ್ತೋತ್ರ ಎಂಬ ಕಿರು ಕೃತಿಗಳನ್ನೂ ರಚಿಸಿದ್ದಾನೆ. ಈ ಕುರಿತು ಪ್ರೊ. ಎಂ.ಎಂ. ಕಲಬುರ್ಗಿ ಮತ್ತು ಎಸ್. ಶಿವಣ್ಣ ಅವರು ಸಂಶೋಧಕರ ಗಮನ ಸೆಳೆದಿದ್ದಾರೆ.

ನೀಲಾಂಬಿಕೆಯ ತತ್ತ್ವಮಾಲಾ ಸ್ತೋತ್ರ, ನೀಲಲೋಚನೆಯ ತತ್ತ್ವಮಾಲಾ ಸ್ತೋತ್ರ, ನೀಲಮ್ಮನ ಸ್ತೋತ್ರ ಹೀಗೆ ಹಲವು ಹೆಸರುಗಳಿಂದ ಕರೆಯಲ್ಪಟ್ಟಿರುವ ಈ ಕೃತಿ ಸ್ತುತಿರೂಪದ ಕೃತಿಯಾದರೂ ನೀಲಾಂಬಿಕೆಯ ಇತಿವೃತ್ತದ ಬೆಳಕು ಬೀರುತ್ತದೆ. ಈಕೆಯ ತಂದೆ ಸಿದ್ಧರಸ. ಬಸವಣ್ಣನು ಬಿಜ್ಜಳನ ಬಳಿ ಪ್ರಧಾನಿಯಾಗಿದ್ದನೆಂಬ ಅಂಶಗಳನ್ನು ಕವಿ ಉಲ್ಲೇಖಿಸಿದ್ದಾನೆ. ಕವಿ ನೀಲಾಂಬಿಕೆಯನ್ನು "ಬಸವೇಶ ಮಾಡುತಿಹ ದಾಸೋಹದ ಸಕಲ ಮಾಟದೊಳು ನೀಲಮ್ಮನು" ಎಂದು ವರ್ಣಿಸಿದ್ದು ಆಕೆಯು ಬಸವಣ್ಣನ ಎಲ್ಲ ಕಾರ್ಯಗಳಿಗೆ ಹೇಗೆ ಒತ್ತಾಸೆಯಾಗಿದ್ದಳೆಂಬುದನ್ನು ಅರಿಯಬಹುದು. ಆಕೆಯ ಬಾಹ್ಯ ಚೆಲುವನ್ನೂ ಕವಿ ಚಿತ್ರಿಸಿದ್ದಾನೆ. ನೀಲಾಂಬಿಕೆಯನ್ನು ಧ್ಯಾನ ಮಾಡಿದರೆ ಪುಣ್ಯಪ್ರಾಪ್ತಿಯಾಗುವುದೆಂಬ ನಂಬಿಕೆ ಕವಿಯದು. ನೀಲಮ್ಮನ ತ್ಯಾಗಗುಣ, ಧಾರ್ಮಿಕತೆ ಇಲ್ಲಿ ಸುವ್ಯಕ್ತವಾಗಿದೆ. ಸಿದ್ಧನಂಜೇಶನ ಶೈಲಿ ಆಕರ್ಷಕವಾಗಿದ್ದು ಕೃತಿ ಓದಿಸಿಕೊಂಡು ಹೋಗುತ್ತದೆ. ಸಂಪಾದನೆಗೆ ಬಳಸಿಕೊಂಡ ಹಸ್ತಪ್ರತಿ ಕವಿಯ ಕಾಲಕ್ಕಿಂತ ಸುಮಾರು ಎರಡು ಶತಮಾನದಷ್ಟು ಈಚಿನದು. ಕೆಲವು ಪದ್ಯ ಅಪೂರ್ಣವಾಗಿದೆ. ಅಲ್ಲಲ್ಲಿ ಪಾಠಗಳು ಅಸ್ಪಷ್ಟವಾಗಿವೆ. ಛಂದೋಭಂಗವಾದ ನಿದರ್ಶನಗಳೂ ಇವೆ. ಸಾಧ್ಯವಾದಷ್ಟು ಪಾಠಗಳನ್ನು ಉತ್ತಮಗೊಳಿಸಿದೆ. ಸಂಪಾದಕರ ಊಹಾತ್ಮಕ ಪಾಠವನ್ನು ಕಂಸದಲ್ಲಿ ತೋರಿಸಿ ಹಸ್ತಪ್ರತಿ ಪಾಠವನ್ನು ಅಡಿಟಿಪ್ಪಣಿಯಲ್ಲಿ ಮೂಲ ಎಂದು ನಿರ್ದೇಶಿಸಿದೆ.

## ಕವಿ ಸಿದ್ಧನಂಜೇಶ ವಿರಚಿತ ನೀಲಮ್ಮನ ಸ್ತೋತ್ರ

ಶ್ರೀ ಗುರುವರೇಣ್ಯ ಬಸವೇಶನರ್ಧಾಂಗಿ ಶರ
ಣಾಗು ಸದಮಲ ಶಿವಧ್ಯಾನೆ ನಿಜ ಸುಜ್ಞಾನೆ
ಭೋಗಮೋಕ್ಷ ಪ್ರದಾಯಕಿ ವೀರಶೈವ ನಾಯಕಿ ಸದುತ್ತಮ ಭಾವಕೀ
ತ್ಯಾಗಗುಣಶೀಲೆ ಧರ್ಮಾಚಾರಪಾಲೆ ಮಹಿ
ಮಾಗಾರೆ ನುತಸಾರೆ ದುಃಕರ್ಮದೂರೆ ಶಿವ
ಯೋಗ ಮಾರ್ಗಪ್ರಸೂಚನೆ ನೀಲಲೋಚನೇ ನಿತ್ಯತತ್ವಾಲೋಚನೇ॥ 1 ॥

ಜ್ಞಾನಗುಣಶೃಂಗಾರೆ ಭಕ್ತಿಪಥವಿಸ್ತಾರೆ
ಮಾನೆ ನಿರ್ಮಳಗಾತ್ರೆ ಸತ್ಕವಿಕುಲ ಸ್ತೋತ್ರೆ
ದಾನಗುಣಲಕ್ಷಣೇ ಪ್ರತಿಲ[1]ಕ್ಷ[1] ವಿಚಕ್ಷಣೆ ಧವಳ ಪಂಕೇಜೇಕ್ಷಣೇ
ಭಾನುಚಿತ ಕೀರ್ತಿಯುತೆ ಸಪ್ರಭಾಮಯ ಚರಿತೆ
ಗಾನರಸಲೀನೆ ಶಿವಭಕ್ತಜನ ಸನ್ಮಾನೆ
ಮೈನಾಕಸುತೆಪ್ರತಿಬಿಂಬೆ ಜಯ ನೀಲಾಂಬೆ ಸತ್ಪ್ರಮಥಗಣಕುಟುಂಬೆ ॥ 2 ॥

---

1 ಕ್ಷಣೆಯ ಪ್ರತಿ (ಮೂ)

ನೀಲಲೋಚನೆ ಸತ್ಕೃಪಾವಲೋಚನೆಯ ಸುವಿ
ಶಾಲಲೋಚನೆಯ[2]ನ[2]ನುಕೂಲ ಲೋಚನೆಯ ಗುಣ
ಜಾಲಲೋಚನೆಯ ನಯ ಶೀಲ ಲೋಚನೆಯ ಧನಮೂಲ ಲೋಚನೆಯಮೃತ[ದ]
ಲೋಲಲೋಚನೆಯ ಹತಕಾಲಲೋಚನೆಯ ವಿಷ
ಕೀಲಲೋಚನೆಯ ವರಡಾಲಲೋಚನೆಯ ಮ
ತ್ಫಾಲಲೋಚನೆಯ ಗುರುಬಸವೇಶನರ್ಧಾಂಗಿ ನೀಲಲೋಚನೆಯ ನುತಿಪೆಂ ॥ 3 ॥

ಅಂಬೆ ಸದ್ಗುಣಗಣ ಕಡಂಬೆ ನಿಜಸೇವೆ ಪಡಿ
ಬಿಂಬೆ ಸದ್ಭಕ್ತಿಪೂದುಂಬೆ ದಾಸೋಹವಾ
ಲಂಬೆ ಶಿವ ಸದ್ಗುಣಾಡಂಬೆ ಬಸವೇಶ್ವರ ಪದಾಂಭೋಜರಾಗಲುಪ್ತ
ತ್ರ್ಯಂಬೆ ಚೆಲ್ವಿನ ಹೊನ್ನಬೊಂಬೆ ಘನವೃತ್ತ ಸುನಿ
ತಂಬೆ ಪೀಯೂಷಕುಚಸುಸ್ತೋತ್ರೆ ನಿಕುರುಂಬೆ
ಲಿಂಗಾರ್ಚನಾರಂಭೆ ಜಯಜಯತು ನೀಲಾಂಬೆ ಸಂಸ್ತುತಿ ಶ್ರುತಿವಿಡಂಬೆ ॥ 4 ॥

ಬಸವೇಶ ಪಾದಾಬ್ಜಭೃಂಗೆ ಕರುಣಾಪಾಂಗೆ
ಬಸವ ಸುಕುಮಾರ ಹಿತಕಾರೆ ಮಹಿಮಾಧಾರೆ
ಬಸವಪದ ನಖಮುಕುರ ಬಿಂಬೆ ಈಶಾರ್ಚನಾ ಕುಸುಮ ಶೋಭಿತ ತುರುಂಬೆ
ಬಸವೇಶ ಚಿತ್ತಾನುಕೂಲೆ ನತಜನಪಾಲೆ
ಬಸವ ಚರಣಾಂಭೋಜಸದನೆ ವಿಕಸಿತವದನೆ
ಬಸವೇಶ ಪದಭಕ್ತಿಸೂಚನೇ ಜಯನೀಲಲೋಚನೇ ಭವಮೋಹನೇ ।5।

ಬಸವೇಶನರ್ಧಾಂಗಿ ಸರ್ವಾಂಗಿ ಲಿಂಗಮು
ದ್ಬಸವೇಶನರಸಿ ಸದ್ಭಕ್ತೆ ರಸಮಯ ಸರಸಿ
ಬಸವದಂಡೇಶ್ವರನ ರಾಣಿ ನುತ ಕಲ್ಯಾಣಿ ಕೃಷ್ಣ ಭುಜಗೇಂದ್ರವೇಣಿ
ಬಸವದಂಡಾಧೀಶನಾತ್ಮವತಿ ಪುಣ್ಯವತಿ
ಬಸವದಂಡೇಶ್ವರ ಸಕಳತೆ ನಿರ್ಮಲಗಾತ್ರೆ
ಬಸವೇಶಪತ್ನಿ ನೀಲಾಂಬಿಕೆ ನಮೋಸ್ತುತೇ ಪ್ರತ್ಯಕ್ಷ ಜಗದಂಬಿಕೆ ॥ 6 ॥

ಬಸವಪದಕಮಲ ಮಧುಕರ ನೀಲಕುಂತಳದ
ಬಸವಪದರಜ ವಿರಾಜಿಪ ಮಿಸುಪುವಾ ನೊಸಲ
ಬಸವಮುಖಶಶಿಯ ತಿಳಿಜೊನ್ನಮಂ ಸವಿದೊಲೆವ ಲೋಚನಚಕೋರಯುಗದ
ಬಸವಪದಸ್ತುತಿ ಸುಧಾಭರಿತ ಕರ್ಣದ್ವಯದ
ಬಸವಕಲ್ಪದ್ರುಮವನಡರ್ವ ಭುಜಸುರಲತೆಯ
ಬಸವಪದಮನನ ಸಂಯುಕ್ತಚಿತ್ತದ ನೀಲಲೋಚನೆಯ ಕೀರ್ತಿಸುವೆನು ॥ 7 ॥

---

2 ವಿಷನ (ಮೂ)

ಬಸವಪದಪದ್ಮದಳ ಹೊಳೆವ ಕಾಸಾರದೊಳ
ಗೆಸೆವ ಹಂಸೆಯ ನಡೆಯನಮೃತಮಯ ನಲ್ನುಡಿಯ
ಬಸವಪದ ವಗಲದಿಯ ಬಗೆಯ ಮೊಳೆದೋರುತಿಹ ಮುದ್ದುಮೋಹನದ ನಗೆಯ
ಬಸವರಾನ ಸಿರಿಯ ಬಸವ ಪಟ್ಟದ ಕರಿಯ
ಬಸವಭಕ್ತಿಯ ನಿಧಿಯ ಬಸವ ಮುಕ್ತಿಯ ಸುಧೆಯ
ಬಸವಪರುಷದ ಕಣಿಯ ಬಸವಚಿಂತಾಮಣಿಯ ನೀಲಲೋಚನೆಯ ನುತಿಪೆಂ ॥ 8 ॥

ನೀಲಲೋಚನೆಯ ನುಡಿ ವೇದ ವಚನಕ್ಕೆ ಪಡಿ
ನೀಲಲೋಚನೆಯ ನಡೆ ಮನುಗಳಾಚರಣೆಗೆಡೆ
ನೀಲಲೋಚನೆಯ ಮತಿ ವಿಷ್ಣುರಾಜಗಪ್ರತಿ ಸಕಲ ಬುಧಜನ ಸಮ್ಮತಿ
ನೀಲಲೋಚನೆಯ ನುತಿ ಕೃತದುಃಖ ಪ್ರತತಿ
ನೀಲಲೋಚನೆಯ ಪದ ಸ್ವರ್ಗಾಪವರ್ಗಪದ
ನೀಲಲೋಚನೆಯ ದಯ ಸರ್ವಸುಖದಾಶ್ರಯಮೆಂದು ನಾಂ ಸ್ತುತಿಸುತಿಹೆನು ॥ 9 ॥

ಕೆಡುವುದ್ಯೆ ನೀಲಾಂಬಿಕೆಯ ಪದಸ್ಮರಣೆಯಿಂ
ಅಡರು ಬಡತನ ಭವಾಮಯ ರಾಜಬಾಧೆಗಳು
ಕೆಡುವುದ್ಯೆ —————————————— ॥ 10 ॥

ಕಾಲಂದಿಗೆಯ ರವಂ ಮೊಳಗೆ ನೂಪುರ ಧ್ವನಿ
ಕೇಳಿಸಲು ಮಿಸುಪ ಕಾಂಚಿಯಧಾಮ [ಗಂಟೆಗಳ]
ಸಾಲುಗಳು ಗಣಗಣಾಡಣರಿಸಲು ಶಿವಗಣದ ಪಂಕ್ತಿ ಪಂಕ್ತಿಯೊಳು ನಲಿದು
ಲೀಲೆಯಿಂ ನೀಡುತಂ ಪಾಡುತಂ ಶರಣೆನುತ
ಭಾಳಾಕ್ಷನವತಾರ ಬಸವರಾಜನ ರಾಣಿ
ನೀಲಮ್ಮ ರಾರಾಜಿಸಿದಳು ಶರಣಾಗತರ[ನೆಲ್ಲರಂ] ರಕ್ಷಿಸುತಲಿ ॥ 11 ॥

ನೀಲಮ್ಮ ನೀಲವ್ವ ನೀಲಲೋಚನೆ ತಾಯೆ
ನೀಲಕ್ಕ ನೀಲಾಂಬಿಕೆಯೆ ಬಸವನರ್ಧಾಂಗಿ
ನೀಲಲೋಚನೆ ನೀಲಕುಂತಳೆಯೆ ನೀಲಾಹಿವೇಣಿ ನತವರದ ಪಾಣಿ
ಪಾಲಿಸವ್ವಾ ತಾಯೆ ನಿನ್ನ ಮೃದುಪದಕಮಲ
ದಾಲಯದೊಳಿಟ್ಟು ಸರ್ವಜ್ಞೆ, ಸರ್ವಾಧಾರೆ
ಮೂಲೋಕದರಸ ಬಸವೇಶ್ವರನ ಮನದನ್ನೆ ಚೆನ್ನೆ ಮೋಹನದ ಕನ್ನೆ ॥ 12 ॥

ಬಸವೇಶ ಕಮಲ ಲಿಂಗಾರ್ಚನೆ[1]ಯ[1] ನೀಲಮ್ಮ
ಬಸವೇಶನಾ ಚರ[ಣ] ಪೂಜನೆಗೆ ನೀಲಮ್ಮ
ಬಸವೇಶ ಮಾಡುತಿಹ ದಾಸೋಹದಾ ಸಕಲ ಮಾಟದೊಳು ನೀಲಮ್ಮನು

---

ಹತ್ತನೆಯ ಪದ್ಯ ಅಪೂರ್ಣವಾಗಿದೆ. 1 ಯರೆ(ಮೂಲ)

ಬಸವೇಶನೆಡಬಲದ ಪಡೆ[1]ಗ[1]ನಿಸಿ ನೀಲಮ್ಮ
ಬಸವೇಶನಿಹ ಮುಖ್ಯರಿಗೆ ಸತ್ಪ್ರಮಥರಿಗೇ
ಬಸವೇಶನರ್ಧಾಂಗಿ ನೀಲಮ್ಮನಂಘ್ರಿಗೇ ತಲೆಯೂರಿ ಶರಣೆಂಬೆನು॥ 13 ॥

ಕ್ಷಿಪ್ರ ನತಜನವೆರೆದ ಸತ್ಪ್ರಮಥಗುಣಮುಖ್ಯೆ
ವಿಪ್ರಮತ ಖಂಡಿಸಲು ಸತ್ಪ್ರರವ ರೂಪದುರಿ
ತಪ್ರಣಾಶನೆ ವಾಂಛಿತಪ್ರದೆ ಮಹಾಲಿಂಗ ಸುಪ್ರಸಾದೋಪಭೋಗಿ
ಅಪ್ರತಿಮ ಬಸವರಾಜ ಪ್ರಧಾನಿಯ [2]ರಾ[2]ಣಿ
ಸುಪ್ರ[3][ಮಾ][3]ನೆ ಸುಖಪ್ರದಾಯಕೀ [ಪರ]ಶಿವಹಿ–
ತಪ್ರಯೋಜನೆ ವಿಮಲ ಚಿತ್ಪ್ರಭಾಮಯ ನೀಲಲೋಚನೆ ನಮೋ ನಮಸ್ತೇ ॥ 14 ॥

ಚಿತ್ರೆ ಸದ್ಧರ್ಮ [4]ಚಾ[4]ರಿತ್ರೆ [5]ಭ[5]ವಸಾಗರ ಬ
ಹಿತ್ರೆ ಕಾರುಣ್ಯ ರಸನೇತ್ರೆ ಸತ್ಕವಿಕುಲ
ಸ್ತೋತ್ರೆ ಶಿವಮಂತ್ರಮಯಗಾತ್ರೆ ವಿಮಲಕಾಮಕ್ಷೇತ್ರೆ ಸಿದ್ಧರಸ ಮಂತ್ರಿ
ಪುತ್ರೆ ಸಕಲಾಗಮ ಸ್ತೋತ್ರೆ ಸದ್ಭಕ್ತಿರಸ
ಪಾತ್ರೆ ಕುಜನಲತಾಲವಿತ್ರೆ ಪೊದ್ದುತ ಸತ್ಪ
ವಿತ್ರೆ ಬಸವೇಶ್ವರ ಕಳತ್ರೆ ಮತ್ಪುಣ್ಯ ಸಾವಿತ್ರೆ ನೀಲಾಂಬಿಕೆ ನಮೋ ॥ 15 ॥

ಲಿಂಗ ನಡೆ ಲಿಂಗ ನುಡಿ ಲಿಂಗ ಚೈತನ್ಯ ಘನ
ಲಿಂಗ ಸ್ವರೂಪಿ ಲಿಂಗಾಂಗಿ ಸಲ್ಲಿಂಗವತಿ
ಲಿಂಗನುತಿ ಲಿಂಗಮತಿ ಲಿಂಗಭಾಜನೆ ಮಹಾಲಿಂಗ ಭೋಗೋಪಭೋಗಿ
ಲಿಂಗಮನನಂ ಲಿಂಗಸಂಗಿ ಲಿಂಗಾಲಿಂಗಿ
ಲಿಂಗನೋಟಂ ಲಿಂಗದಾಟ ಲಿಂಗದ ಬೇಟ
ಲಿಂಗಾನುಭಾವ ಲಿಂಗದೊಡೆವೆರೆದ ನೀಲಾಂಬೆ ಲಿಂಗಪದೆ ತುಭ್ಯಂ ನಮೋ ॥ 16 ॥

ಇಂದೀವರಾಕ್ಷಿ ಮೃದು ಮಧುರ ವೀಣಾಗಾನೆ
ಚಂದ[ನ] ಸುಗಂಧೆ ಚಂಪಕಧಾಮ ಕೋಮಲೇ
ಮಂದಮದಗಜಗಮನೆ ಮಾರನಾರಾಧಿಪತಿ ವರಮಂತ್ರಮಯ ದೇವತೆ
ಇಂದುಮುಖಿ ನೀಲಕುಂತಳೆ ದಾಡಿಮದ ಬೀಜ
ದಂದವಹ ದಂತಪಂಕ್ತಿಗಳ ತಳಿರ್ವಣ್ಣದುಟಿ
ಯಿಂದೆಸೆವ ಬಸವೇಶನರ್ಧಾಂಗಿ ನೀಲಾಂಬೆ ಜಯತು ಗುಣಗಣಕದಂಬೆ ॥ 17 ॥

---

1 ನೈಗೆ ಇ (ಮೂಲ) 2 ರಾಯ (ಮೂಲ) 3 ನ್ಮ (ಮೂಲ)
4 ಸುಖ ಚಾ (ಮೂಲ) 5 ಸಾರಭ (ಮೂಲ)

ನಕ್ಷತ್ರಗಳ ಸಾಲೊ ಚರಣನಖ ಪಂಕ್ತಿಗಳೊ
ವಕ್ಷೋರುಹಗಳೊ ಪದ ಕುಟ್ಮಳಗಳೊ ಧವಳಿ
ತೇಕ್ಷಣಗಳೊ ಕಮಲದಳಗಳೊ ನಿಡಿದೂರ್ವೇಕ್ಷಣ ದಂಡಗಳೊ
ಈಕ್ಷಿಪಡೆ ಶೃಂಗಾರರಸದ ಕರುವಿಟ್ಟಿರ್ದ
ಲಕ್ಷಣದ ಪುತ್ತಳಿಯೊ ಎನಲೆಸೆದ ಎರಡನೆಯ
ಉಕ್ಷಾವತಾರ ಬಸವನ ರಾಣಿ ನೀಲಾಂಬೆ ರಕ್ಷಿಸವ್ವಾ ಕೃಪೆಯೊಳಂ ॥ 18 ॥

ಲಿಂಗಾರ್ಚನಾ ಕುಸುಮ ಮಾಲಾ ಫಲನಿಭದ
ಭ್ರಾಂಗನಿಭ ಕುಂತಳದ ಸೋರ್ಮುಡಿಯ ಸಿತಭಸ್ಮ
ದಂಗುಲಿಯ ರೇಚಿಯಿಂ ಮೆರೆವರ್ಧ ಚಂದ್ರಮನ ಮಾಳ್ಕೆಸೆವ ನುಣ್ನೊಸಲಿನ
ಹಿಂಗದನುದಿನ ಶಿವಂ ಮಂತ್ರಸಹ ಶರಣಜನ
ದಿಂಗಿತವನರಿದು ತಲೆವಾಗಿ ನುತಿಸುವ ಭಾವ
ಭಂಗಿಯಿಂದೆಸೆವ ಬಸವನ ರಾಣಿ ನೀಲಾಂಬೆ ರಕ್ಷಿಸೀಕ್ಷಿಸು ಕೃಪೆಯೊಳು ॥ 19 ॥

ಬಸವ ಕಲ್ಪದ್ರುಮವನಡರ್ದು ಪರಿವೇಷಿಸಿದ
ಮಿಸುಪ ಸುರಲತೆಯ ಕೋಮಲವನನುಕರಿಸಿ ರಾ
ಜಿಸುವ ನಳಿತೋಳ್ಗಳನು ಕಂಬುಕಂಧರದ ಗುರುಬಸವ[ನಾ] ರಾಜಕೀರ
ಒಸೆದು ಕದ್ರುಂಕುವೆಳೆ ಮಾಂದಳಿರ ಸೊಂಪರಂ
ಗಿಸುವ ಮೃದು ಚೆಂದುಟಿಯ ತೊಳಪ ಸುಲಿಪಲ್ಲ [ಚ]ವಿ
ಪಸರಿಸುವ ಮುಗುಳ್ನ[1]ಗೆ[1] ಮೊಗದ ನೀಲಾಂಬಿಕೇ ಪಾಲಿಸವ್ವಾ ಕೃಪೆಯೊಳು ॥ 20 ॥

ಸಿತಭಸಿತ ಭಾಳದೊಳು ದುಕೂಲಾಂಬರದ [ಅ]
ದ್ವಿತಮನೋಭವ ಶಸ್ತ್ರಲೋಚನದ ತೆಳ್ಪಸುರ
ನುತ ಪಯೋಧರೆ ನೀಲದಮ್ಮನಿಂ ಶಿವಭಕ್ತ ಪದಸೇವನಾರಂಭದ
ಕೃತಪುಣ್ಯದಲಿ ನೀಲಲೋಚನೆಯ ಪುಣ್ಯಪದ
ಶತಪತ್ರಮಂ ಹೃದಯದೊಳಗಿಟ್ಟು ಧ್ಯಾನಿಸುವ
ನತಿಪವಿತ್ರಂ ನೀಲಲೋಚನೆಯ ಸ್ತುತಿ ಎನಗೆ ಜೀವನಂ ಸಂಜೀವನಂ ॥ 21 ॥

ತನುಶುದ್ಧಿ ಗುರುಬಸವ ಪದಸೇವನೆಗಳಿಂದ
ಮನಶುದ್ಧಿ ಇಷ್ಟಲಿಂಗಾರ್ಚನಾರೀತಿಯಿಂ
ಧನಶುದ್ಧಿ ಜಂಗಮಾವಳಿಗೆ ನಿರ್ವಂಚಕದಿ ಬೇಡಿದರ್ಥವನೀಯಲು
ತನುಮನಧನಂಗಳಂ ಗುರುಲಿಂಗ ಜಂಗಮಕೆ
ಮನವಚನ ಕಾಯಕರಣಂಗಳೊಳು ವಂಚಿಸದೆ
ಮನ ಮೊ[ಲಿ]ದು ಸವೆದು ಸುಖಿಯಾದ ನೀಲಾಂಬಿಕೇ ರಕ್ಷಿಸವ್ವಾ ಕೃಪೆಯೊಳು ॥ 22 ॥

---

1 ಗೆಯ (ಮೂಲ)

ಬಸವ ನಲ್ವೆಸೆವ ಸದ್ಭಕ್ತಿ ಕಲ್ಪದ್ರುಮವ
ನೊಸೆದು [1]ನೋ[1]ಡೆ ಚಿಗುರಾಗೆಯ್ದು ನಲ್ನುಡಿಯಿಂದ
ಕುಸುಮಮಂ ಸೂಡಿತ್ತು ನಿಮ್ಮ ಹಸ್ತ ಸ್ಪರುಶನದೊಳು ಮಿಗೆ ಕಾಯಾದುದು
ಕುಶಲತರ ನಿನ್ನ ಸಮರಸ ಸ್ವಾದದಿಂದಮೃತ
ರಸವಿಡಿದ ಪಕ್ವಫಲವಾದುದುಂ ಶರಣರ್ಗೆ
ಎಸೆವ ಭಕ್ತಿಗೆ ನೀನೆ ಸಂಜೀವನಂ ನೀಲಲೋಚನೆ ನಮೋ ನಮಸ್ತೇ ॥ 23 ॥

ಪೊರೆವುದುಂ ಪುಣ್ಯಸ್ವರೂಪೆ ಪರಿರಕ್ಷಿಪುದು
ಶರಣಾಗತ ತ್ರಾಣಿ . . . . ಮರ್ತ್ಯ ಪದಮಂ
ಪರಿಕಿಸದೆ ಪಾಲಿಸವ್ವಾ ಪರಮಗುರು ಬಸವ ರಾಜೇಂದ್ರನಮಲರಾಣಿ
ಪರಿಭವವ ತಪ್ಪಿಸಪರಾಧಭವ ಮುದದಿ ನೀ
ಪರಮಹಿತಕಾರಿಣೀ ಕೂರ್ಮಸಂಹಾರಿಣೀ
ಸುರುಚಿರಾವಾಸಿನೀ ಮೃದುದಯಾವಾಸಿನೀ ನೀಲಲೋಚನೆ ನಮಸ್ತೇ ॥ 24 ॥

ನೀಲಲೋಚನೆಯ ಮೃದುಮಧುರ ಶಿವಗೀತೆಗಳ
ನೀಲಲೋಚನೆಯ ನಯವಿನಯ ಭಯಭಕ್ತಿಯಿಂ
ನೀಲಲೋಚನೆಯ ಸದ್ಗುಣ ಗಣಾವಳಿಗಳಂ ಲಿಂಗಾರ್ಚನಾರಂಭವಂ
ನೀಲಲೋಚನೆಯ ಸದ್ಧರ್ಮ ಚಾರಿತ್ರಮಂ
ನೀಲಲೋಚನೆಯ ಶೃಂಗಾರದಾಡಂಬರವ
ನೀಲಲೋಚನೆಯಪದ ಪದ್ಮಮಂ ಕೊಂಡಾಡಿ ಬಾ[2]ಳ್ವಾ[2]ತನೆ ಧನ್ಯನು ॥ 25 ॥

ಘನವೃತ್ತಜಘನೆ ಚಂಪಕಗಂಧಿ ಲಲಿತಾಂಗಿ
ತನುಮತದ ತಾಮರಸ ಕುಟ್ಮಳಸ್ತನಯುಗಳೆ
ಮನಸಿಜಾಸ್ತ್ರಪಹ[ರ] ವಿಶಾಲ ದೀರ್ಘಾಂಬಕೀ ವಿಲಸದುತ್ತಮ ನಾಯಕೀ
ಅನುಪಮ ಪತಿವ್ರತಾ ಸತಿಯರ ಶಿರೋರತ್ನ
ವಿನುತ ಮೃದುಮಧುರತರ ನಲ್ನುಡಿಯ ನೀಲಮ್ಮ
ಮನಮೊಲಿದು ಪಾಲಿಸಿರಿ ಸುರಕ್ಷಿಸು ತಾಯೆ[ಬಸವನ ನಾ]ಯಕಿ ॥ 26 ॥

ಬಸವರಾಜನ ಭಕ್ತೆ ಸುರಲತೆಯೆ ನೀಲಮ್ಮ
ಬಸವರಾಜನ ಶಾಂತಿರಸ ಸರಸಿನೀಲಮ್ಮ
ಬಸವತತ್ತ್ವಾನುಭವ ಸಾಗರವ ಪೆರ್ಚಿಸುವ ಚಂದ್ರಮುಖಿ ನೀಲಮ್ಮನು
ಬಸವ ಸುಜ್ಞಾನ ಜ್ಯೋತಿಗೆ ತೈಲ ನೀಲಮ್ಮ
ಬಸ[3]ವ[3] ಸತ್ಕ್ರಿಗಳಿಗೆಯಾಧಾರ ನೀಲಮ್ಮ
ಬಸವೇಶನೊಳು ಪುಷ್ಪಗಂಧದಂತೆಸೆವ ನೀಲಲೋಚನೆಗೇ ನಮಸ್ತೇ ॥ 27 ॥

---

1 ನೀ ನೋ (ಮೂಲ), 2 ಳಾ (ಮೂಲ) 3 ವ ರಾಜನ (ಮೂಲ)

ಬಿಜ್ಜಳ ಮಹೀಶನತ ಪಜ್ಜಳದ ಯುಗಳು ವಿಲ
ಸಜ್ಜಗದ ಗುರುಬಸವನೊಳಜ್ಜಿಸು ಭಕ್ತಿಯಿಂ
ಪಜ್ಜಳಿಪ ಪರಿಪೂರ್ಣ ಸಜ್ಜ್ಯೋತಿ ಸತ್ಪಥದ ಕಜ್ಜಕನುಕೂಲ ಶಕ್ತಿ
ಸಜ್ಜನರ ರಕ್ಷಿಸುವ ದುರ್ಜನರ ಶಿಕ್ಷಿಸುವ
ಮಜ್ಜನಕ ಬಸವನುರು ಸಜ್ಜೆಯರ ಮನೆಯೊಡತಿ
ಮಜ್ಜನನಿಯುರ್ವಿಯೊಳ್ ಸಜ್ಜಾತಿ ಪೆಣ್ಮಣಿಯೆ ಮಝಾಂಭಾಪೆನೆ ರಕ್ಷಿಸು ॥ 28 ॥

ಕಪ್ಪಡಿಗೆ ಬರಹೇಳಿಯಪ್ಪಣ್ಣನಂ ಕಳುಹ
ಲೊಪ್ಪದಿಂ ಮೃದುಮಧುರವಪ್ಪ ನುಡಿಯಿಂ ಕರೆಯ
ಲಪ್ಪುದುಂ ತಮಗೆ ಶಿವನಪ್ಪಣೇಯಾದಂತೆಯೊಪ್ಪರಾ ಶರಣರೆಂದು
ಕರ್ಪೂರದುರಿಯ ಬಿಡದಪ್ಪಿದೊಳು ಕರದ ಲಿಂ
ಗಪ್ಪನೊಳು ಬೆರೆದ ನಮ್ಮಪ್ಪ ಬಸವನ ರಾಣಿ
ತಪ್ಪದೇ ನಿಮ್ಮಡಿಯೊಳಿಪ್ಪ ಸೈಪಂ ಮಾಡು ಸುಪ್ಪಾಣಿ ಮುತ್ತೆ ಬಿತ್ತೆ ॥ 29 ॥

ತಾಯೆ ರಕ್ಷಿಸು ಎಂದು ಸ್ತುತಿಸುವಪ್ಪಣ್ಣಂಗೆ
ಮಾಯಾಸವಿಲ್ಲದೀಶ್ವರನೊಳೈಕ್ಯವನಿತ್ತೆ
ಮಾಯಾರಿ ಭಕ್ತರಿಷ್ಟಾರ್ಥಮಂ ಕೊಟ್ಟು ಪಾಲಿಸುವ ಕಾರುಣ್ಯರೂಪೆ
ತೋಯಜಾಂಬಕಿ ಶಿವನ ಭಕ್ತಿಗೆತ್ತಿದ ಸಿಂಧು
ರಾಯ ಬಸವೇಶ್ವರನ ಪುಣ್ಯದೊಬ್ಬುಳಿ ಮೋಕ್ಷ
ದಾಯಕೀ ನೀಲಾಂಬಕೀ ಎನಗೆ ಗತಿ ಮತಿಯು ತಾಯಿ ನೀನಲ್ಲದಿಲ್ಲ । 30 ।

ದಯ ಶೌಚ ಶೀಲ ಸದ್ಭಕ್ತಿ ಧರ್ಮಾಚಾರ
ಭಯ ಭಕ್ತಿ ಉರುಲಿಂಗ ಜಂಗಮದ ವಾಸಾರ
ನಯ ಪರಮ ಶಾಂತಿವರ ಸಾಧುಸತ್ಸಂಗಾನುಭಾವ ಮೋಕ್ಷಾಪೇಕ್ಷೆಯು
ಪ್ರಿಯವಚನ ನಿಜಪತಿವಾತಿ[1]ಥ್ಯ[1] ಸದ್ಗುಣಾ
ಶ್ರಯ ಪರಮ ಪಾಂಡಿತ್ಯಕೆಡೆಯಾದ ನೀಲಮ್ಮ
ಜಯ ಬಸವರಾಜೇಂದ್ರನರ್ಧಾಂಗಿ ಸರ್ವಾಂಗ ಲಿಂಗದುಭಯಾ ವಿಭಂಗಿ ॥ 31 ॥

ರಕ್ಷಿಸೀಕ್ಷಿಸು ಪಾಲಿಸುದ್ಧರಿಸು ಕಣಾ ಗಿಣಿ
ಉಕ್ಷಾವತಾರ ಗುರುಬಸವರಾಜನ ರಾಣಿ
ಮೋಕ್ಷದಾಯಿನಿ ವೀರಶೈವಪಥಚಾರಿಣೀ ದುಃಕರ್ಮಸಂಹಾರಿಣೀ
ಪಕ್ಷಾನುಪಕ್ಷ ವಿರಹಿತಾ ದಮರೂಪಿಣೀ
ಸಕ್ಷಮಾ ದಮೆಯುಳ್ಳ ಸದ್ಭಾವಪೂರಿಣೀ
ರಕ್ಷಾವಿಲೇಪನದ ಫಣಿಯಮಿತಭಾಷಿಣೀ ನಿಜಭಕ್ತಪರಿತೋಷಿಣೀ ॥ 32 ॥

---

1 ತ್ವ (ಮೂಲ)

ಊರ್ವಿ ತಾ ಬಿಜ್ಜಳನ ಖರ್ವರಾಜ್ಯದ ಮಂತ್ರಿ
ಸಾರ್ವಭೌಮಂ ಭಕ್ತ ಸರ್ವದುಃಖಾಪಹರ
ನಿರ್ವಿಜ್ಞಕರ ಬಸವ ಸರ್ವಜ್ಞನರ್ಧಾಂಗಿ ಪಾರ್ವತಿಯ ಚಿತ್‌ಸ್ವರೂಪೆ
ಗೀರ್ವಾಣಕವಿನುತೇ ಗೀರ್ವಾಣ ಪದದಾತೆ
ಸರ್ವೇಶ ಪದ ಮನನೆ ಗರ್ವವಿರಹಿತೆ ಮಿಸುಪ
ಕರ್ವಿಲ್ಲ ಜರೆವ ನಿಡುವುರ್ವುಗಳ ಶೋಭನದ ನೀಲಾಂಬೆ ತುಭ್ಯಾ ನಮೋ ॥ 33 ॥

ಕರ್ಮಪಾಶವ [1][ಸದೆವ][1] ಧರ್ಮಸ್ವರೂಪೆ ಸಮ
ಧರ್ಮಸಂಹರ ಭಕ್ತಿವರ್ಮಗೇ ಶರಣರೊಳು
ಪೆರ್ಮೆಯಿಂ ಪದೆದೆಸೆವ ದುರ್ಮಲವಿದೂರೆ ಘನಕರ್ಮ ಪೋಲ್ವಪ್ರನಂದೆ
ನಿರ್ಮೋಹಿ ಗಣಪದವ ಕೂರ್ಮೆಯಿಂದರ್ಚಿಸುವ
ಧರ್ಮದಿಂದ[2][ಷ್ಟ ವಿಧ][2] ನಿರ್ಮಲದ ಪದದಾಯಿ
ಕಾರ್ಮುಗಿಲ ಸೋಲಿಸುವ ಸೋರ್ಮುಡಿಯ ನೀಲಾಂಬೆ ನಿರ್ಮರಣೆ ರಕ್ಷಿಸೂದು ॥ 34 ॥

ವೀರಶೈವಾಧಾರೆ ಕಾರುಣ್ಯರಸಪೂರೆ
ಚಾರುಗುಣಗಂಭೀರೆ ಭೂತಿಮಹಿಮಾಧಾರೆ
ಸೂರಿಜನನುತ ಸಾರೆ ಕ್ರೂರಭವಸಂಹಾರೆ ವೀರವ್ರತವನಮಯೂರೆ
ಹಾರೇ ಸದಾಚಾರಪಾರೆ ಸೌಖ್ಯಾಗಾರೆ
ನೀರೆ ಚರಹಿತಕಾರೆ ಘೋರಪಾಪವಿದೂರೆ
ಧೀರೆ ಧರ್ಮಾಕಾರೆ ತೋರಮುತ್ತಿನ ಹಾರೆ ಜಯಜಯತು ನೀಲಾಂಬಿಕೆ ॥ 35 ॥

ಶರಣಾಗನಾಥ ದುಃಖ ಪ್ರಚಯ ನಾಶನೇ
ಶರಣಾಗುತಾ ಪದಮಯಪಂಚಕ ಪೋಷಣೇ
ಶರಣಸಂತಾನ ಹೃತ್ಸರಸಿಜನಿವಾಸಿನೀ ನಿಜಭೃತ್ಯಜನಪೋಷಿಣೀ
ಶರಣ ಹಿತಕರ ವಿಮಲತತ್ವ ಪ್ರಕಾಶಿನೀ
ಶರಣ ಪದಕಮಲ ವಿರಲಸದ್ಭಕ್ತ ಕೋಶನೀ
ಶರಣು ಶರಣಾರ್ಥಿ ಮದ್ಗುರು ಬಸವನರ್ಧಾಂಗಿ ನೀಲಮ್ಮ ರಕ್ಷಿಸೆಮ್ಮಾ ॥ 36 ॥

ಭಾಳಾಕ್ಷನಪರಾವತಾರ ಬಸವನ ರಾಣಿ
ನೀಲಲೋಚನೆಯ ಘನತತ್ತ್ವಮಾಲಾ ಸ್ತುತಿಯ
ಲೋಲ ಸತ್ಕವಿ ಸಿದ್ಧನಂಜೇಶ ಭಕ್ತಿಯಿಂದೊರೆದನಿಂತೀ ಸ್ತೋತ್ರಮಂ
ಆಲಸ್ಯ ಉಳಿದು ಬರದೋದಿ ಪಠಿಸುವ ಭಕ್ತ
ಜಾಲ ದೀಕ್ಷಾರ್ಥಮಂ ಕೊಟ್ಟು ರಕ್ಷಿಸುವಳುಂ
ನೀಲಾಂಬೆ ಬಸವಪದಕಮಲ ಕರಗುವ ತುಂಬೆ ಸಂಸೇವ್ಯ ಗುಣಕದಂಬೆ ॥ 37 ॥

□

1 ದೆದೆ (ಮೂ) 2 ದಚರ್ಜ ವಿಧದ (ಮೂ)

ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ

# ಬೋಗಾದಿ ಗ್ರಾಮದ ಚಾರಿತ್ರಿಕ ಅಧ್ಯಯನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಬೋಗಾದಿ, ಮೈಸೂರು ಜಿಲ್ಲೆ, ತಾಲ್ಲೂಕು, ಕಸಬಾ ಹೋಬಳಿಯ ಗ್ರಾಮವಾಗಿದೆ. ಈ ಗ್ರಾಮವನ್ನು "ಹಳ್ಳಿಬೋಗಾದಿ"ಯೆಂದು ಕರೆಯುತ್ತಾರೆ. ಮೈಸೂರಿನ ಸುತ್ತ ನಿರ್ಮಿಸಿರುವ ವರ್ತುಲ ರಸ್ತೆಯ ಪಕ್ಕದಲ್ಲಿರುವ ಗ್ರಾಮವಾಗಿದೆ.

ಹಳ್ಳಿಬೋಗಾದಿಯಲ್ಲಿ ಸಪ್ತಮಾತೃಕೆ ದೇವಾಲಯ, ನಾಗಲಿಂಗೇಶ್ವರ ಅಥವಾ ಭೋಗೇಶ್ವರ ಅಥವಾ ಈಶ್ವರ ದೇವಾಲಯ, ಉಪ್ಪರಿಗೆ ಬಸವೇಶ್ವರ ದೇವಾಲಯ, ಎಂಟು ವೀರಗಲ್ಲು-ಮಾಸ್ತಿಕಲ್ಲುಗಳು, ಒಕ್ಕೈಶಿಲ್ಪಗಳು, ಶಾಸನಗಳು ಇವೆ ಹಾಗೂ ಶಿಲಾಯುಗದ ಮಾನವನ ಅವಶೇಷಗಳು ಸಹ ದೊರಕಿವೆ.

ಸಪ್ತಮಾತೃಕೆ ದೇವಾಲಯ ಮತ್ತು ನಾಗಲಿಂಗೇಶ್ವರ ದೇವಾಲಯದ ಸುತ್ತಮುತ್ತ ಬೃಹತ್‌ಶಿಲಾಯುಗ ಸಂಸ್ಕೃತಿಯ, ಶಾತವಾಹನರ ಕಾಲದ ಕೆಂಪು ಮಿಶ್ರಿತ ಕಪ್ಪು ಬಣ್ಣದ, ಕೆಂಪು ಬಣ್ಣದ ಮಡಕೆ ಭಾಗಗಳು, ಸುಟ್ಟಮಣ್ಣಿನ ನೆಲಕ್ಕೆ ಹಾಸುವ ಹೆಂಚಿನ ಭಾಗಗಳು, ಬೊಂಬೆ ಭಾಗಗಳು, ಚುಟ್ಟದ ಭಾಗಗಳು ದೊರಕಿವೆ. ಈ ತರಹದ "ಚುಟ್ಟಗಳು" ನನ್ನ ಕ್ಷೇತ್ರಕಾರ್ಯದಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕಿನ ಕೊತ್ತೇಗಾಲದ ನೆಲೆಯಲ್ಲಿ ದೊರಕಿದ್ದು ಇವೆರಡಕ್ಕೂ ಹೋಲಿಕೆಯಿದೆ. ಈ ಅಂಶಗಳ ಆಧಾರದ ಮೇಲೆ ಇಲ್ಲಿ ಧಾರ್ಮಿಕ ಮುಖಂಡರು ನೆಲೆಸಿದ್ದು ಧಾರ್ಮಿಕ ಕೇಂದ್ರವಾಗಿರುವ ಸಾಧ್ಯತೆ ಇದೆ.  ಇದೇ ತರಹದ ಚುಟ್ಟಗಳು, ಹೆಂಚಿನ ಭಾಗಗಳು (ಟೈಲ್ಸ್ ಪೀಸ್‌ಗಳು) ಬ್ರಹ್ಮಗಿರಿ, ತಲಕಾಡು, ಬನವಾಸಿ ಉತ್ಖನನ ನೆಲೆಗಳಲ್ಲಿ ಕಂಡುಬಂದಿವೆ.

ಗ್ರಾಮದಲ್ಲಿ ಸಪ್ತಮಾತೃಕೆ ದೇವಾಲಯವನ್ನು ಜೀರ್ಣೋದ್ಧಾರ ಮಾಡುತ್ತಿದ್ದು ದೇವಾಲಯದ ಗೋಡೆಗಳಲ್ಲಿ ಶಾತವಾಹನರ ಕಾಲದ ಸುಟ್ಟಮಣ್ಣಿನ ಇಟ್ಟಿಗೆಗಳು ಕ್ಷೇತ್ರಕಾರ್ಯದಲ್ಲಿ ಬೆಳಕಿಗೆ ಬಂದಿವೆ.

**ಶಾಸನಗಳಲ್ಲಿ ಗ್ರಾಮದ ಹೆಸರಿನ ಬಗ್ಗೆ ಮಾಹಿತಿ**

ಭೋಗೇಶ್ವರ ದೇವಾಲಯದ ದಕ್ಷಿಣಕ್ಕೆ ಜಗತಿಕಟ್ಟೆಯ ಬಳಿ ನಿಲ್ಲಿಸಿರುವ ಶಾಸನವು (221 (111 ಮೈ 14) ಚೋಳ ಗಂಗದೇವರ 13ನೇ ವರ್ಷದ ಶಾಸನವಾಗಿದೆ. ಚೋಳ ಗಂಗದೇವ ಎಂದರೆ 1012-1044ರಲ್ಲಿ ಆಳುತ್ತಿದ್ದ ಒಂದನೆಯ ರಾಜೇಂದ್ರ

ಚೋಳ ಎಂದು ಗುರುತಿಸಲಾಗಿದೆ. ಶಾಸನದಲ್ಲಿ ನಾಗವಾಡಿಯ ಗೊಂಗ್ಗಿ ಗಾವುಂಡ ಬುವಾಚಾರಿಯ ಮಗನಿಗೆ ಗೊಗ್ಗಿಯಾಚಾರಿ ಎಂಬ ಪಟ್ಟವನ್ನು ಕಟ್ಟಿದ್ದ ಬಗ್ಗೆ ಉಲ್ಲೇಖವಿದೆ. ಇದಕ್ಕೆ ಸಾಕ್ಷಿಯಾಗಿ ದುಂಬರೆ–ಲಪ್ಪೊತ್ತಿಯ (ಡಂಗುರ ಬಾರಿಸುವ) ತುರುವಾಳ (ದನಕಾಯುವವ) ಚಿಯಳಯ್ಯ ದಸ್ಮಿತ್ (ಅಕ್ಕಸಾಲಿಗ) – ಚಾವುಂಡಯ್ಯ, ನಾವಿದ (ಕ್ಷೌರಿಕ) ಬಸವರಾಜು, ಕಮ್ಮಾರ–ಬೀವಾರಿ, ಅಗಸರ (ಅಸಗರ) ಭೀಮಕೆರಿಗ (ಬುಟ್ಟಿ ಹೆಣೆಯುವ)ವೊಜ, ಪೊಲೆಯರ – (ಹೊಲೆಯ) ಗೊಗ್ಗಿವಾಳರ, ಮಳೆಗೆ (ನೀರಗಂಟಿ) ಬೀಜಗನೂ ಎಂದು ಉಲ್ಲೇಖಿಸಿದೆ.

ಶಾಸನವು 11ನೇ ಶತಮಾನದ್ದಾಗಿದ್ದು ಅದರಲ್ಲಿ ಉಲ್ಲೇಖಿತವಾಗಿರುವ ನಾಗವಾಡಿ ಎಂಬ ಗ್ರಾಮ ನಾಗಲಿಂಗೇಶ್ವರದೇವರ ಹೆಸರಿನಿಂದ ಬಂದಿರಬಹುದು. ನಂತರದ ದಿನಗಳಲ್ಲಿ ನಾಗವಾಡಿಯೇ ಬೋಗಾದಿಯೆಂದು ಹೆಸರು– ನಾಗ–ಬೋಗ(ಹಾವು) ಬದಲಾಗಿರಬಹುದು. ಈ ಗ್ರಾಮದಲ್ಲಿರುವ ದೇವರನ್ನು ನಾಗಲಿಂಗೇಶ್ವರ, ಭೋಗೇಶ್ವರ ಎಂಬ ಹೆಸರುಗಳಿಂದ ಕರೆಯುತ್ತಿದ್ದು ದೇವರಿಗೆ ಇರುವ ಹೆಸರೇ ನಾಗವಾಡಿ ನಂತರ ಬೋಗಾದಿ ಎಂದು ಆಗಿದೆ ಎಂದು ಹೇಳಬಹುದು. ಅಂದರೆ ಬೋಗಾದಿಗೆ ಪ್ರಾಚೀನ ಹೆಸರು "ನಾಗವಾಡಿ" ಎಂದು ಈ ಶಾಸನದಿಂದ ತಿಳಿಯುತ್ತದೆ.

ಶಾಸನ 222 (111 ಮೈ 15) ರ ಹಳೇಬೋಗಾದಿಯ ಭೋಗೇಶ್ವರ ದೇವಾಲಯದ ದಕ್ಷಿಣ ಮೂಲೆಯಲ್ಲಿ ನಿಲ್ಲಿಸಿರುವ ಶಿಲಾಶಾಸನದಲ್ಲಿ ಮಾರಸಿಂಗವರ್ಮ ಮತ್ತು ಅಕಾಲವರ್ಷನ ಹೆಸರುಗಳಿವೆ. ಶಾಸನ ತ್ರುಟಿತವಾಗಿದ್ದು 10ನೇ ಶತಮಾನದ ಕಾಲಮಾನದ್ದಾಗಿದೆ. ಶಾಸನದಲ್ಲಿ ಉಲ್ಲೇಖಗೊಂಡಿರುವ ಅಕಾಲವರ್ಷ ರಾಷ್ಟ್ರಕೂಟರ ಅರಸನಾದ ಮುಮ್ಮಡಿ ಕೃಷ್ಣ (939–967) ಎಂದು ಗುರುತಿಸಿದ್ದರೆ, ಮಾರಸಿಂಗವರ್ಮ ಎಂದರೆ ಗಂಗರ ರಾಜನಾದ ಇಮ್ಮಡಿ ಮಾರಸಿಂಹ (963–975) ಇರಬೇಕೆಂದು ವಿದ್ವಾಂಸರು ಗುರುತಿಸಿದ್ದಾರೆ. ಶಾಸನದ ಪಾಠ ಸ್ಪಷ್ಟವಾಗಿಲ್ಲ.

**ನಾಗಲಿಂಗೇಶ್ವರ ದೇವಾಲಯ**

ದೇವಾಲಯವು ಬೋಗಾದಿಯೆಂದು ಕರೆಯುವ ಗ್ರಾಮದ ಪೂರ್ವಕ್ಕೆ ಮೈಸೂರು ನಗರದ ಸುತ್ತಲೂ ನಿರ್ಮಿಸುತ್ತಿರುವ ವರ್ತುಲ ರಸ್ತೆಯ ಪಕ್ಕದಲ್ಲಿದೆ. ಗಂಗರ, ಚೋಳರ ಕಾಲದ ಲಕ್ಷಣಗಳಿರುವ ದೇವಾಲಯವಾಗಿದ್ದು ಇದರ ಸ್ಥಾಪನೆಯ ಬಗ್ಗೆ ಯಾವುದೇ ಶಾಸನದಲ್ಲಿ ಉಲ್ಲೇಖವಿಲ್ಲ.

ದೇವಾಲಯವನ್ನು ಭೋಗೇಶ್ವರ, ನಾಗಲಿಂಗೇಶ್ವರ, ಈಶ್ವರ ಎಂಬ ಹೆಸರುಗಳಿಂದ ಕರೆಯುತ್ತಿದ್ದಾರೆ. ದೇವಾಲಯವು ಗರ್ಭಗುಡಿ, ಶುಕನಾಸಿ, ನವರಂಗದಿಂದ ನಿರ್ಮಾಣಗೊಂಡ ಸರಳ ದೇವಾಲಯವಾಗಿದೆ.

**ಗರ್ಭಗುಡಿ :** ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯು

ಪೂರ್ವ–ಪಶ್ಚಿಮ 77 ಇಂಚು, ಉತ್ತರ–ದಕ್ಷಿಣ 74 ಇಂಚು ಇದೆ. ಗರ್ಭಗುಡಿಯು ಸರಳವಾಗಿದ್ದು ಮೇಲ್ಭಾಗದಲ್ಲಿ ಸರಳವಾದ ಭುವನೇಶ್ವರಿ ಇದೆ. ಗರ್ಭಗುಡಿಯ ಮೇಲೆ ಗೋಪುರವಿದೆ. ಗರ್ಭಗುಡಿಯಲ್ಲಿ ಸದಾ ಪೂಜೆಗೊಳ್ಳುತ್ತಿರುವ ನಾಗಲಿಂಗೇಶ್ವರ ಮೂರ್ತಿಶಿಲ್ಪ ಅಲಂಕಾರಭರಿತವಾಗಿದೆ. ಭಕ್ತಾದಿಗಳು ಭಕ್ತಿಭಾವದಿಂದ ದೇವರನ್ನು ಆರಾಧಿಸುತ್ತಾರೆ. ಗರ್ಭಗುಡಿಯ ಬಾಗಿಲು 50 ಇಂಚು ಎತ್ತರ, 26 ಇಂಚು ಅಗಲವಿದ್ದು ಯಾವುದೇ ಅಲಂಕಾರವಿಲ್ಲದೆ ಸರಳವಾಗಿದೆ. ಮುಖಮಂಟಪದ ಮೇಲೆ ಅಷ್ಟದಳ ಕಮಲವಿದೆ. ಬಾಗಿಲ ತೋರಣಪಟ್ಟಿಗಳ ಮೇಲೆ ಚಿಕ್ಕ ಕಂಬಗಳಾಗಿ ಕೆತ್ತಲಾಗಿದೆ. ಗೋಡೆಗಳನ್ನು ಬಿಳಿ ಗ್ರಾನೈಟ್ ಕಲ್ಲುಗಳ ಮೇಲೆ ನಿರ್ಮಿಸಲಾಗಿದೆ.

**ಶುಕನಾಸಿ :** ದೇವಾಲಯದ ಶುಕನಾಸಿಯು ಸರಳವಾಗಿದ್ದು ಪೂರ್ವ–ಪಶ್ಚಿಮ 67 ಇಂಚು, ಉತ್ತರ–ದಕ್ಷಿಣ 82 ಇಂಚಿನಿಂದ ನಿರ್ಮಾಣಗೊಂಡಿದೆ. ಯಾವುದೇ ಶಿಲ್ಪಗಳು ಶುಕನಾಸಿಯಲ್ಲಿ ಇಲ್ಲ. ಶುಕನಾಸಿಯ ಬಾಗಿಲು 48 ಇಂಚು ಎತ್ತರ, 26 ಇಂಚು ಅಗಲವಿದೆ. ಬಾಗಿಲಿನ ಮುಖಮಂಟಪದ ಮಧ್ಯಭಾಗದಲ್ಲಿ ಅಷ್ಟದಳಗಳ ಕಮಲವಿದೆ. ಬಾಗಿಲು ಯಾವುದೇ ಶಿಲ್ಪಗಳಿಲ್ಲದೆ ಸರಳವಾಗಿದೆ.

**ನವರಂಗ\ವರಾಂಡ :** ದೇವಾಲಯದ ನವರಂಗವು 5 ಮೀಟರ್ ಪೂರ್ವ–ಪಶ್ಚಿಮವಾಗಿ, 5 ಮೀಟರ್ ಉತ್ತರ–ದಕ್ಷಿಣವಾಗಿದೆ. ನವರಂಗದ ಮಧ್ಯೆ 4 ಕಂಬಗಳಿದ್ದು, ಪ್ರತಿ ಕಂಬದ ಎತ್ತರ 64 ಇಂಚು ಇದೆ ಹಾಗೂ 12 ಅರೆಗಂಬಗಳಿವೆ. ನವರಂಗವು ಸರಳವಾಗಿದ್ದು ನವರಂಗದ ಗೋಡೆಯಲ್ಲಿ ಮೀನಿನ ಶಿಲ್ಪ, ಆಂಜನೇಯನ ಶಿಲ್ಪವಿದೆ. ಮೇಚ್ಛಾವಣಿಯ ಕೆಳಭಾಗದಲ್ಲಿ ಅಷ್ಟದಳಗಳ ಕಮಲ ಶಿಲ್ಪವಿದೆ.

ವರಾಂಡದಲ್ಲಿ ಅಂದರೆ ಶುಕನಾಸಿ ಗೋಡೆಯ ಹೊರಗಡೆ ಬಲಭಾಗದಲ್ಲಿರುವ ಗಣೇಶನ ಶಿಲ್ಪ ವಿಶೇಷವಾಗಿದೆ. ಎಡಭಾಗದಲ್ಲಿ ಶಿವಶಕ್ತಿಯ ಶಿಲ್ಪವಿದೆ. ಮೂರ್ತಿಶಿಲ್ಪವು 24 ಇಂಚು ಎತ್ತರ, 16 ಇಂಚು ಅಗಲವಿದೆ. 4 ಕೈಗಳಿಂದಿರುವ ಶಿಲ್ಪವಾಗಿದ್ದು, ಶಿಲ್ಪದ ಎಡಭಾಗದ ಕೈಗಳಲ್ಲಿ ಮುಂಭಾಗದಲ್ಲಿ ರುಂಡಕಮಂಡಲ (ದೇವಿ ಅವತಾರದಂತೆ ಇದೆ) ಹಿಂದೆ ಡಮರುಗವಿದೆ. ಬಲಗೈಯಲ್ಲಿ ಖಡ್ಗ, ತ್ರಿಶೂಲ ಹಿಡಿದಿರುವುದು, ಕಾಲಿಗೆ ರುಂಡವನ್ನು ಗೆಜ್ಜೆಯಾಗಿ ಕಟ್ಟಿಕೊಂಡಿರುವುದು ಶಿಲ್ಪದ ವಿಶೇಷ.

ವರಾಂಡದಲ್ಲಿ ಭಿನ್ನವಾಗಿರುವ ನಂದಿ ಶಿಲ್ಪವಿದೆ. ದೇವಾಲಯದ ಹೊರಗಡೆ ಮುಂಭಾಗದಲ್ಲಿ ಗರ್ಭಗುಡಿಗೆ ಎದುರಾಗಿ ಎತ್ತರದ ಮಂಟಪದ ಮೇಲೆ ನಂದಿಯ ಶಿಲ್ಪವಿದೆ. ದೇವಾಲಯದ ಹೊರಭಾಗದ ದಕ್ಷಿಣ ದಿಕ್ಕಿನ ಗೋಡೆಯ ಮೇಲೆ ದೊಡ್ಡ ಮೀನಿನ ಶಿಲ್ಪವಿದೆ.

ದೇವಾಲಯ ಇಂದು ಸ್ಥಳೀಯರ ಆಸಕ್ತಿಯಿಂದ ಸ್ವಚ್ಛವಾಗಿದೆ. ಪ್ರತಿನಿತ್ಯ ಪೂಜೆ ನಡೆಯುತ್ತಿದ್ದು ದೇವರ ಬಗ್ಗೆ ಜನರಿಗೆ ವಿಶೇಷ ನಂಬಿಕೆಯಿದೆ. ಪ್ರತಿ ಶಿವರಾತ್ರಿಯಂದು

ದೇವರುಗಳು ವಿಜೃಂಭಣೆಯಿಂದ ಅಲಂಕಾರಗೊಂಡು ವಿಶೇಷ ಪೂಜೆಗಳು ನಡೆಯುತ್ತವೆ. ಶೈಲಿಯ ಆಧಾರದ ಮೇಲೆ ಮೂಲ ದೇವಾಲಯ ಗಂಗರ ಕಾಲದಲ್ಲಿ ನಿರ್ಮಾಣ ಗೊಂಡಿರಬಹುದು. ನಂತರ ಚೋಳರು ಇದನ್ನು ವಿಸ್ತಾರಗೊಳಿಸಿರುವ ಲಕ್ಷಣಗಳು ಕಂಡುಬರುತ್ತವೆ.

**ಉಪ್ಪರಿಗೆ ಬಸಪ್ಪ ದೇವಾಲಯ**

ಉಪ್ಪರಿಗೆ ಬಸಪ್ಪ ಬೋಗಾದಿಯ ವರ್ತುಲ ರಸ್ತೆಯ ಪಕ್ಕದಲ್ಲಿದೆ. ಮಾಸ್ತ್ಯಮ್ಮ ಗುಡಿಯಿಂದ ಪೂರ್ವಕ್ಕೆ 100 ಮೀ. ದೂರದಲ್ಲಿದೆ. ಉಪ್ಪರಿಗೆ ಬಸಪ್ಪ ದೇವಾಲಯವು ಬೋಗಾದಿಯ ದಕ್ಷಿಣಕ್ಕೆ ರಾಜಾಜಿನಗರದ ಉತ್ತರಕ್ಕೆ ನಾಗಲಿಂಗೇಶ್ವರ, ಸಪ್ತಮಾತೃಕ ದೇವಾಲಯಗಳ ಪಶ್ಚಿಮಕ್ಕೆ ಇದೆ. ಗುಡಿಯ ಸುತ್ತ 4 ಕಂಬಗಳ ಮಧ್ಯೆ ಒಂದು ಕಂಬದ ಮೇಲೆ ಮಂಟಪವಿದೆ. ಮೇಲೆ ಸುಮಾರು 25 ಅಡಿ ಎತ್ತರ, 10 ಅಡಿ ಅಗಲದ ಚಚ್ಚೌಕಾಕಾರದ ಗೋಪುರವಿದೆ. ಗೋಪುರದ ಕೆಳಗೆ ಪಶ್ಚಿಮಾಭಿಮುಖವಾಗಿ ಮುಖ ಮಾಡಿರುವ ಬಸವ ಇದೆ. ಗರ್ಭಗುಡಿ ಸರಳವಾಗಿದೆ. ಬಸವನ ಗುಡಿಗೆ ಪಶ್ಚಿಮದಿಂದ ಪೂರ್ವಕ್ಕೆ 17 ಮೆಟ್ಟಿಲು ಏರಿ ಮೇಲೆ ಹೋಗಬೇಕು. ಗೋಪುರದ ಮೇಲೆ 4 ಮೂಲೆಗಳಲ್ಲಿ 4 ಮಲಗಿರುವ ಬಸವಣ್ಣನ ಮೂರ್ತಿಗಳು, 4 ದಿಕ್ಕುಗಳಲ್ಲಿ 4 ಲಿಂಗಗಳು, 4 ಲಿಂಗಗಳ ಮೇಲೆ ದಕ್ಷಿಣಕ್ಕೆ ಸರ್ಪವನ್ನು ಧರಿಸಿರುವ ಶಿವ, ಪೂರ್ವಕ್ಕೆ ಗಣೇಶ, ಪಶ್ಚಿಮಕ್ಕೆ ನಂದಿ, ಉತ್ತರಕ್ಕೆ ಮೂರು ಮುಖಗಳಿರುವ ಬ್ರಹ್ಮನ ಶಿಲ್ಪಗಳಿವೆ. ಅಲ್ಲಲ್ಲಿ ಅಷ್ಟದಳ ಹೂವುಗಳಿವೆ. ಮೇಲೆ ಶಿಖರವಿದೆ. ಈ ತರಹದ ಉಪ್ಪರಿಗೆ ಬಸಪ್ಪ ದೇವಾಲಯ ಹೆಚ್.ಡಿ. ಕೋಟೆ ತಾಲ್ಲೂಕಿನ ಕೊತ್ತೇಗಾಲದಲ್ಲಿಯೂ ಇದೆ. ಈ ದೇವಾಲಯ ಗಳ ಮೆಟ್ಟಿಲು, ಶಿಲ್ಪ, ಕಟ್ಟಡಗಳಲ್ಲಿ ಯಾವುದೇ ಬದಲಾವಣೆಯಿಲ್ಲ; ಸಾಮ್ಯತೆ ಇದೆ.

**ಸಪ್ತಮಾತೃಕೆ ದೇವಾಲಯ**

ಭಾರತದಲ್ಲಿ ಸ್ತ್ರೀದೇವತೆಗಳನ್ನು ಪೂಜಿಸುವ ರೂಢಿ ಬೆಳೆದುಬಂದಿದ್ದು, ಈ ದೇಶದ ಅನೇಕ ನದಿಗಳಿಗೆ ಗಂಗಾ, ಯಮುನಾ, ಸರಸ್ವತಿ, ಕಾವೇರಿ ಹೀಗೆ ದೇವತೆಗಳ ಹೆಸರಿಟ್ಟಿರುವುದನ್ನು ಕಾಣಬಹದು. ಕರ್ನಾಟಕದಲ್ಲಿ ಪ್ರಾಚೀನಕಾಲದಿಂದಲೂ ಪುರುಷ ಹಾಗೂ ಸ್ತ್ರೀದೇವತೆಗಳೆಲ್ಲರಿಗೂ ಗುಡಿಗೋಪುರಗಳು ನಿರ್ಮಾಣಗೊಂಡಿದ್ದರೂ ಸ್ತ್ರೀದೇವತೆಗೆ ಪ್ರತ್ಯೇಕ ದೇವಾಲಯಗಳಿರುತ್ತಿರಲಿಲ್ಲ. ಆಕೆ ಪುರುಷದೇವತೆಯ ಪರಿವಾರದೇವತೆಯಾಗಿ ಬರಬೇಕಿತ್ತು. ಈ ಪರಿವಾರದೇವತೆಗಳ ಸಾಲಿನಲ್ಲಿ ಕೆಲವು ಕಡೆ ಮಾತೃಕೆಯರು ಇರುತ್ತಿದ್ದರು. ಇವರನ್ನು ಸಾಮಾನ್ಯವಾಗಿ 'ಸಪ್ತಮಾತೃಕೆ'ಯರೆಂದು, ಮಾತೃಕೆಯರೆಂದು, ಕನ್ಯೆಯರೆಂದೂ, ಅಮ್ಮನವರೆಂದೂ ಕರೆಯುವುದು ವಾಡಿಕೆ. ಮಹಾಬಲಿಪುರದಲ್ಲಿ ಪಿಡಾರಿ ಎಂದು, ತಮಿಳು ಶಾಸನಗಳಲ್ಲಿ ಪಿಡಾರಿ ಎಂದೂ, ಚೌಡಿ ಎಂದೂ, ಚೌಡೇಶ್ವರಿ ಎಂದೂ ಕರೆಯುತ್ತಾರೆ.

'ವರಾಹ ಪುರಾಣದ' ಪ್ರಕಾರ, ಶಿವ ಅಂಧಕಾಸುರನನ್ನು ಕೊಲ್ಲುವಾಗ ಅವನ ರಕ್ತ ನೆಲಕ್ಕೆ ಬಿದ್ದು ಆ ರಕ್ತದಿಂದ ಅವನಂತಹವರೆ ಮತ್ತೆ ಮತ್ತೆ ಹುಟ್ಟುತ್ತಿದ್ದರು. ಶಿವನ ಬಾಯಿಂದ ಬಂದ ಜ್ವಾಲೆಯಿಂದ ಯೋಗೀಶ್ವರಿ ಜನಿಸಿದಳು. ಮುಂದೆ ಬೇರೆ ಬೇರೆ ದೇವತೆಗಳು ತಮ್ಮ ದೇಹದಿಂದ ಶಕ್ತಿಗಳನ್ನು ಸೃಷ್ಟಿಸಿ ಕಳುಹಿಸಿದರು. ಇವರೆಲ್ಲರ ನೆರವಿನಿಂದ ಶಿವ ಸುಲಭವಾಗಿ ಅಂಧಕಾಸುರನನ್ನು ಕೊಲ್ಲುತ್ತಾನೆ. ಇದೇ ಪುರಾಣ ಮುಂದುವರಿದು ಯೋಗೀಶ್ವರಿಯನ್ನೊಳಗೊಂಡು ಇತರ ಎಂಟು ಮಂದಿ ಶಕ್ತಿಯರನ್ನು ಹೆಸರಿಸುತ್ತದೆ.

ಬೃಹತ್‌ಸಂಹಿತೆಯ ವ್ಯಾಖ್ಯಾನಕಾರನಾದ ಉತ್ಪಲನ ಪ್ರಕಾರ ಇವರ ಸಂಖ್ಯೆ ಎಂಟು. ಬ್ರಾಹ್ಮೀ, ವೈಷ್ಣವೀ, ಮಾಹೇಶ್ವರೀ(ರೌದ್ರೀ), ಕೌಮಾರೀ, ಐಂದ್ರೀ, ಯಾಮೀ, ವಾರುಣೀ, ಕುಬೇರೀ ಎಂದು ಇವರನ್ನು ಹೆಸರಿಸಲಾಗಿದೆ. ಇವರು ಅನುಕ್ರಮವಾಗಿ ಬ್ರಾಹ್ಮೀ, ವಿಷ್ಣು, ಶಿವ, ಸ್ಕಂದ, ಇಂದ್ರ, ಯಮ, ವರುಣ, ಕುಬೇರರ ಶಕ್ತಿಯರು, ಚಾರಿತ್ರಿಕವಾಗಿ ಗುಪ್ತರು, ಕದಂಬರು, ಗಂಗರು, ಚೋಳರು, ಕಲ್ಯಾಣಿ ಚಾಲುಕ್ಯರು, ನೊಳಂಬರು, ವಿಜಯನಗರ ಸಾಮ್ರಾಜ್ಯಗಳ ಅವಧಿಯಲ್ಲಿ ಸಪ್ತಮಾತೃಕೆ ಮೂರ್ತಿಗಳು ನಿರ್ಮಾಣಗೊಂಡಿವೆ.

ಗಂಗರು ಸುಮಾರು 600 ವರ್ಷಗಳವರೆಗೆ ಕರ್ನಾಟಕದಲ್ಲಿ ಆಳಿ ತಮ್ಮದೇ ಆದ ಶೈಲಿಯ ದೇವಾಲಯಗಳನ್ನು, ಬಸದಿಗಳನ್ನು ನಿರ್ಮಿಸಿದರು. ಇವರು ಶೈವಧರ್ಮದ ಪ್ರಭಾವಕ್ಕೆ ಒಳಗಾದವರಾಗಿದ್ದರಿಂದ ಇವರ ಕಾಲದಲ್ಲಿ ಶಿವದೇವಾಲಯಗಳಲ್ಲಿ ಮಾತೃಕೆಯರು ಪರಿವಾರ ದೇವತೆಗಳಾಗಿ ಕಾಣಿಸಿಕೊಂಡು ಈ ದೇವತೆಗಳಿಗೆ ಪ್ರತ್ಯೇಕ ಮಂಟಪಗಳ ನಿರ್ಮಾಣವಾಯಿತು. ಈ ದೇವತೆಗಳು ಬಿಡಿಯಾಗಿ ಒರಟುಕಲ್ಲಿನ ಮೂರ್ತಿಗಳಾಗಿರುವುದನ್ನು ಕಾಣುತ್ತೇವೆ. ಈ ತರಹದ ವಿಗ್ರಹಗಳು ಕರ್ನಾಟಕದ ಬೆಂಗಳೂರು, ಮೈಸೂರು, ಮಂಡ್ಯ, ಕೋಲಾರ ಜಿಲ್ಲೆಗಳಲ್ಲಿಯೆ ಅಲ್ಲದೆ ತಮಿಳುನಾಡಿನ ಧರ್ಮಪುರಿ ಮತ್ತು ಸೇಲಂ ಜಿಲ್ಲೆಗಳಲ್ಲಿಯೂ ಕಾಣಸಿಗುತ್ತವೆ.

ಸಪ್ತಮಾತೃಕೆಯರು ಸಾಮಾನ್ಯವಾಗಿ ಈಶ್ವರನ ಪರಿವಾರದೇವತೆಗಳಾಗಿ ಬಂದರೂ ಕೆಲವು ಕಡೆ ಪ್ರತ್ಯೇಕ ದೇವಾಲಯಗಳನ್ನು ಹೊಂದಿರುವುದುಂಟು. ಕೋಲಾರದಲ್ಲಿ ಕೋಲಾರದಮ್ಮ, ಬೆಂಗಳೂರಿನಲ್ಲಿ ಅಣ್ಣಮ್ಮನೆಂದೂ, ಕೆಲಸೂರು, ಹುನಗುಂದ ಮತ್ತು ನರಸಮಂಗಲಗಳಲ್ಲಿ ಚೌಡೇಶ್ವರಿಯೆಂದೂ ಕರೆಯುತ್ತಾರೆ.

ಪ್ರತ್ಯೇಕವಾದ ದೇವಾಲಯಗಳನ್ನು ಬೇರೆ ಭಾಗಗಳಲ್ಲಿ ನಿರ್ಮಿಸಿರುವ ಹಾಗೆ ಬೋಗಾದಿ ಗ್ರಾಮದಲ್ಲಿ ಪ್ರತ್ಯೇಕವಾದ ಗಂಗರ ಕಾಲದ "ಸಪ್ತಮಾತೃಕೆ ದೇವಾಲಯ"ವಿದೆ. ಬೋಗಾದಿಯ ಈ ದೇವಾಲಯವು, ಮೈಸೂರು ನಗರಕ್ಕೆ ನಿರ್ಮಿಸುತ್ತಿರುವ ವರ್ತುಲ ರಸ್ತೆಯ ಪಕ್ಕದಲ್ಲಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು ಬೃಹತ್ ಗಾತ್ರದ

ಶಾತವಾಹನರ, ಗಂಗರ ಕಾಲದ ಇಟ್ಟಿಗೆಗಳನ್ನು ಬಳಸಿ ಕಟ್ಟಿದ್ದಾಗಿದೆ. ಈ ದೇವಾಲಯದ ದುಃಸ್ಥಿತಿಯನ್ನು ಗಮನಿಸಿದ ಗ್ರಾಮಸ್ಥರು ಅದನ್ನು ಜೀರ್ಣೋದ್ಧಾರ ಮಾಡುವ ದೃಷ್ಟಿಯಿಂದ ತಳಮಟ್ಟದವರೆಗೆ ತೆಗೆದು ಹೊಸ ದೇವಾಲಯವನ್ನು ನಿರ್ಮಿಸುತ್ತಿದ್ದಾರೆ. ಈ ದೇವಾಲಯದಲ್ಲಿರುವ ಸಪ್ತಮಾತೃಕೆ ಮೂರ್ತಿಶಿಲ್ಪಗಳು ವಿಶೇಷವಾಗಿದೆ.

## ದೇವಾಲಯದಲ್ಲಿರುವ ಸಪ್ತಮಾತೃಕೆ ಮೂರ್ತಿಶಿಲ್ಪಗಳು

### ಹಿರಿದೇವಮ್ಮ ಅಥವಾ ಸುಖದುಃಖಮ್ಮ

ಪ್ರಮುಖವಾಗಿ ಸಪ್ತಮಾತೃಕ ಶಿಲ್ಪಗಳ ಸಾಲಿನಲ್ಲಿ ಬರುವ ಪ್ರಮುಖ ಶಿಲ್ಪ ಯೋಗಿನಿ ಅಥವಾ ಯೋಗೀಶ್ವರಿ. ಜನರು ಈಕೆಯನ್ನು ಕೊಂತ್ಯಮ್ಮನೆಂದು, ಈ ಗ್ರಾಮದಲ್ಲಿ ಹಿರಿದೇವಮ್ಮ ಅಥವಾ ಸುಖದುಃಖಮ್ಮ ಎಂದು ಕರೆಯುತ್ತಾರೆ. ಈಕೆಯ ಶಿಲ್ಪವನ್ನು ಮಾತೃಕೆಯರ ಸಾಲಿನ ಪ್ರಾರಂಭದಲ್ಲಿಯೂ, ಕೆಲವು ಕಡೆ ಎಲ್ಲರ ಮಧ್ಯದಲ್ಲಿಯೂ ಪ್ರತಿಷ್ಠಾಪಿಸಿರುವುದುಂಟು. ಹಿರಿದೇವಮ್ಮ ಮೂರ್ತಿಶಿಲ್ಪವು 22 ಇಂಚು ಎತ್ತರ, 12 ಇಂಚು ಅಗಲವಿದೆ. ಈಕೆ ದ್ವಿಬಾಹುವುಳ್ಳವಳಾಗಿ ಪದ್ಮಾಸನದಲ್ಲಿ ಕುಳಿತು, ಒಂದು ಕೈಯನ್ನು ತೊಡೆಯ ಮೇಲಿಟ್ಟುಕೊಂಡು, ಇನ್ನೊಂದು ಕೈಯಲ್ಲಿ ಫಲವನ್ನು ಹಿಡಿದಿದ್ದಾಳೆ. ಬೈತಲೆ ತೆಗೆದು, ಸರ್ವಾಭರಣಭೂಷಿತೆಯಾಗಿ ಕಾಣುತ್ತಾಳೆ.

1. ಬ್ರಾಹ್ಮಿ, 2. ಮಹೇಶ್ವರಿ, 3. ಕೌಮಾರಿ, 4. ವೈಷ್ಣವಿ, 5. ವರಾಹಿ, 6. ಇಂದ್ರಾಣಿ, 7. ಚಾಮುಂಡಿ. ಎಲ್ಲಾ ಮೂರ್ತಿಶಿಲ್ಪಗಳ ಎಡ ಮತ್ತು ಬಲಕೈ ತೋಳಬಂದಿಗಳಿಗೆ ಹಾವಿನ ಹೆಡೆಯಿರುವ ತೋಳಬಂದಿಗಳಿವೆ.

ಈ ಮಾತೃಕೆಯರನ್ನು "ತಂತ್ರ ರಾಜತಂತ್ರ"ದಲ್ಲಿ ಒಂದೊಂದು ಗುಣದ ಸಂಕೇತವಾಗಿ ಕರೆಯಲಾಗಿದೆ. ಈ ಗ್ರಂಥದ ಪ್ರಕಾರ ಬ್ರಾಹ್ಮಿಯು ಕಾಮ, ಮಹೇಶ್ವರಿಯು ಕ್ರೋಧ, ಕೌಮಾರಿಯು ಲೋಭ, ವೈಷ್ಣವಿಯು ಮೋಹ, ವರಾಹಿಯು ಮದ, ಇಂದ್ರಾಣಿಯು ಮಾತ್ಸರ್ಯ, ಚಾಮುಂಡಿಯು ಪಾಪ ಹಾಗೂ ಮಹಾಲಕ್ಷ್ಮಿಯು ಪುಣ್ಯವನ್ನು ಸೂಚಿಸುವರೆಂದು ಹೇಳುತ್ತಾರೆ.

ಒಟ್ಟಾರೆ, ಬೋಗಾದಿ ಗ್ರಾಮವು ಶಿಲಾಯುಗದ ಕಾಲದಿಂದ ಹಿಡಿದು ಇಲ್ಲಿಯವರೆಗೂ ಜನವಸತಿಯಿರುವ ಗ್ರಾಮವಾಗಿದೆ. ಗ್ರಾಮಗಳ ಜನರು ಭಯಭಕ್ತಿಯಿಂದ ದೇವಾಲಯಗಳನ್ನು, ವೀರಗಲ್ಲು, ಮಾಸ್ತಿಗಲ್ಲು, ಒಕ್ಕೈಶಿಲ್ಪಗಳನ್ನು ಉಳಿಸಿಕೊಂಡು ಪೂಜಿಸುತ್ತಿದ್ದಾರೆ. ಪ್ರಾಚೀನ ದೇವಾಲಯವಾದ ಸಪ್ತಮಾತೃಕೆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಹೊಸ ದೇವಾಲಯವನ್ನು ನಿರ್ಮಿಸುತ್ತಿರುವ ಗ್ರಾಮದ ಜನತೆಯು ದೈವಭಕ್ತಿಯ ಜೊತೆಗೆ ಗತಇತಿಹಾಸವನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುವುದು ಶ್ಲಾಘನೀಯ.

□

# ಶರಣರ ಮಹಿಳಾಪರ ಚಿಂತನೆಗಳು

ಡಾ. ಆರ್.ಬಿ. ಚಿಲುಮಿ

ಹನ್ನೆರಡನೆಯ ಶತಮಾನವು ವಚನಸಾಹಿತ್ಯದ ಹುಟ್ಟು ಹಾಗೂ ಬೆಳವಣಿಗೆಯ ಪರ್ವಕಾಲ. ವಿಶ್ವಸಾಹಿತ್ಯದಲ್ಲಿಯೇ ಅಗ್ರಪಟ್ಟವನ್ನು ಪಡೆದ ಸಾಹಿತ್ಯ. ವಚನ ಸಾಹಿತ್ಯ ಒಂದು ಜ್ಞಾನದ ಖಣಿ. ಕನ್ನಡಕ್ಕಂತೂ ವಿಶೇಷವಾದ ಸಾಹಿತ್ಯರೂಪವಾಗಿದೆ. ವಿಶ್ವ ಸಾಹಿತ್ಯದಲ್ಲಿಯೇ ವಿಶಿಷ್ಟವೆನ್ನಬಹುದಾದ ವಚನಸಾಹಿತ್ಯ ಪೂರ್ಣವಾಗಿ ಕನ್ನಡದ ಆಸ್ತಿ ಮತ್ತು ಅದ್ವಿತೀಯ ಕೊಡುಗೆಯಾಗಿದೆ. ಇಂತಹ ವಚನಗಳನ್ನು ರಚಿಸಿದವರು ನುಡಿದಂತೆ ನಡೆದ ಧೀರರಾದ ಬಸವಾದಿ ಶಿವಶರಣರು. ವಚನಸಾಹಿತ್ಯದಲ್ಲಿ ಸಾರ್ವಕಾಲಿಕ ಮಾನವಧರ್ಮ ಮೂಡಿಬಂದಿದೆ. ಮಾನವನು ಏರಬೇಕಾದ ಅತ್ಯುನ್ನತ ಗುರಿಯೂ ಅದರಲ್ಲಿದೆ. ಪುರುಷರಂತೆ ಸ್ತ್ರೀಯರೂ ಕೂಡ ವಚನ ರಚನೆಗೆ ಕೈಹಾಕಿದ್ದು ಅವರಿಗೆ ದೊರಕಿದ ಆಲೋಚನಾಸ್ವಾತಂತ್ರ್ಯದ ಚಿಹ್ನೆಯಾಗಿದೆ. ಕನ್ನಡದಲ್ಲಿ ಪ್ರಪ್ರಥಮವಾಗಿ ಮಹಿಳಾ ಸಾಹಿತ್ಯಕೃಷಿ ಮಾಡಿದವರಲ್ಲಿ ಈ ವಚನಕಾರ್ತಿಯರೇ ಆದ್ಯರು ಮತ್ತು ಅಗ್ರಗಣ್ಯರಾಗಿದ್ದಾರೆ. ಸಮಾಜದಲ್ಲಿರುವ ಸ್ತ್ರೀಯರೂ ಪುರುಷರಿಗೆ ಸರಿಸಮನಾಗಿ ಬಾಳುವವರು. ಆದುದರಿಂದ ಅವರಿಗೂ ಅಭಿವ್ಯಕ್ತಿಸ್ವಾತಂತ್ರ್ಯದ ಹಕ್ಕು ಇರಲೇಬೇಕೆಂದು ಬಸವಾದಿ ಶಿವಶರಣರು ಆಂದೋಲನ ಮಾಡಿ ಸ್ತ್ರೀ ಪುರುಷರೆಲ್ಲರೂ ಸರಿಸಮಾನರೆಂದು ಸಾರಿದರು. ಬಿಜ್ಜಳರಸನ ಅಧಿಕಾರಾವಧಿಯಲ್ಲಿಯೇ ಬಸವಣ್ಣನವರು ಕಲ್ಯಾಣದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಹೋರಾಟ ಮಾಡಿ ಜನರನ್ನು ಒಗ್ಗೂಡಿಸಿದವರು. ಈ ಭೂಮಿಯ ಮೇಲೆ ಜೀವಿಸುವವರೆಲ್ಲರೂ ಒಂದೇ ಎಂಬ ಬೀಜಮಂತ್ರವನ್ನು ಸಾಕಾರಗೊಳಿಸಿದವರು. 'ಮನುಷ್ಯ ಜಾತಿ ತಾನೊಂದೇ ವಲಂ' ಎಂದ ಮಹಾಕವಿ ಪಂಪನ ವಾಕ್ಯವನ್ನು ಕಾರ್ಯಗತಗೊಳಿಸಿದ ಪುಣ್ಯಪುರುಷರು ಬಸವಣ್ಣನವರು. ಇವರು ನಿರ್ಮಿಸಿದ ಅನುಭವಮಂಟಪದಲ್ಲಿ ಸಾವಿರಾರು ಶರಣ-ಶರಣೆಯರು ಸಮಾವೇಶಗೊಳ್ಳುತ್ತಿದ್ದರು. 770 ಅಮರಗಣಂಗಳು ಅಲ್ಲಿಯೇ ಸೇರಿ ಅಂದು ಸಮಾಜದಲ್ಲಿ ಆಗುತ್ತಿದ್ದ ಆಗು-ಹೋಗುಗಳನ್ನು ಚರ್ಚಿಸಿ ಹೊರಹೊಮ್ಮಿಸಿದ ವಿಚಾರಧಾರೆಗಳೇ ವಚನವಾಗಿ ಅರಳಿ ವಿಶ್ವದ ತುಂಬೆಲ್ಲವೂ ಪರಿಮಳ ಬೀರಿದವು. ಮುನ್ನೂರಕ್ಕೂ ಮೇಲ್ಪಟ್ಟು ವಚನಕಾರರು, ಮೂವತ್ತೈದಕ್ಕೂ ಮೇಲ್ಪಟ್ಟು ವಚನಕಾರ್ತಿಯರು ತಮ್ಮ ಅನುಭವ, ಆಲೋಚನೆಗಳನ್ನು ವಚನರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಜಗತ್ತಿನ ಇತಿಹಾಸದ ಒಂದು ನಿರ್ದಿಷ್ಟ ಕಾಲದಲ್ಲಿ ಜನ ಹೀಗೆ ಕೃತಿರಚನೆ ಮಾಡಿರುವುದು, ಅದರಲ್ಲೂ ಸಮಾಜದ ಬೇರೆ ಬೇರೆ ವರ್ಗದ

ಜನ, ಸಾಹಿತ್ಯದಲ್ಲಿ ಪಾಲ್ಗೊಂಡಿರುವುದಂತೂ ಆಧುನಿಕ ಕಾಲವನ್ನು ಬಿಟ್ಟರೆ, ಅನನ್ಯ ಸಂಗತಿಯೆಂದೇ ಹೇಳಬೇಕಾಗುತ್ತದೆ.

ವಚನಕಾರರ ಉದ್ದೇಶ ಜನಸಮ್ಮುಖವಾದುದರಿಂದ ಅವರ ಭಾಷೆ, ಹೇಳುವ ರೀತಿ, ಅನುಭವಕ್ಕೆ ಕೊಡುವ ರೂಪ, ಇವೆಲ್ಲವುಗಳ ಹಿಂದೆ ಜಾನಪದ ಸತ್ವದ ಹಿನ್ನೆಲೆಯಿದೆ. ಏಕೆಂದರೆ ವಚನಗಳಲ್ಲಿ ಜನರು ಆಡುವ ನುಡಿಗಡಣ, ಗಾದೆ, ನುಡಿಗಟ್ಟುಗಳನ್ನೇ ಬಳಸಿಕೊಂಡು ದೇಶೀಯತೆಯಲ್ಲಿಯೇ ವಚನಗಳನ್ನು ರಚಿಸಿದ್ದು ಹೊಸ ಕಳೆ, ಹೊಸ ಮಾದರಿಯ ಸಾಹಿತ್ಯ ಪ್ರಕಾರವಾಗಿದೆ. ಇದು ಪದ್ಯವೂ ಹೌದು, ಗದ್ಯವೂ ಹೌದು ಎನ್ನುವಂತೆ ಭಾವಗೀತಾತ್ಮಕವಾಗಿದೆ. ಶರಣರು ಅಂದು ಜನರ ಆಡುನುಡಿಗೆ ಹತ್ತಿರವಾದ ಭಾಷೆಯನ್ನು ಬಳಸಿದರು ಕನ್ನಡ ಭಾಷೆಗೆ ವಿಶಿಷ್ಟವಾದ ಎತ್ತರವನ್ನು ತಂದುಕೊಟ್ಟಿರುವರು. ವಚನಗಳಲ್ಲಿ ಉತ್ತಮ ಸಂಸ್ಕೃತಿಯ ಮೌಲ್ಯಗಳಾದ ವಿನಯ, ಶ್ರದ್ಧೆ, ಗೌರವ ಧೈರ್ಯ, ಸಮಾನತೆ, ಶ್ರಮ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಅನ್ಯಾಯದೊಡನೆ ಎಂದೂ ರಾಜಿ ಮಾಡಿಕೊಳ್ಳಲೊಪ್ಪದ ಕೆಚ್ಚು, ಸ್ವತಂತ್ರ ವಿಚಾರಶೀಲತೆ ಹಾಗೂ ಮಾನವೀಯ ಅನುಕಂಪ ಈ ಶಾಶ್ವತ ಸತ್ಯಗಳು ಕಾಣುತ್ತವೆ. ಮಾನವೀಯ ಮೌಲ್ಯಗಳ ಮೂಲ ಸೆಲೆಯೇ ಅನುಕಂಪ. ಅನುಕಂಪವೆಂದರೆ ದಯೆ, ಕರುಣೆ, ಕನಿಕರ ಎಂದರ್ಥ. ಆದ್ದರಿಂದಲೇ ಶರಣರು ದೇವರಲ್ಲಿ 'ರಾಜ ಸುಖವನದಾವ ಮೂಢ ಬಯಸುವನು, ನಿನ್ನ ಕರುಣಾವಲೋಕವೆನಗೆ ಸಾಕು' ಎಂದು ನುಡಿದಿದ್ದಾರೆ. ಉದಾಹರಣೆ –

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಈ ವಚನದ ಮೂಲಕ 'ದಯೆವೇ ಧರ್ಮದ ಮೂಲ' ಎಂದಿದ್ದಾರೆ ಬಸವಣ್ಣನವರು. ದಯವಲ್ಲದ್ದು ಧರ್ಮವೇ ಅಲ್ಲ ಎಂದಿರುವರು. ಈ ದಯೆ ಕೇವಲ ಮನುಷ್ಯರಿಗಷ್ಟೇ ಅಲ್ಲ, ಸಕಲ ಪ್ರಾಣಿಗಳೆಲ್ಲರಲ್ಲಿಯೂ ಇರಬೇಕು ಎಂಬ ತಮ್ಮ ಉದಾತ್ತವಾದ, ವಿಶಾಲವಾದ, ಭಾವವನ್ನು ಹೊರಹಾಕಿದ್ದಾರೆ. ಈ ಮಾನವೀಯ ಅನುಕಂಪವು ಸಕಲ ಪ್ರಾಣಿಗಳೆಲ್ಲ ತನ್ನಂತೆಯೇ ಎಂದು ಭಾವಿಸಿದಾಗ ಮಾತ್ರ ಸಾಧ್ಯವಾಗುತ್ತದೆ. ಇದರಲ್ಲಿ ಬಲಹೀನರನ್ನು ಸಬಲರು ರಕ್ಷಿಸಬೇಕೆಂಬ ದಯಾರ್ದ್ರತೆಯ ಭಾವ ತುಂಬಿ ತುಳುಕುತ್ತಿರುವುದನ್ನು ನೋಡಬಹುದು. ಬಸವಣ್ಣನವರು ಸಮಾಜಸಂಘಟನೆಗೆ ಅಗತ್ಯವಿರುವ ಪರಸ್ಪರ ಪ್ರೇಮ, ಸ್ನೇಹ, ಸಹಿಷ್ಣು ಭಾವ, ಭ್ರಾತೃಭಾವ, ಮಾನವೀಯತೆ, ವಿಶ್ವಬಂಧುತ್ವ, ಆತ್ಮೀಯತೆ, ಸಹಾನುಭೂತಿ, ಅಹಿಂಸೆ, ಅನುಕಂಪ ಮುಂತಾದ ಮೌಲ್ಯಗಳನ್ನು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಮಾನವ ಮಹಾಮಾನವನಾಗಲು ನಿಜ ಮಾನವನಾಗಲು ಬೇಕಾಗುವ 'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ,

ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನನ್ನು ಒಲಿಸಿಕೊಳ್ಳುವ ಪರಿ' ಎಂಬ ವಚನವೊಂದೇ ಸಾಕು ಎನ್ನುವಂತಿದೆ. ಈ ಸಪ್ತಶೀಲಗಳನ್ನು ಯಾವಾತನು ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತರುತ್ತಾನೋ ಅವನೇ ಮುಕ್ತಿಗೆ ಭಾಜನನಾಗುತ್ತಾನೆ. ಇದರಲ್ಲಿ ಯಾವುದೇ ಜಾತಿಯ ಪ್ರಸ್ತಾಪ ಬರುವುದಿಲ್ಲ.

ಶರಣರು 12ನೆಯ ಶತಮಾನದ ಕಾಲಘಟ್ಟದಲ್ಲಿ ಜಾತಿಯ ಜಡತ್ವ, ಬ್ರಾಹ್ಮಣ್ಯದ ಕ್ರೌರ್ಯ, ದೇವಾಲಯಕೇಂದ್ರಿತ ಮೇಲು-ಕೀಳು, ಸ್ತ್ರೀ-ಪುರುಷ ಮುಂತಾದ ತಾರತಮ್ಯಗಳನ್ನು ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಪ್ರತಿಭಟಿಸಿದ್ದಾರೆ. ಇದಕ್ಕೆ ವಚನಕಾರರಲ್ಲಿರುವ ಮಾನವೀಯ ಅನುಕಂಪವೇ ಕಾರಣವಾಗಿದೆ. ಜಾತಿ, ಸಾಮಾಜಿಕ ಅವಮಾನ ಇವುಗಳ ವಿರುದ್ಧ ಒಂದು ಆಧ್ಯಾತ್ಮಿಕವಾದ ಪ್ರತಿಭಟನೆ ಆಗಿನ ಕಾಲದಲ್ಲಿ ನಡೆಯಿತು. ಇದು ವರ್ಣಾಶ್ರಮದ ವಿರುದ್ಧದ ಪ್ರತಿಭಟನೆಯೂ ಹೌದು. ವಚನಕಾರರು ಜಾತಿ ಕೇಂದ್ರಿತವಾಗಿದ್ದ ಅಸ್ಪೃಶ್ಯತೆಯನ್ನು ಪ್ರತಿಭಟಿಸಿದ್ದಾರೆ. ದೇಶದ ಬಹುಸಂಖ್ಯಾತ ಜನರನ್ನು ಸ್ವಂತ ದೇಶದಲ್ಲಿಯೇ ಪರದೇಶಿಗಳನ್ನಾಗಿ ಮಾಡಿದ ವೈದಿಕರ ಪ್ರಸ್ತಾಪ ಬಂದೊಡನೆಯೇ ಬಸವಣ್ಣನವರು ಉಗ್ರರಾಗುತ್ತಾರೆ. ಆ ಬಹಿಷ್ಕೃತ ದಲಿತರ ಮಾತು ಬಂದಾಗಲಂತು ವ್ಯಥಿತರಾಗುತ್ತಾರೆ, ಮೆದುವಾಗುತ್ತಾರೆ. ಮಹಿಳೆಯರು, ದಲಿತರು ಎಂದರೆ ಅವರು ಅನುಕಂಪದಲ್ಲಿಯೇ ಕರಗುತ್ತಿದ್ದರು. ಅವರು ಎಲ್ಲರ ಸಮಾನತೆಗಾಗಿ ಹೋರಾಡಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿಯೇ ಇಷ್ಟೊಂದು ಪ್ರಗತಿಪರ ವಿಚಾರ ಬಂದಿರುವುದು ಇಂದಿಗೂ ಅದ್ಭುತವೆನಿಸುತ್ತದೆ. ಅವರ ವಚನವೊಂದರಲ್ಲಿ ಹೇಳಿದ್ದು ಹೀಗೆ-

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ
ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ,
ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ
ಹೀಗಲ್ಲದೆ ಉದಾಸೀನವ ಮಾಡಿಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ ಕೂಡಲಸಂಗಮದೇವಾ

ಈ ವಚನದಲ್ಲಿ ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರೂ ಸಮಾನರು ಎಂಬ ಸಮತಾಭಾವ ಎದ್ದು ಕಾಣುತ್ತದೆ. ಮನುಷ್ಯ ತನ್ನ ಸಾಧನೆ ಮತ್ತು ಜ್ಞಾನ ಸಂಪಾದನೆಯಿಂದ ಎತ್ತರಕ್ಕೇರಬಲ್ಲನು ಎಂಬ ಪ್ರೋತ್ಸಾಹದ, ಪ್ರೇರಣೆಯ ಮಾತು ಅದರಲ್ಲಿ ಅಡಗಿದೆ. ಶತಶತಮಾನಗಳಿಂದ ತುಳಿತಕ್ಕೆ ಸಿಕ್ಕು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಮಹಿಳಾ ಮತ್ತು ದಲಿತ ಚೇತನಗಳಿಗೆ ಜೀವದಾನ ಮಾಡಿತು. ಕಾಯಕ ಮತ್ತು ದಾಸೋಹಗಳ ಮೂಲಕ ಹೆಣ್ಣಿಗೆ ಸ್ವಾತಂತ್ರ್ಯ, ದಲಿತರಿಗೆ ಆರ್ಥಿಕ, ಸಾಮಾಜಿಕ ಸಮಾನತೆಗಳನ್ನು ವಚನಸಾಹಿತ್ಯ ದೊರಕಿಸಿಕೊಟ್ಟಿದೆ. ಆ ಮೂಲಕ ಮಾನವೀಯ ಅನುಕಂಪದಂತಹ ಮಹೋನ್ನತ ಮೌಲ್ಯವನ್ನು ವಚನಕಾರರು ಎತ್ತಿ ಹಿಡಿದಿದ್ದಾರೆ. ವಚನಕಾರರು ರಚಿಸಿದ

ವಚನ ಸಾಹಿತ್ಯ ಜೀವನಮೌಲ್ಯಗಳ ಒಂದು ಸುಂದರ ಕರಂಡಕ, ಅದು ಉತ್ತಮ ಜೀವನಪ್ರಣಾಲಿಕೆಯ ಒಂದು ಗುಚ್ಛವಿದ್ದಂತೆ. ವಚನಸಾಹಿತ್ಯದಲ್ಲಿ ಎಲ್ಲವೂ ಇದೆ. ಇದರಲ್ಲಿರುವದೆಲ್ಲವೂ ಮತ್ತಾವ ಸಾಹಿತ್ಯದಲ್ಲಿಯೂ ಇಲ್ಲವೆಂದಿದ್ದಾರೆ ವಿದ್ವಾಂಸರು.

ವಚನಸಾಹಿತ್ಯ ಎರವಲು ತಂದದ್ದಲ್ಲ; ಅದು ಕನ್ನಡದ ಸ್ವಯಾರ್ಜಿತ ಆಸ್ತಿ. ವಚನಕಾರರು ಸಂಸ್ಕೃತ ಆಚಾರರಲ್ಲ. ಅವರು ಅಚ್ಚಗನ್ನಡದ ಬೇಸಾಯಗಾರರು. ಈ ಹೊಸ ಹುರುಪಿನ ಮುಂದಾಳುಗಳು ಸಂಪ್ರದಾಯಕ್ಕಿಂತಲೂ ಅನುಭವಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರು. ವಚನಧರ್ಮದೊಳಗೆ ದೇಶಕಾಲಾದಿಗಳ ವ್ಯತ್ಯಾಸವಿದೆ, ಎಲ್ಲರಿಗೂ ಅನ್ವಯಿಸುವ ವಿಶ್ವಧರ್ಮವೊಂದು ಸೇರಿಕೊಂಡಿತ್ತು ಎಂದು ಎಂ.ಆರ್. ಶ್ರೀ. ಯವರು ಹೇಳಿದ್ದು ಅರ್ಥಪೂರ್ಣವಾಗಿದೆ.

12ನೆಯ ಶತಮಾನದ ಪೂರ್ವಭಾಗದಲ್ಲಿ ಎಲ್ಲಾ ವರ್ಗದ ಮಹಿಳೆಯರೂ ಸಾಹಿತ್ಯಸೃಷ್ಟಿಯಲ್ಲಿ ತೊಡಗಿದ್ದುದು ಪ್ರಮುಖ ಸಾಧನೆಯಾಗಿದೆ. ವೈದಿಕ ಧರ್ಮದ ಗೊಡ್ಡುತನಕ್ಕೆ ಬೇಸತ್ತ ಜನ ಹೊಸ ಗಾಳಿಗೆ ಮೈಯೊಡ್ಡಿದ್ದು ವಚನ ಚಳುವಳಿಯಲ್ಲಿ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. 'ನ ಸ್ತ್ರೀ ಸ್ವಾತಂತ್ರ್ಯ' – ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುತ್ತಿದ್ದ ಸಮಯದಲ್ಲಿಯೇ ಶರಣರು ಹೆಣ್ಣಿಗೆ ಸಮಾನತೆಯನ್ನು ತಂದುಕೊಟ್ಟರು. ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕವಾಗಿ ಆಕೆ ಕೀಳು ಎನ್ನುವ ಕಾಲದಲ್ಲಿ ಶರಣರು ಹೆಣ್ಣಿಗೆ ಸ್ವಾಭಿಮಾನವನ್ನು ತಂದುಕೊಟ್ಟರು. ಮೊಟ್ಟಮೊದಲ ಬಾರಿಗೆ ವಚನಕಾರ್ತಿಯರು ಮಹಿಳೆಯೂ ಕೂಡ ಪುರುಷನಂತೆ ಮಾತಾಡಬಲ್ಲಳು, ಬರೆಯಬಲ್ಲಳು ಮತ್ತು ಯೋಚಿಸಬಲ್ಲಳು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು. ಇತಿಹಾಸದ ಘಟ್ಟದಲ್ಲಿ ಮೂಕಳಾಗಿದ್ದ ಹೆಣ್ಣು ಮಾತಾಡಿದ್ದೇ ವಚನಯುಗದಲ್ಲಿ ಎಂಬುದು ಶಾಶ್ವತ ಸತ್ಯ. ಹೀಗಾಗಿ ಇಲ್ಲಿ ನೂರಾರು ಜನರು ಒಂದೇ ಘಟ್ಟದಲ್ಲಿ ಮಾತನಾಡಿದ್ದು ಅದ್ಭುತ ಹಾಗೂ ವಿಸ್ಮಯಕರ.

ವಚನಕಾರ್ತಿಯರಲ್ಲಿ ಅಕ್ಕಮಹಾದೇವಿ ಪ್ರಮುಖಳು. ಅಕ್ಕ ಕನ್ನಡ ಸಾಹಿತ್ಯದ ಮೊದಲ ಕವಯತ್ರಿ. 'ಯೋಗಾಂಗ ತ್ರಿವಿಧಿ' ಎಂಬ ಕೃತಿಯನ್ನು ತ್ರಿಪದಿ ಛಂದಸ್ಸಿನಲ್ಲಿ ರಚಿಸಿದವಳು. 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ 434 ವಚನಗಳನ್ನು ರಚಿಸಿರುವಳು. ಅಕ್ಕನ ಬದುಕೇ ಒಂದು ಅದ್ಭುತ, ರಮ್ಯ ಮತ್ತು ರೋಮಾಂಚನಕಾರಿಯಾದದ್ದು. ಉಡುತಡಿ ಯಿಂದ ಕಲ್ಯಾಣದೆಡೆಗೆ ಕಾಲ್ನಡಿಗೆಯ ಮೂಲಕ ಹೋಗಿ ಅನುಭವಮಂಟಪದಲ್ಲಿ ಪಾಲ್ಗೊಂಡು ವಚನ ರಚಿಸಿದವಳು. ಅವಳೊಂದಿಗೆ ಅಕ್ಕಮ್ಮ, ಸತ್ಯಕ್ಕ, ಮುಕ್ತಾಯಕ್ಕ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಶರಣೆಯರೂ ಪಾಲ್ಗೊಂಡಿದ್ದರು.

ಆಧುನಿಕ ಸ್ತ್ರೀಪರ ಹೋರಾಟಗಳಿಗೆ ಅಕ್ಕ ಭದ್ರವಾದ ನೆಲೆಗಟ್ಟನ್ನ ಹಾಕಿದ್ದಾಳೆ. ಎಂಥದೇ ಕಷ್ಟ ಬಂದರೂ ಎದೆಗುಂದದೆ ತಾನು ನಂಬಿದ ಆದರ್ಶಗಳಿಗೆ, ತತ್ತ್ವಗಳಿಗೆ ಬದ್ಧಳಾದವಳು. ಸಮಾಜದ ಅನಿಷ್ಟ ಪದ್ಧತಿಯ ವಿರೋಧವಾಗಿ ನಡೆದು ಗೆದ್ದವಳು. ದಿಟ್ಟತನದ ಹೆಸರಿನಲ್ಲಿ ಉದ್ಧಟತನ ಬೆಳೆಸಿಕೊಳ್ಳದೆ ಸ್ವಾತಂತ್ರ್ಯದ ಕೂಗಿನಲ್ಲಿ ಸ್ವೇಚ್ಛೆಗೆ

ಬಲಿಯಾಗದೆ, ಸ್ವಾಭಿಮಾನದ ಸೋಗಿನಲ್ಲಿ ಅಹಂಭಾವಕ್ಕೆ ವಶವಾಗದೆ ವಿಧಾಯಕವಾಗಿ ಆಂತರಿಕ ಬೆಳವಣಿಗೆಯೊಂದಿಗೆ ಶಿಖರಕ್ಕೆ ಬೆಳೆದ ಅಕ್ಕನ ವ್ಯಕ್ತಿತ್ವ ಒಂದು ರೀತಿಯಲ್ಲಿ ಬಂಡಾಯ ಮನೋಭಾವವುಳ್ಳದ್ದು. ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ ಪಡೆದ ಅಕ್ಕ ಕೇವಲ ಆಧ್ಯಾತ್ಮಿಕವಾಗಿ ಬೆಳೆಯದೆ ಎಲ್ಲಾ ರಂಗದಲ್ಲಿ ಸಾಧನೆಗೈದು–ಕವಯಿತ್ರಿಯಾಗಿ, ವಿಮರ್ಶಕಳಾಗಿ ಮಾತನಾಡಿದ್ದಳು ಎಂಬುದಕ್ಕೆ ಅವಳ ವಚನಗಳೇ ಸಾಕ್ಷಿ. ಹೀಗಾಗಿ ಸ್ತ್ರೀವಾದಿ ಹೋರಾಟಗಳ ಸಾಹಿತ್ಯದಲ್ಲಿ ಅಕ್ಕನ ವಚನಗಳು ಪ್ರಮುಖವಾಗಿವೆ. ಈ ಹಿನ್ನೆಲೆಯಲ್ಲಿ ಅಕ್ಕನ ವಚನಗಳನ್ನು ಪುನರ್ ಮೌಲ್ಯೀಕರಣ ಮಾಡಬೇಕಾದದ್ದು ಇಂದು ಅವಶ್ಯವಾಗಿದೆ. ಭಾರತೀಯ ಮಹಿಳೆಯರಲ್ಲೆ ಅಕ್ಕ ತನ್ನ ಚೇತನದಿಂದ ಆಕಾಶದೆತ್ತರಕ್ಕೆ ನಿಲ್ಲುವವಳು. ಆಕೆಯ ದಿಟ್ಟ ನಿಲುವು, ಬಿಚ್ಚು ಮನಸ್ಸು ಬೆರಗು ಹುಟ್ಟಿಸುತ್ತದೆ.

ಅವಳ ವಚನಗಳಲ್ಲಿ ಸ್ತ್ರೀಸಂವೇದನೆ, ತುಡಿತ, ಮಿಡಿತ ಅಧಿಕವಾಗಿ ಕಂಡುಬರುತ್ತದೆ–

ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯಾ ಆತ್ಮಸಂಗಾತಕ್ಕೆ ನೀನೆನಗುಂಟು

ಎಂದಿರುವುದನ್ನು ಗಮನಿಸಿದರೆ, ಅಕ್ಕನ ಹೋರಾಟ ನಿರಂತರವಾಗಿತ್ತು ಎಂದೆನಿಸುತ್ತದೆ. ಆಕೆಯ ಸ್ಫೋಟಗುಣ ಚುಚ್ಚುವುದಿಲ್ಲ, ಕೊಲ್ಲುವುದಿಲ್ಲ, ಬಿಚ್ಚಿ ಅರಳಿಸುವುದು. ಆಕೆ ಮಾಡುವ ವಿಡಂಬನೆ ಕೋಪದ ಬದಲು ಬುದ್ಧಿ ಕೆಲಸ ಮಾಡಲು ಹಚ್ಚುತ್ತದೆ. ಇಷ್ಟೆಲ್ಲಾ ನೋವು ನಿರಾಶೆಗಳ ನಡುವೆ ಒಂಟಿ ಬದುಕು ಸಾಗಿಸಿದ ಅಕ್ಕನಿಗೆ 'ಹೆಣ್ಣು' ಎನ್ನುವ ಕಾರಣದಿಂದ ಮನೆ ತೊರೆದು ಹೋದರೆ ಎಲ್ಲಿ ಆಶ್ರಯ ಎನ್ನುವ ಪ್ರಶ್ನೆಗೆ ಅಕ್ಕನು ಮೇಲಿನ ವಚನದ ಮೂಲಕ ಉತ್ತರ ಕೊಟ್ಟದ್ದು ಅದ್ಭುತವಾದದ್ದು. ಇದು ಕೇವಲ ಅಕ್ಕನ ಉತ್ತರವಷ್ಟೇ ಆಗಿರದೆ ಹೆಣ್ಣಿನ ಬಂಡಾಯದ ಧ್ವನಿಯಾಗಿದೆ. ಅಂತೆಯೇ ಅಕ್ಕನ ವಚನಗಳಲ್ಲಿ ಹೆಣ್ಣಿನ ಶತಶತಮಾನಗಳ ಶೋಷಣೆಯು ಹೂವಾಗಿ ಅರಳಿದೆ. ಇಂದಿನ ಜ್ವಲಂತ ಸಮಸ್ಯೆಗಳಿಗೂ ಅರ್ಥಪೂರ್ಣವಾದ ಉತ್ತರಗಳಿವೆ. ಶಿವಭಕ್ತರ ಹೊಟ್ಟೆಯಲ್ಲಿ ಹುಟ್ಟಿ ತನ್ನ ಮಲ್ಲಿಕಾರ್ಜುನನೇ ತನ್ನ ಪತಿಯೆಂದು ಭಾವಿಸಿದ ಅಕ್ಕನನ್ನು ಕೌಶಿಕ ಅಧಿಕಾರಬಲದಿಂದ ಮದುವೆಯಾಗುತ್ತಾನೆ. ಅನಿವಾರ್ಯವಾಗಿ ಕೌಶಿಕನಿಗೆ ಮೂರು ಷರತ್ತುಗಳನ್ನು ಹಾಕುವ ಮೂಲಕ ಅಕ್ಕ ಸ್ವತಂತ್ರಳಾಗಿರಲು ಪ್ರಯತ್ನಿಸಿದ್ದು ಇಡೀ ಮಹಿಳಾಲೋಕಕ್ಕೇ ಉಪಕಾರವಾಯಿತು. ಪತಿಯನ್ನು ಪ್ರಶ್ನಿಸಿದ ಮೊದಲ ಮಹಿಳೆಯಾಗಿ, ತನುವಿನ ಆಸೆಯನ್ನು ಬಿಟ್ಟು ಮನಸ್ಸನ್ನು ಜಯಿಸಿ ಜ್ಞಾನಮೂರ್ತಿಯಾಗಿ ಕಂಡುಬರುತ್ತಾಳೆ. ಅಕ್ಕ ಪತಿಯ ಮನೆ ತೊರೆದು ಕಲ್ಯಾಣದತ್ತ ಹೊರಡುವ ಸಂದರ್ಭದಲ್ಲಿ ಅನೇಕ ಅಡೆತಡೆಗಳನ್ನು ಅನುಭವಿಸುತ್ತಾಳೆ.

(ಮುಂದುವರಿಯುವುದು)

# ವಚನ ಚಳವಳಿ ಮತ್ತು ಭಾರತ ಸಂವಿಧಾನ

ಡಾ. ಸೀ.ಚ. ಯತೀಶ್ವರ

(ಹಿಂದಿನ ಸಂಚಿಕೆಯಿಂದ)

ನಮ್ಮ ಸಂವಿಧಾನವು ಸಂವಿಧಾನಾತ್ಮಕ ಪರಿಹಾರಗಳ ಹಕ್ಕನ್ನು ನೀಡುವ ಮೂಲಕ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಪರಿಣಾಮಕಾರಿ ವ್ಯವಸ್ಥೆಯನ್ನು ಮಾಡಿದೆ. ಯಾವುದೇ ವ್ಯಕ್ತಿ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದಾಗ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ಆದುದರಿಂದಲೇ ಅಂಬೇಡ್ಕರ್‌ರವರು 32ನೇ ವಿಧಿಯನ್ನು ಸಂವಿಧಾನದ ಆತ್ಮ ಮತ್ತು ಹೃದಯವಿದ್ದಂತೆ ಎಂದಿದ್ದಾರೆ. 1950 ಜನವರಿ 26ರಂದು ಜಾರಿಗೆ ಬಂದ ಮೂಲ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ಪ್ರಸ್ತಾಪವಿಲ್ಲ. ಸ್ವರಣ್‌ಸಿಂಗ್ ಸಮಿತಿಯ ಶಿಫಾರಸಿನ ಮೇರೆಗೆ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳನ್ನು ಸೇರ್ಪಡೆ ಮಾಡಲಾಯಿತು. ಸಂವಿಧಾನಕ್ಕೆ 1976ರಲ್ಲಿ 42ನೆಯ ತಿದ್ದುಪಡಿಯನ್ನು ತಂದು 4ಎ ಭಾಗದಲ್ಲಿರುವ 51ಎ ವಿಧಿಯು 10 ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ.

(ಅ) ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಆ) ಸ್ವಾತಂತ್ರ್ಯ ಚಳವಳಿಯ ಉದಾತ್ತ ಆದೇಶಗಳನ್ನು ಪಾಲಿಸುವುದು.

(ಇ) ಭಾರತದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವುದು ಹಾಗೂ ಕಾಪಾಡುವುದು.

(ಈ) ಕರೆ ಬಂದಾಗ ರಾಷ್ಟ್ರವನ್ನು ರಕ್ಷಿಸುವುದು, ದೇಶಸೇವೆ ಮಾಡುವುದು.

(ಉ) ಸಾಮರಸ್ಯ ಮತ್ತು ಭ್ರಾತೃತ್ವಭಾವನೆಯನ್ನು ಬೆಳೆಸಿಕೊಳ್ಳುವುದು ಹಾಗೂ ಮಹಿಳೆಯರ ಗೌರವಕ್ಕೆ ಚ್ಯುತಿಯುಂಟುಮಾಡುವ ಆಚರಣೆಗಳನ್ನು ತ್ಯಜಿಸುವುದು.

(ಊ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು.

(ಋ) ಅರಣ್ಯಗಳು, ಸರೋವರಗಳು, ನದಿಗಳು, ವನ್ಯಜೀವಿಗಳನ್ನೊಳಗೊಂಡ ನೈಸರ್ಗಿಕ ಪರಿಸರವನ್ನು ರಕ್ಷಿಸಿ ಅಭಿವೃದ್ಧಿಪಡಿಸುವುದು.

(ಎ) ವೈಜ್ಞಾನಿಕ ಮತ್ತು ಮಾನವೀಯ ಗುಣಗಳನ್ನು ಹಾಗೂ ವಿಚಾರಣಾ ಮತ್ತು ಸುಧಾರಣಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು.

(ಏ) ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು, ಹಿಂಸೆಯನ್ನು ತ್ಯಜಿಸುವುದು.
(ಐ) ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸುವುದು.

ಭಾರತದ ಸಂವಿಧಾನದ 4ನೇ ಭಾಗವು ರಾಜ್ಯನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಸಂವಿಧಾನದ 36ರಿಂದ 51ರವರೆಗಿನ ವಿಧಿಗಳು ರಾಜ್ಯನಿರ್ದೇಶಕ ತತ್ವಗಳಿಗೆ ಸಂಬಂಧಿಸಿದೆ. ರಾಜ್ಯನಿರ್ದೇಶಕ ತತ್ವಗಳು ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ, ಕಲ್ಯಾಣ ರಾಜ್ಯ ಮತ್ತು ಸಮಾಜವಾದ ಇವುಗಳನ್ನು ಅನುಷ್ಠಾನಗೊಳಿಸುವ ಉದ್ದೇಶವನ್ನು ಹೊಂದಿವೆ.

ರಾಜ್ಯನೀತಿನಿರ್ದೇಶಕ ತತ್ವಗಳನ್ನು ಹೀಗೆ ವರ್ಗೀಕರಿಸಬಹುದು.

**ಎ) ಸಮಾಜವಾದಿ ತತ್ವಗಳು**

1. ಜನರ ಕಲ್ಯಾಣವನ್ನು ಸಾಧಿಸಲು ಪೂರಕವಾದ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವುದು.
2. ಪ್ರತಿಯೊಬ್ಬ ಪೌರನಿಗೆ ಜೀವನಾವಶ್ಯಕ ಸೌಲಭ್ಯಗಳು ದೊರಕುವಂತೆ ಮಾಡುವುದು.
3. ಆರ್ಥಿಕ ಸಂಪನ್ಮೂಲಗಳನ್ನು ಸಾಮಾಜಿಕ ಹಿತದೃಷ್ಟಿಯಿಂದ ನ್ಯಾಯಯುತವಾಗಿ ವಿತರಣೆ ಮಾಡುವುದು.
4. ರಾಷ್ಟ್ರೀಯ ಆದಾಯ ಮತ್ತು ಸಂಪತ್ತು ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗುವುದನ್ನು ತಪ್ಪಿಸುವುದು.
5. ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದು.
6. ಬಡವರು ಮತ್ತು ದುರ್ಬಲರಿಗೆ ಉಚಿತ ಕಾನೂನು ನೆರವು ನೀಡುವುದು.
7. ಕಾರ್ಮಿಕರಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವಕಾಶವನ್ನು ನೀಡುವುದು.
8. ನಿರುದ್ಯೋಗಿಗಳು, ವೃದ್ಧರು, ರೋಗಿಗಳು, ಅಸಮರ್ಥರು ಹಾಗೂ ದುರ್ಬಲರಿಗೆ ಧನಸಹಾಯ ಮಾಡುವುದು.

**ಬಿ) ಉದಾರವಾದಿ ತತ್ವಗಳು**

1. ಏಕರೂಪ ನಾಗರಿಕಸಂಹಿತೆಯನ್ನು ದೇಶದಾದ್ಯಂತ ಜಾರಿಗೆ ತರುವುದು.
2. 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು.
3. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.
4. ಐತಿಹಾಸಿಕ ಸ್ಮಾರಕಗಳು ಮತ್ತು ಸ್ಥಳಗಳನ್ನು ಸಂರಕ್ಷಿಸುವುದು.
5. ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.

6. ವಿಶ್ವದ ರಾಷ್ಟ್ರಗಳ ನಡುವೆ ನ್ಯಾಯಯುತವಾದ ಮತ್ತು ಗೌರವಯುತವಾದ ಸಂಬಂಧವನ್ನು ಕಾಪಾಡಿಕೊಂಡು ಬರುವುದು.
7. ನ್ಯಾಯ ಪಂಚಾಯಿತಿಯ ಮೂಲಕ ಅಂತಾರಾಷ್ಟ್ರೀಯ ವಿವಾದಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸುವುದು.

**ಸಿ) ಗಾಂಧೀ ತತ್ವಗಳು**

1. ಗ್ರಾಮಪಂಚಾಯಿತಿಗಳ ಸ್ಥಾಪನೆ.
2. ಗ್ರಾಮೀಣ ಮತ್ತು ಗೃಹಕೈಗಾರಿಕೆಗಳ ಸ್ಥಾಪನೆ.
3. ಕೃಷಿ ಮತ್ತು ಪಶುಸಂಗೋಪನೆಯನ್ನು ವೈಜ್ಞಾನಿಕ ಆಧಾರದ ಮೇಲೆ ಅಭಿವೃದ್ಧಿಪಡಿಸುವುದು.
4. ಮದ್ಯಪಾನ ಮತ್ತು ಗೋಹತ್ಯೆ ನಿಷೇಧವನ್ನು ಜಾರಿಗೆ ತರುವುದು.
5. ಅಮಲು ತರಿಸುವ ಪದಾರ್ಥಗಳನ್ನು ನಿಷೇಧಿಸುವುದು.

ಒಟ್ಟಾರೆಯಾಗಿ ಹೇಳುವುದಾದರೆ ಅನುಭವಮಂಟಪದ ಮೂಲಕ ಬಸವಣ್ಣ ಮತ್ತು ಇನ್ನಿತರ ಶರಣರಿಂದ ಸ್ವೀಕೃತವಾದ ಮೂಲಭೂತ ತತ್ವಗಳನ್ನು ಸಂವಿಧಾನದ ಹಿನ್ನೆಲೆಯಲ್ಲಿ ಹೀಗೆ ಸಾರವನ್ನು ಸಂಗ್ರಹಿಸಬಹುದಾಗಿದೆ.

1. ಪ್ರತಿಯೊಬ್ಬ ಮನುಷ್ಯರೂ ಸಮಾನರು.
2. ಹುಟ್ಟು, ಲಿಂಗ, ಜಾತಿ, ಹುಟ್ಟಿದ ಸ್ಥಳ ಇವುಗಳಿಂದ ಯಾರೂ ಮೇಲಲ್ಲ ; ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು.
3. ಪುರುಷ ಮತ್ತು ಮಹಿಳೆ ಹಾಗೂ ಮನುಷ್ಯ–ಮನುಷ್ಯರ ನಡುವೆ ತಾರತಮ್ಯ ಸಲ್ಲದು.
4. ಮಹಿಳೆಯರಿಗೂ ಸಮಾನ ಹಕ್ಕು ನೀಡಿ ಜೀವನದ ನಡಿಗೆಯಲ್ಲಿ ಮನುಷ್ಯನ ಸ್ವಯಂ ಅನ್ವೇಷಣೆಗೆ ಅವಕಾಶ ಕಲ್ಪಿಸಿದರು.
5. ಮಹಿಳೆಯರು ಕಡ್ಡಾಯವಾಗಿ ಕಾಯಕವನ್ನು ಮಾಡಬೇಕಾಗಿತ್ತು.
6. ವರ್ಣಾಶ್ರಮವನ್ನು ತೊಡೆದುಹಾಕುವುದು.
7. ಅಧ್ಯಾತ್ಮ ಎಂಬುದು ಸನ್ಯಾಸದೊಂದಿಗೆ ಸಂಬಂಧವುಳ್ಳದ್ದು ಎಂಬುದನ್ನು ಹೋಗಲಾಡಿಸಿ ಗೃಹಸ್ಥಾಶ್ರಮದೊಂದಿಗೆ ಅಧ್ಯಾತ್ಮವನ್ನು ಸಮ್ಮಿಲನಗೊಳಿಸಿ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" ಎಂದು ಪ್ರತಿಪಾದಿಸಿದ್ದು ಬಸವಣ್ಣನವರ ಮಹತ್ವದ ಕೊಡುಗೆ.
8. ಅಂತರ್ಜಾತಿ ಮತ್ತು ಗುಂಪುಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡಬೇಕೆಂಬುದು ಶರಣರ ಕಾಳಜಿಯಾಗಿತ್ತು. ಮುಕ್ತ ಭೋಜನಕೂಟಗಳನ್ನು ಪ್ರೋತ್ಸಾಹಿಸುವುದು, ಪ್ರಸ್ತುತ ದಿನಗಳಲ್ಲಿ ಎಲ್ಲ ಕಡೆ ಇವು ನಡೆಯುತ್ತಿರುವುದು ಆರೋಗ್ಯಕರ.

9. ಇಂದಿನ ಸಮಾಜದಲ್ಲಿ ಅಸ್ಪೃಶ್ಯತೆಗೆ ಅವಕಾಶವಿಲ್ಲ.
10. ಯಾವುದೇ ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಷಯದ ಬಗೆಗೆ ಪ್ರತಿಯೊಬ್ಬರು ಮುಕ್ತ ಚಿಂತನೆ ನಡೆಸಬಹುದಾಗಿದೆ.
11. ಮುಕ್ತ ಚಿಂತನೆ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಕಾರಣ ಮತ್ತು ಅನುಭವಗಳು ಮಾತ್ರ ಮಾರ್ಗದರ್ಶಕವಾದವುಗಳು.
12. ಜಾತ್ಯತೀತ ಶಿಕ್ಷಣ ಮತ್ತು ಆಧ್ಯಾತ್ಮಿಕ ವಿಚಾರಗಳ ಗ್ರಹಿಕೆಗೆ ಮಾತೃಭಾಷೆ ಅಥವಾ ಜನಭಾಷೆಯ ಮಾಧ್ಯಮ ಅಗತ್ಯ.
13. ಪ್ರತಿಯೊಬ್ಬರೂ ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸಿ ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಳ್ಳುವ ಸ್ವಯಂ ಅನ್ವೇಷಣೆಯಲ್ಲಿ ತೊಡಗಬೇಕು.

□

## ಶ್ರದ್ಧಾಂಜಲಿ



**ಪ್ರೊ. ಮಲೆಯೂರು ಗುರುಸ್ವಾಮಿ**

ನಿವೃತ್ತ ಕನ್ನಡ ಪ್ರಾಧ್ಯಾಪಕರು, ಸಾಹಿತಿಗಳು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆಗಿದ್ದ ಪ್ರೊ. ಮಲೆಯೂರು ಗುರುಸ್ವಾಮಿಯವರು 9.3.2023ರಂದು ದೈವಾಧೀನರಾದರು. ಅವರು ಜೆಎಸ್‌ಎಸ್ ಮಹಾವಿದ್ಯಾಪೀಠ ಹೊರತರುತ್ತಿರುವ 'ಪ್ರಸಾದ' ಪತ್ರಿಕೆಯ ಸಂಪಾದಕರಾಗಿ (2001ರಿಂದ 2022ರವರೆಗೆ), ಅನಂತರ ಗೌರವ ಸಂಪಾದಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀಮಠ ಹಾಗೂ ಪ್ರಕಟಣ ವಿಭಾಗದ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಪ್ರೊ. ಮಲೆಯೂರು ಗುರುಸ್ವಾಮಿಯವರಿಗೆ 'ಪ್ರಸಾದ' ಬಳಗ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

# ಸಾಂಸ್ಕೃತಿಕ ರಾಯಭಾರಿ ಪ್ರೊ. ಮಲೆಯೂರು ಗುರುಸ್ವಾಮಿ

**ನಗರ್ಲೆ ಶಿವಕುಮಾರ**

ಸುಖ ಬಂದಡೆ ಪುಣ್ಯದ ಫಲವೆನ್ನೆನು
ದುಃಖ ಬಂದಡೆ ಪಾಪದ ಫಲವೆನ್ನೆನು
ನೀ ಮಾಡಿದಡಾಯಿತ್ತೆಂದೆನ್ನೆನು
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು, ಕೂಡಲಸಂಗಮದೇವಾ
ನೀ ಮಾಡಿದುಪದೇಶವು ಎನಗೀ ಪರಿಯಲ್ಲಿ
ಸಂಸಾರವ ಸವೆಯೆ ಬಳಸುವೆನು

**– ಬಸವಣ್ಣನವರು**

ಮೈಸೂರು–ಚಾಮರಾಜನಗರ ಜಿಲ್ಲೆಯು ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವ ಗಣ್ಯವ್ಯಕ್ತಿಗಳನ್ನು ನಾಡಿಗೆ ಕೊಡುಗೆಯಾಗಿ ನೀಡುತ್ತಾ ಬಂದಿದೆ. 1997ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟ ಚಾಮರಾಜನಗರ ಜಿಲ್ಲೆಯು ಅಭಿವೃದ್ಧಿಯ ಪಥದಲ್ಲಿ ಸಾಗಲು ಸರ್ಕಾರವು ಅನೇಕ ಕಾರ್ಯಗಳನ್ನು ರೂಪಿಸುತ್ತಾ ಬಂದಿದೆ. ಆದರೂ ನಿರೀಕ್ಷಿತ ಮಟ್ಟದಲ್ಲಿ ಕೆಲವು ಹಳ್ಳಿಗಳು ಅಭಿವೃದ್ಧಿಯಾಗಿಲ್ಲ. ನಾಡಿನ ಎಲ್ಲಾ ಹಳ್ಳಿಗಳಿಗೂ ಅಭಿವೃದ್ಧಿಗೆ ಪೂರಕವಾದ ಸೌಲಭ್ಯಗಳು ದೊರೆಯುವಂತೆ ಇಂದಿನ ರಾಜಕಾರಣಿಗಳು, ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳು, ಗಣ್ಯವ್ಯಕ್ತಿಗಳು ಮಾಡಬೇಕಾಗಿದೆ. ಚಾಮರಾಜನಗರ ಜಿಲ್ಲಾ ಸಾಹಿತ್ಯ ಸಮೃದ್ಧಿಯಾಗಿ ದೊರೆತಿರುವುದೇ ಐದುನೂರು ವರ್ಷಗಳಿಂದೀಚೆಗೆ. ಅಕ್ಕಪಕ್ಕದ ಜಿಲ್ಲೆಗಳಿಗೆ ಹೋಲಿಸಿದರೆ ಭಾಷೆ, ಧೋರಣೆ, ಆಶಯಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಒಂದಿಷ್ಟು ಪ್ರಾದೇಶಿಕ ಪದಗಳು, ಭೌತಿಕ ವಿವರಗಳು, ಯಾವುದೋ ಒಂದು ಪ್ರಾದೇಶಿಕ ಘಟನೆ ಅಲ್ಲಿ ವಿಶೇಷವಾಗಿ ಕಂಡುಬರುತ್ತದೆ. ವ್ಯಕ್ತಿಗಳ ಸಂಬಂಧಗಳು ಜಿಲ್ಲೆ, ರಾಜ್ಯಗಳಿಗೂ ವಿಸ್ತರಿಸಿರುತ್ತವೆ. ಇವೆರಡೂ ಜಿಲ್ಲೆಗಳ ಸಾಂಸ್ಕೃತಿಕ ರಾಯಭಾರಿಯಾಗಿದ್ದವರು ಪ್ರೊ. ಮಲೆಯೂರು ಗುರುಸ್ವಾಮಿಯವರು. ಅಜಾತಶತ್ರುವಾಗಿ ಎಲ್ಲರೊಂದಿಗೂ ಒಡನಾಟ ಹೊಂದಿದ್ದರಿಂದ ಸಾಂಸ್ಕೃತಿಕ ವಲಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ಅವರ ಪರಿಚಯ ಇಂದಿನವರಿಗೆ ತಿಳಿದಿದ್ದರೂ, ಮುಂದಿನವರಿಗೆ ಬೇಕಾಗಬಹುದೆಂಬ ಹಿನ್ನೆಲೆಯಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

**ವಿದ್ಯಾಭ್ಯಾಸ :** ಚಾಮರಾಜನಗರ ತಾಲೂಕು ಮಲೆಯೂರು ಗ್ರಾಮದ ಶ್ರೀ ಶಿವಣ್ಣ ಮತ್ತು ಶ್ರೀಮತಿ ಮರಮ್ಮ ದಂಪತಿಗಳ ಪುತ್ರರಾಗಿ ದಿನಾಂಕ 1.10.1947 ರಂದು ಜನಿಸಿದರು. ಆದರೆ ಸರ್ಕಾರಿ ದಾಖಲೆಗಳ ಪ್ರಕಾರ ಅವರ ಜನ್ಮ ದಿನಾಂಕ 1.3.1947. ಪ್ರಾಥಮಿಕ, ಪ್ರೌಢಶಿಕ್ಷಣ, ಕಾಲೇಜು ವಿದ್ಯಾಭ್ಯಾಸದ ನಂತರ 1972ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಕನ್ನಡ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು.

**ವೃತ್ತಿ :** ಕನ್ನಡ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಜೆಎಸ್‌ಎಸ್ ಸಂಸ್ಥೆಯ ವಿವಿಧ ಕಾಲೇಜುಗಳಲ್ಲಿ ಮೂರು ದಶಕಗಳ ಕಾಲ ಕಾರ್ಯ ನಿರ್ವಹಿಸಿದರು. ಉತ್ತಮ ಅಧ್ಯಾಪಕರೆಂಬ ಪ್ರಶಂಸೆಗೆ ಪಾತ್ರರಾದರು. ಒಂದು ವರ್ಷ (2012) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಸವಪೀಠದ ಸ್ಥಾಪಕ–ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಮೈಸೂರು–ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದ ಹಲವಾರು ಶ್ರೀಮಠಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ; ಸ್ಮರಣಸಂಚಿಕೆಗಳ ಸಂಪಾದಕರಾಗಿಯೂ ದುಡಿದಿದ್ದಾರೆ. ಉದಯೋನ್ಮುಖ ಲೇಖಕರುಗಳ ಕೃತಿಗೆ ಮುನ್ನುಡಿ, ಬೆನ್ನುಡಿ ಬರೆದು ಪ್ರೋತ್ಸಾಹಿಸಿದ್ದಾರೆ.

**ಜವಾಬ್ದಾರಿಗಳು :** ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ 1997ರಿಂದ 2007 ರವರೆಗೆ ಮೂರು ಅವಧಿಗೆ ಸೇವೆ ಸಲ್ಲಿಸಿರುತ್ತಾರೆ. ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮಲೆ ಮಹದೇಶ್ವರ ಬೆಟ್ಟದ ಜಾನಪದ ಸಂಶೋಧನಾ ಕೇಂದ್ರದ ಸದಸ್ಯರು, ಕರ್ನಾಟಕ ರಾಜ್ಯ ಗೆಜೆಟಿಯರ್‌ನ ಜಿಲ್ಲಾ ಸದಸ್ಯರು, ಜಾನಪದ ವಿಶ್ವವಿದ್ಯಾನಿಲಯದ ಗ್ರಾಮಚರಿತ್ರ ಕೋಶದ ಜಿಲ್ಲಾ ಸಂಪಾದಕರು, 2014ರಲ್ಲಿ ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು, 2009ರಲ್ಲಿ ಚಾಮರಾಜನಗರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು, 2013ರಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು. ಇತ್ತೀಚೆಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸುಮಾರು ಒಂದೂವರೆ ವರ್ಷ ಕಾಲ ಸಕ್ರಿಯವಾಗಿ ಸೇವೆ ಸಲ್ಲಿಸಿ ಸಾಹಿತ್ಯ ವಲಯದ ಸರ್ವಾಂಗೀಣ ಸಮೃದ್ಧಿಗೆ ಕಾರಣವಾದವರು ಪ್ರೊ. ಮಲೆಯೂರು ಗುರುಸ್ವಾಮಿಯವರು.

**ಕೃತಿಗಳು ಮತ್ತು ಸಾಕ್ಷ್ಯಚಿತ್ರ :** ಮಹಾಯಾತ್ರಿಕ, ಅಪ್ರತಿಮವೀರ, ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ, ಕಪಿಲೆ ಹರಿದಳು ಕಡಲಿಗೆ, ಸಂಸ, ಬಂಗಾರದೊಡ್ಡಿ ಸೇರಿದಂತೆ ಉತ್ತಮವಾದ ಆರು ಕಾದಂಬರಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಸುವರ್ಣಾವತಿ, ಪ್ರಭುಲಿಂಗಲೀಲೆ, ಬಸವಣ್ಣ, ಕಪಿಲಾ ನದಿಯ ಎಡಬಲದಿ, ಹೊನ್ನು ಹೊಳೆ, ಮಾತಿನೊಳಗಣ ಮೌನ, ಶರಣಕಿರಣ, ಮಾತೆಂಬುದು ಜ್ಯೋತಿರ್ಲಿಂಗ, ಕವನ ಸಂಕಲನ ಸೇರಿದಂತೆ ಹಲವಾರು ಕೃತಿಗಳನ್ನು ಹೊರತಂದಿದ್ದಾರೆ. ಮೂಡಲಸೀಮೆಯ ಕಥೆಗಳು,

ಕಾಡಂಚಿನ ಕೋಗಿಲೆಗಳ ಕಲರವ, ಜಂಗಮ, ಹೆಜ್ಜೆಗೆ, ಸೋಮಸಿರಿ, ಛಂದೋನಿಜಗುಣಿ, ರಾಜಪಥ, ಶಿವಪ್ರಭೆ, ಶಿವಯೋಗ, ಗ್ರಂಥಾಲಯಾಂತರಂಗ, ವಿಚಾರತರಂಗ, ಶಿವಸಂಪದ, ಪ್ರಸಾದ ಸಂಪದ, ಸ್ಥಿತಪ್ರಜ್ಞ, ವೈದ್ಯವಸಂತ, ಸುವರ್ಣಸೌರಭ, ಕನ್ನಡದಲ್ಲಿ ಧಾರ್ಮಿಕ ನಿಯತಕಾಲಿಕೆಗಳು, ವಚನ ವಾಙ್ಮಯ ಮತ್ತು ಸಂಸ್ಕೃತ ಸಾಹಿತ್ಯ, ಮೈಸೂರು ದರ್ಶನ, ಚಾಮರಾಜನಗರ ಜಿಲ್ಲಾ ಪ್ರಾತಿನಿಧಿಕ ಕಥೆಗಳು, ಅರಮನೆ ಶ್ರೀ ಪಂಚಗವಿ ಮಠದ ಶ್ರೀ ಗೌರಿಶಂಕರ ಸ್ವಾಮಿಗಳವರ ಸಮಗ್ರ ಸಾಹಿತ್ಯ, ಒಡನಾಡಿ, ನೆನಪು ದಿವ್ಯಾನುಭವ, ಅಕ್ಕ, ವಿಶ್ವಧರ್ಮದರ್ಶನ, ನಾಗಸ್ಮೃತಿ, ಚಿಕ್ಕದಣ್ಣಾಯಕ ಚನ್ನಬಸವಣ್ಣ (ಜಾನಪದ), ಶ್ರೀ ಜಯಚಾಮರಾಜೇಂದ್ರ ಒಡೆಯರ ವಿಚಾರಸಂಕಿರಣ ಸೇರಿದಂತೆ ಸಾಕಷ್ಟು ಕೃತಿಗಳನ್ನು ಸಂಪಾದಿಸಿದ್ದಾರೆ. ಖಾಸಗಿ ಜೀವನದ ಪ್ರೇಮ, ಕಾಮ ಇತ್ಯಾದಿ ಎಂಬ ವಿಚಿತ್ರ ಶೀರ್ಷಿಕೆಯ ಕವನಸಂಕಲವನ್ನೂ ರಚಿಸಿದ್ದಾರೆ. ಶ್ರೀಮಠಗಳ, ಸಮಾಜದ ಗಣ್ಯರ ಕುರಿತು ಹಲವಾರು ಕೃತಿಗಳನ್ನು ರಚಿಸಿ ಸಂಪಾದಿಸಿದ್ದಾರೆ. ಚಾಮರಾಜನಗರದ ಎಲ್ಲ ಸಾಹಿತಿಗಳ ಪರಿಚಯ ಪುಸ್ತಕ "ಸಾಹಿತ್ಯ ಸುವರ್ಣಾವತಿ" ಗುಣ, ಗಾತ್ರ ಎರಡರಲ್ಲೂ ಹೆಸರು ಮಾಡಿದೆ. **ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಿಸುತ್ತಿರುವ 'ಪ್ರಸಾದ' ದ್ವೈಮಾಸಿಕ ಪತ್ರಿಕೆಯ ಸಂಪಾದಕರಾಗಿ 2001ರಿಂದ 2022ರ ಡಿಸೆಂಬರ್ ವರೆಗೆ ಕಾರ್ಯ ನಿರ್ವಹಿಸಿರುತ್ತಾರೆ.**

ಸಂಚಿಯ ಹೊನ್ನಮ್ಮ, ಕವಿ ದೇವಚಂದ್ರ, ಗದ್ದಿಗೆ ಕೆಂಡಗಣ್ಣಸ್ವಾಮಿ ಮೊದಲಾದ ಸಾಕ್ಷ್ಯಚಿತ್ರಗಳಿಗೆ ಸಾಹಿತ್ಯವನ್ನು ರಚಿಸಿಕೊಟ್ಟಿರುತ್ತಾರೆ. "ಸುತ್ತೂರು ಗುರುಪರಂಪರೆ" ಆ್ಯನಿಮೇಷನ್ ಚಲನಚಿತ್ರದ ಸಾಹಿತ್ಯವೂ ಇವರದೆ. ಪ್ರೊ. ಮಲೆಯೂರು ಅವರ ಸಾಹಿತ್ಯವನ್ನು ಕುರಿತು ಓರ್ವ ಸಂಶೋಧಕರು ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಫಿಲ್. ಪದವಿ ಪಡೆದಿರುತ್ತಾರೆ. ಶ್ರೀ ಮಲೆಯೂರುರವರ ಕಾದಂಬರಿಗಳ ಮೇಲೆ ಮಧುರೈನ ಕಾಮರಾಜ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪ್ರಬಂಧ ಮಂಡಿತವಾಗಿದೆ. ಹೀಗೆ ಇವರ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಕಂಡುಬರುತ್ತದೆ.

**ಪ್ರಶಸ್ತಿ, ಪುರಸ್ಕಾರಗಳು :** ಮಹಾಮನ ಅಭಿನಂದನಾ ಗ್ರಂಥ, ಮಹಾಕವಿ ಷಡಕ್ಷರದೇವ ಸ್ಮಾರಕ ಪ್ರಶಸ್ತಿ, ಚಾಮರಾಜನಗರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮೈಸೂರು ರೋಟರಿ (ಪೂರ್ವ) ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ವಿವಿಧ ಸಂಘಸಂಸ್ಥೆಗಳು ಹಾಗೂ ಶ್ರೀಮಠಗಳಿಂದ ಸನ್ಮಾನಿತರಾಗಿದ್ದಾರೆ.

**ಇತರೆ ವಿಷಯ :** ಪ್ರೊ. ಮಲೆಯೂರು ಅವರದು ಅತ್ಯಂತ ವಿಶೇಷವಾದ ವ್ಯಕ್ತಿತ್ವ. ಅವರು ಜಿಲ್ಲಾ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು. ಹಲವಾರು ಶ್ರೀಮಠಗಳ ಕಾರ್ಯಕ್ರಮಗಳಲ್ಲಿ ಬಸವಾದಿ ಶರಣರ ಹಾಗೂ ಪೂಜ್ಯ ಸ್ವಾಮೀಜಿಗಳವರ ಬಗ್ಗೆ ಉತ್ತಮವಾದ ಧಾರ್ಮಿಕ ಭಾಷಣಗಳನ್ನು ಮಾಡಿ ಸಭಿಕರ ಮೆಚ್ಚುಗೆಯನ್ನು ಪಡೆಯುತ್ತಿದ್ದರು. ಆದರೆ ಧಾರ್ಮಿಕ ಆಚರಣೆಗಳಲ್ಲಿ ಅವರಿಗೆ

ವೈಯಕ್ತಿಕವಾಗಿ ಆಸಕ್ತಿ ಇರಲಿಲ್ಲ. ಆದರೂ ಕೊನೆಯ ದಿನಗಳಲ್ಲಿ ಸುತ್ತೂರು ಜಗದ್ಗುರುಗಳವರ ಪಾದುಕೆಗಳನ್ನು ತಮ್ಮ ಬಳಿ ಶ್ರೀರಕ್ಷೆಯಂತೆ ಇರಿಸಿಕೊಂಡಿದ್ದರು. ನನ್ನ ಚಿಕ್ಕ ವಯಸ್ಸಿನಲ್ಲಿ ಪ್ರಮುಖ ದೇವನೂರು ಶ್ರೀಮಠದ ಸ್ವಾಮಿಗಳಾಗುವ ಅವಕಾಶ ಒದಗಿಬಂದಿತ್ತು, ಅದನ್ನು ತಿರಸ್ಕರಿಸಿದೆ ಎಂದು ಅವರು ಹಲವು ಬಾರಿ ಹೇಳುತ್ತಿದ್ದರು. ಅವರಲ್ಲಿ ವಿಚಾರವಿತ್ತು. ಆದರೆ ಯಾವುದೇ ವಿಚಾರವಾಗಿ ಹಠ ತಾಳುತ್ತಿರಲಿಲ್ಲ. ಎಲ್ಲವನ್ನೂ ಸಮಚಿತ್ತದಿಂದ ಆಲಿಸುತ್ತಿದ್ದರು. ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಒಂದು ಅರ್ಥದಲ್ಲಿ ಅವರು ಧರ್ಮವನ್ನೂ ಮೀರಿ ಬೆಳೆದರು.

ನಗರ್ಲೆ ಗ್ರಾಮದಲ್ಲಿ ಹಿಂದೆ ದೇವನೂರರ ಅವರ ತಾಯಿ ಸಂಬಂಧಿಕರು ಇದ್ದರು. ಆಗ ಅವರು ಅಲ್ಲಿಗೆ ಬಂದು ಹೋಗುತ್ತಿದ್ದರು. ನಮ್ಮ ಕುಟುಂಬದವರಿಗೂ ಅವರ ಪರಿಚಯವಿತ್ತು. ನಂಜನಗೂಡು ಜೆಎಸ್‌ಎಸ್ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಅವರು ಅಲ್ಲಿ (1994–95) ಅಧ್ಯಾಪಕರಾಗಿದ್ದರು. ನಾನು ತರಗತಿಯಲ್ಲಿ ಕುಳಿತು ಅವರ ಪಾಠಗಳನ್ನು ಕೇಳಲಿಲ್ಲವಾದರೂ, ಅವರು ನನಗೆ ಒಂದು ರೀತಿಯ ಪರೋಕ್ಷ ಗುರುಗಳಾಗಿದ್ದರು. ನಾನು ಬೆಂಗಳೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಪ್ರೊ. ಮಲೆಯೂರು ಅವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ಬರುತ್ತಿದ್ದರು. ಶರಣ ಸಾಹಿತ್ಯ ಪರಿಷತ್ತಿನೊಡನೆ ನನ್ನ ನಿಕಟ ಸಂಬಂಧ ಇದ್ದುದನ್ನು ತಿಳಿದು ಮೈಸೂರಿಗೇ ಬಂದುಬಿಡುವಂತೆ ಒತ್ತಾಯಿಸಿದ್ದರು. ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿಯವರ ಸಂಪಾದಕತ್ವದ "ಪ್ರಸಾದ" ಪತ್ರಿಕೆಯಲ್ಲಿ 2011ರಿಂದ ಕಾರ್ಯ ನಿರ್ವಹಿಸುವ ಭಾಗ್ಯ ನನಗೆ ದೊರೆಯಿತು. ನನ್ನ "ಹೊಂಬಾಳೆ" ಎಂಬ ಕೃತಿಗೆ ಮುನ್ನುಡಿ ಬರೆದು ಹಾರೈಸಿದ್ದರು. ಹಾಗೆಯೇ "ಗ್ರಾಮದೇವತೆಗಳು" ಕೃತಿ ನಗರ್ಲೆ ಗ್ರಾಮದಲ್ಲಿ ಬಿಡುಗಡೆಯಾದಾಗ ಈ ಎರಡು ಕೃತಿಗಳ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು. "ನುಡಿದೀಪ್ತಿ" ಕೃತಿಗೆ ನಲ್ನುಡಿ ಬರೆದು ನನಗೆ ಸಾಹಿತ್ಯ ಪೋಷಕರಾಗಿ ಆಶೀರ್ವದಿಸುತ್ತಿದ್ದರು.

ನಮ್ಮ ತಂದೆಯವರು ಜನವರಿ 2022ರಲ್ಲಿ ತೀರಿಕೊಂಡಾಗ ಅಂತಿಮ ದರ್ಶನಕ್ಕೆ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರನ್ನು ನಗರ್ಲೆಗೆ ಕರೆದುಕೊಂಡು ಬಂದು ನನಗೆ ಸಾಂತ್ವನದ ಮಾತುಗಳನ್ನಾಡಿ, ಧೈರ್ಯ ತುಂಬಿದ್ದರು. ನನ್ನ ಎಲ್ಲ ಕೆಲಸಗಳನ್ನು ಪ್ರೋತ್ಸಾಹಿಸುತ್ತಿದ್ದರು. ಪ್ರೊ. ಮಲೆಯೂರು ಅವರನ್ನು ಪರಮಪೂಜ್ಯ ಜಗದ್ಗುರುಗಳವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ನೇಮಿಸಿದಾಗ ತುಂಬಾ ಸಂತೋಷಪಟ್ಟವರಲ್ಲಿ ನಾನೂ ಒಬ್ಬ. ಆದರೆ ದುರ್ದೈವದ ಸಂಗತಿ, ನಂತರ ಅವರಿಗೆ ಆರೋಗ್ಯ ಸ್ಪಂದಿಸಲಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಪರಿಷತ್ತಿನ ಕಾರ್ಯ ನಿರ್ವಹಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ವಿಧಿಯ ಆಟ ಬೇರೆಯಾಗಿತ್ತು. ದೈಹಿಕವಾಗಿ ಅವರು

ಕುಗ್ಗಿದ್ದರು. ಆದರೆ ಮಾನಸಿಕವಾಗಿ ಎಂದೂ ಕುಗ್ಗಿದವರಲ್ಲ. ಕೊನೆಯ ದಿನಗಳಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿದ್ದರು. ನೋಡಲು ಹೋದಾಗಲೆಲ್ಲ ಪ್ರೀತಿಯಿಂದ ಮಾತನಾಡಿಸಿ ನೋವನ್ನು ನುಂಗಿ ನಗುಮುಖ ತೋರಿಸುತ್ತಿದ್ದ ನಂಜುಂಡ ಅವರು. 8.3.2023ರ ಮಧ್ಯರಾತ್ರಿ ಅವರು ನಿಧನರಾದರು. ಅಂತಿಮ ದರ್ಶನಕ್ಕಾಗಿ ಮೈಸೂರು, ನಂಜನಗೂಡಿನ ವಿವಿಧ ಸ್ಥಳಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. "ಶರಣರ ಸಾವನ್ನು ಮರಣದಲ್ಲಿ ನೋಡು" ಎಂಬ ನಾಣ್ಣುಡಿಯಂತೆ ಆ ಮಹಾಪ್ರಸ್ಥಾನದ ಮೆರವಣಿಗೆ ನಡೆಯಿತು. ಮಾರನೆಯ ದಿನ (9.3.2023) ಗುರುವಾರ ಮಲೆಯೂರಿನ ಅವರ ಸಹೋದರರ ತೋಟದಲ್ಲಿ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಪ್ರೊ. ಮಲೆಯೂರರ ಅಂತಿಮ ದರ್ಶನದಲ್ಲಿ ಜಗದ್ಗುರುಗಳವರು, ಮಠಾಧಿಪತಿಗಳು, ರಾಜಕೀಯ ಮುಖಂಡರುಗಳು, ಸಾಹಿತಿಗಳು, ಸ್ನೇಹಿತರು, ಸಾರ್ವಜನಿಕರು, ಶಿಷ್ಯರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಅವರ ಸ್ಮರಣಾರ್ಥವಾಗಿ ರಾಜಧಾನಿ ಸೇರಿದಂತೆ ವಿವಿಧ ತಾಲೂಕು, ಜಿಲ್ಲೆಗಳಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮಗಳು ಜರುಗಿದವು. ಅಲ್ಲದೆ ಸುತ್ತೂರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನುಡಿನಮನ ಕಾರ್ಯಕ್ರಮ 16.3.2023ರಂದು ವಿಶೇಷವಾಗಿ ಮೈಸೂರಿನಲ್ಲಿ ನಡೆಯಿತು. ಪ್ರೊ. ಮಲೆಯೂರು ಗುರುಸ್ವಾಮಿಯವರ ಹೆಸರನ್ನು ಶಾಶ್ವತವಾಗಿ ಉಳಿಸುವಂತೆ ಮಾಡಲು ಶಿಷ್ಯರು, ಹಿತೈಷಿಗಳು ಮುಂದೆ ಒಂದು ಹಿರಿದಾದ ಒಂದು ಕಾರ್ಯಕ್ರಮ ರೂಪಿಸಲೆಂದು ಆಶಿಸುತ್ತೇನೆ.

□

– ಬಸವಣ್ಣ

# !!

## (ಪ್ರೊ. ಮಲೆಯೂರು ಗುರುಸ್ವಾಮಿ ಕುರಿತ ಪದ್ಯಾಂಜಲಿ)

-

;

!

ಫ

! !

? ?

? !

!

- - - - - !

!

- ?

# ನುಡಿ ನಮನ

**ಎಸ್. ಪುಟ್ಟಪ್ಪ ಮುಡಿಗುಂಡ**

## ಶ್ರೀ ಮಲೆಯೂರು ಗುರುಸ್ವಾಮಿರವರು

**ಶ್ರೀ**ಮತಿ ಮರಮ್ಮ ಮತ್ತು ಶಿವಣ್ಣ ಶರಣ ದಂಪತಿಗಳ ಸುಪುತ್ರರಾಗಿ ಜನಿಸಿದಿರಿ
**ಮ**ಲೆಯೂರು ಗುರುಸ್ವಾಮಿ ಎಂಬ ಹೆಸರಿನಿಂದ ಪ್ರಖ್ಯಾತರಾದಿರಿ, ಕ
**ಲೆ**ಸಾಹಿತ್ಯ ಸಂಸ್ಕೃತಿಯನ್ನು ಬದುಕಿನ ಉಸಿರಾಗಿಸಿಕೊಂಡಿರಿ, ಮ
**ಯೂ**ರನಂತೆ ಆಕರ್ಷಿಸುತ್ತಾ ಜಯಂತಿ ಎಂಬ ಸಾಧ್ವಿಯನು ವರಿಸಿದಿರಿ
**ರು**ಕ್ಮಿಣಿಯಂತೆ ಗುಣವಂತಳಾದ ಅನನ್ಯಳೆಂಬ ಮಗಳನ್ನು ಪಡೆದಿರಿ
**ಗು**ರುವಾಗಿ ಕಿರಿಯರಿಗೆ ಸನ್ನಡತೆ ಸಜ್ಜನಿಕೆ ಕಲಿಸಿ ಆದರ್ಶರಾದಿರಿ
**ರು**ಚಿ ಶುಚಿಯಾದ ಅನೇಕ ಕೃತಿಗಳನ್ನು ಲೋಕಾರ್ಪಣೆಗೊಳಿಸಿದಿರಿ
**ಸ್ವಾ**ನುಭವಿಗಳಾಗಿ ಸ್ವಾಭಿಮಾನಿಗಳಾಗಿ ಬದುಕಿ ತೋರಿದಿರಿ
**ಮಿ**ತ್ರತ್ವ ಸಾಧಿಸುತ ಹಿರಿಯ ಕಿರಿಯರೆನ್ನದೆ ವಿನಯವಂತರೆನಿಸಿದಿರಿ
**ರ**ವಿ ಕಾಣದ್ದನ್ನು ಕವಿ ಕಂಡ ಎಂಬಂತೆ ಎಲೆ ಮರೆಯ ಕಾಯಿಗಳನ್ನು ಲೋಕಕ್ಕೆ ತೋರಿದಿರಿ
**ವ**ಚನಗಳ ಬಿಂಬಿಸುವ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಿರಿ
**ರು**ದ್ರನಾ ಕರೆಗೆ ತಲೆಬಾಗಿ ರುದ್ರಭೂಮಿಯತ್ತ ಪಯಣಿಸಿದಿರಿ.

ಸಾಹಿತ್ಯದಾ ಹೊನಲನ್ನು ಹರಿಸಲು ಮತ್ತೊಮ್ಮೆ ಹುಟ್ಟಿ ಬನ್ನಿ ಗುರುಸ್ವಾಮಿಯವರೇ ನಿಮ್ಮ ಪವಿತ್ರಾತ್ಮಕ್ಕೆ ನುಡಿನಮನ.

□

# ಗ್ರಂಥ ಪರಾಮರ್ಶೆ

**'ಶರಣಚಿಂತಾಮಣಿ ಹರಳಯ್ಯ – ಕಲ್ಯಾಣಮ್ಮ'** ಮತ್ತು **'ಬಸವನ ಗುರುತಾಯಿ'** (ಅಕ್ಕನಾಗಮ್ಮನ ಕುರಿತ ತ್ರಿಪದಿ ಮಹಾಕಾವ್ಯ) ಕೃತಿಗಳನ್ನು ಡಾ. ಸೋಮನಾಥ ಯಾಳವಾರವರು ರಚಿಸಿದ್ದಾರೆ.

ಹರಳಯ್ಯ–ಕಲ್ಯಾಣಮ್ಮ ದಂಪತಿಗಳ ಕಥೆ ಸಮಗ್ರವಾಗಿ ದಾಖಲಾಗಬೇಕು ಎಂಬ ಭಾವನೆಯಿಂದ ನೀವು ಕೃತಿಯನ್ನು ರಚಿಸಿರುವುದು ಸ್ವಾಗತಾರ್ಹ. ಲಭ್ಯವಿರುವ ಮಾಹಿತಿಗಳನ್ನು ಕ್ರೋಡೀಕರಿಸಿ ಒಂದು ಸರಳ, ವಸ್ತುನಿಷ್ಠ ಕಥಾನಕ ರಚನೆಯಾಗಿದೆ. ಇದು ನಿಜಕ್ಕೂ ಶರಣಬಂಧುಗಳಿಗೆ ಆಪ್ಯಾಯಮಾನವೆನಿಸುತ್ತದೆ. ಜೊತೆಗೆ, ಹರಳಯ್ಯ–ಕಲ್ಯಾಣಮ್ಮ ದಂಪತಿಗಳಿಗೆ ಸಂಬಂಧಿಸಿದ ಹಂತಿಪದವನ್ನು ಅನುಬಂಧವಾಗಿ ನೀಡಿರುವುದು ಅಧ್ಯಯನಾಸಕ್ತರಿಗೆ ತುಂಬ  ಅನುಕೂಲವಾಗುವಂತಿದೆ. ಪಠ್ಯದ ನಡುವೆ ಇರುವ ಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿವೆ.

ಬಸವೇಶ್ವರರ ಸಹೋದರಿಯಾದ ಅಕ್ಕನಾಗಮ್ಮನವರನ್ನು ಕುರಿತ ಚರಿತ್ರೆ ಹಾಗೂ ಚಾರಿತ್ರ್ಯವನ್ನು ತ್ರಿಪದಿ ಛಂದಸ್ಸಿನಲ್ಲಿ ರಚಿಸಿರುವ ನಿಮ್ಮ ಸಾಹಿತ್ಯಕ ಸಾಹಸ ಮೆಚ್ಚುವಂಥದು. "ನನಗೆ ದಕ್ಕಿದಷ್ಟನ್ನು ಸಾಧ್ಯವಾದಷ್ಟು ಸರಳವಾಗಿ ನಿರೂಪಿಸಲು ಪ್ರಯತ್ನಿಸಿದ್ದೇನೆ" ಎಂಬ ನಿಮ್ಮ ವಿನಯದ ನಿಲುವೇ ನಿಮ್ಮ ಕಾವ್ಯಶಕ್ತಿಯೂ ಆಗಿದೆ. ಈ ಕಾವ್ಯದಲ್ಲಿರುವ 3336 ತ್ರಿಪದಿಗಳು,  ಸರಳತೆಯಿಂದ ಸಾಧಾರಣ ಓದುಗರನ್ನೂ ಮುಟ್ಟುವ ಅಂತಸ್ಸಾಮರ್ಥ್ಯವನ್ನು ಹೊಂದಿವೆ. ಶರಣಸಾಹಿತ್ಯಕ್ಕೆ ಇದು ನಿಜಕ್ಕೂ ಒಂದು ಅಪೂರ್ವ ಸೇರ್ಪಡೆ.

* * *

**AZAD - The Invincible** ಕೃತಿಯನ್ನು ಡಾ. ಬಾಬು ಕೃಷ್ಣಮೂರ್ತಿಯವರು ರಚಿಸಿದ್ದಾರೆ.

ಕ್ರಾಂತಿಕಾರಿ ಶ್ರೀ ಚಂದ್ರಶೇಖರ ಆಜಾದ್‌ರವರ ಜೀವನಚರಿತ್ರೆಯನ್ನು "ಅಜೇಯ" ಕೃತಿಯ ಮೂಲಕ ಚಿತ್ರಿಸಿ ಅದು ಕನ್ನಡ ಪ್ರಕಟಣ ಇತಿಹಾಸದಲ್ಲೇ ಒಂದು ವಿಕ್ರಮವನ್ನು ಡಾ. ಬಾಬು ಕೃಷ್ಣಮೂರ್ತಿಯವರು ಸ್ಥಾಪಿಸಿದುದು ಸರ್ವವಿದಿತ. ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಇಂಥ ಧೀರರ ನೈಜ ಇತಿಹಾಸವು ಜನರಿಗೆ, ಅದರಲ್ಲೂ ಯುವಜನರಿಗೆ ತಲುಪಬೇಕಾದದ್ದು ಇಂದಿನ ಅಗತ್ಯ. ಈ ಕೃತಿ ಈಗ ಇಂಗ್ಲಿಷಿಗೆ ಅನುವಾದಗೊಂಡು, ನಿಮ್ಮ ಸೃಜನಶೀಲ ಸಾಮರ್ಥ್ಯ ಕನ್ನಡೇತರರಿಗೂ ಪರಿಚಯವಾಗುತ್ತಿರುವುದು ಅತ್ಯಂತ ಸ್ವಾಗತಾರ್ಹ. ಇದು ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದವಾಗಬೇಕು; ಆಗ ಮಾತ್ರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ. ಇಂಗ್ಲಿಷ್ ಅನುವಾದ ಸರಳವೂ, ಪರಿಣಾಮಕಾರಿಯೂ ಆಗಿದ್ದು  ಉದ್ದೇಶವನ್ನು ಸಾಧಿಸಿದೆಯೆಂದು ಹೇಳಬಹುದು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಭಾರತ ಐತಿಹಾಸಿಕ ತಿರುವಿನತ್ತ ಸಾಗುತ್ತಿದೆ**

ಭಾರತ ಐತಿಹಾಸಿಕ ತಿರುವಿನತ್ತ ಸಾಗುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಫೆಬ್ರವರಿ 6ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಹದಿಮೂರನೆಯ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಹಲವಾರು ದಶಕಗಳಿಂದ ಭಾರತವು ಆಂತರಿಕ ಘರ್ಷಣೆಗಳು, ನೀತಿ ಸಮಸ್ಯೆಗಳು, ಬಡತನ, ಅನಕ್ಷರತೆ, ಭ್ರಷ್ಟಾಚಾರ ಇನ್ನೂ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಈಗ ಆ ಕಷ್ಟಗಳು ಮುಗಿಯುತ್ತಾ ಬರುತ್ತಿವೆ. ಆಹಾರ ಉತ್ಪಾದನೆ, ವಿದ್ಯುತ್ತೀಕರಣ, ಇಂಧನ, ಭದ್ರತೆ ಮತ್ತು ಮೂಲಸೌಕರ್ಯದಲ್ಲಿ ಹಿಂದೆಂದೂ ಕಾಣದ ವೇಗದಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಿದೆ ಎಂದು ಹೇಳಿದರು.

2339 ವಿದ್ಯಾರ್ಥಿಗಳಿಗೆ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ, 25 ವಿದ್ಯಾರ್ಥಿಗಳಿಗೆ ಮಾಸ್ಟರ್ ಆಫ್ ಫಿಲಾಸಫಿ, 65 ವಿದ್ಯಾರ್ಥಿಗಳಿಗೆ ಡಾಕ್ಟರ್ ಆಫ್ ಫಿಲಾಸಫಿ, 6 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಆಫ್ ಮೆಡಿಸಿನ್ ಮತ್ತು ಎಂಸಿಎಚ್ ಪದವಿಗಳನ್ನು ಪ್ರದಾನ ಮಾಡಲಾಯಿತು.

ಗೌ.ನ್ಯಾ. ಶ್ರೀ ಶಿವರಾಜ್ ಪಾಟೀಲ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರಿಂದರ್ ಸಿಂಗ್, ಡಾ. ಬಿ. ಮಂಜುನಾಥ್, ಡಾ. ಆರ್. ಸುಧೀಂದ್ರ ಭಟ್, ಡಾ. ಹೆಚ್. ಬಸವನಗೌಡಪ್ಪ, ಡಾ. ಎಂ.ಎನ್. ಸುಮಾ ಮೊದಲಾದವರುಗಳು ಉಪಸ್ಥಿತರಿದ್ದರು.

**ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವ ಜೆಎಸ್‌ಎಸ್ ಮಹಾವಿದ್ಯಾಪೀಠ**

ಜೆಎಸ್‌ಎಸ್ ಮಹಾವಿದ್ಯಾಪೀಠ ಜ್ಞಾನ ಮತ್ತು ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿದೆ ಎಂದು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾದ ಘನತೆವೆತ್ತ ಶ್ರೀ ಮನೋಜ್ ಸಿನ್ಹಾರವರು ಫೆಬ್ರವರಿ 11ರಂದು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ವಜ್ರ ಮಹೋತ್ಸವ ಹಾಗೂ ಜೆಎಸ್‌ಎಸ್ ಬಹುಮಾಧ್ಯಮ ಸಂಪನ್ಮೂಲ

ಕೇಂದ್ರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. 21ನೇ ಶತಮಾನದಲ್ಲಿ ಯುವಕರನ್ನು ಕೌಶಲವಂತರನ್ನಾಗಿಸಲು ಎಸ್‌ಜೆಸಿಇ ಶ್ರಮಿಸುತ್ತಿದೆ. ಸುತ್ತೂರು ಶ್ರೀಗಳು ಮಠವನ್ನು ದಿವ್ಯ ಕೇಂದ್ರವಾಗಿಸಿದ್ದಾರೆ. ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಕಳೆದೆಂಟು ವರ್ಷಗಳಲ್ಲಿ ಸೂಪರ್ ಪವರ್ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಎಸ್‌ಜೆಸಿಇ ಕಾಲೇಜು ಅಭಿವೃದ್ಧಿ ಹೊಂದಲು ಬಹಳಷ್ಟು ಜನ ಪರಿಶ್ರಮಪಟ್ಟಿದ್ದಾರೆ. ಕಾಲೇಜು ಪ್ರಗತಿಯ ಪಥದಲ್ಲಿ ಸಾಗಲು ಪ್ರಾಧ್ಯಾಪಕರು, ಅಧಿಕಾರಿಗಳು ಮಾತ್ರವಲ್ಲದೆ ಈ ಕಾಲೇಜಿನ ಆವರಣವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರ ಶ್ರಮವೂ ಅಷ್ಟೇ ಮುಖ್ಯವಾಗಿದೆ. ರಾಜೇಂದ್ರ ಶ್ರೀಗಳ ದೂರದೃಷ್ಟಿಯಿಂದ ಸ್ಥಾಪಿತವಾದ ಈ ಕಾಲೇಜು ಇಂದು ವಿಶ್ವವಿದ್ಯಾನಿಲಯವಾಗಿ ಬೆಳೆದು ನಿಂತಿದೆ. ಇದರ ಅಮೃತ ಮಹೋತ್ಸವವನ್ನು ತಾಂತ್ರಿಕ ಶಿಕ್ಷಣ ಪದವೀಧರರಾದ ಶ್ರೀ ಮನೋಜ್ ಸಿನ್ಹಾರವರು ಉದ್ಘಾಟಿಸುತ್ತಿರುವುದು ಔಚಿತ್ಯಪೂರ್ಣವಾಗಿದೆ ಎಂದು ತಿಳಿಸಿದರು.

ಕಾಲೇಜು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಎ.ಎನ್. ಸಂತೋಷ್ ಕುಮಾರ್ ಸ್ವಾಗತಿಸಿದರು. ಪ್ರೊ. ಎಂ.ಎಚ್. ಧನಂಜಯರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕರಾದ ಶ್ರೀ ಎಲ್. ನಾಗೇಂದ್ರ, ಡಾ. ಬಿ. ಸುರೇಶ್, ಪ್ರೊ. ಎಸ್.ಬಿ. ಕಿವಡೆ ಉಪಸ್ಥಿತರಿದ್ದರು.

**ಶೂನ್ಯ ನಿವ್ವಳ ಹೊರಸೂಸುವಿಕೆಗೆ ಶ್ರಮಿಸುತ್ತಿರುವ ಭಾರತದ ಕಾರ್ಯ ಶ್ಲಾಘನೀಯ**

ಅನೇಕ ಸವಾಲುಗಳ ಮಧ್ಯೆಯೂ ಶೂನ್ಯ ನಿವ್ವಳ ಹೊರಸೂಸುವಿಕೆಗೆ ಶ್ರಮಿಸುತ್ತಿರುವ ಭಾರತದ ಕಾರ್ಯಗಳು ಶ್ಲಾಘನೀಯವಾದುವು ಎಂದು ಅಂತಾರಾಷ್ಟ್ರೀಯ ವೃತ್ತಿಪರ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷರಾದ ಶ್ರೀ ಅನೂಪ್ ಎನ್. ಮೆಹ್ತಾರವರು ಫೆಬ್ರವರಿ 17ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 13ನೇ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ Tomorrow's India begins today : Leveraging Accountability for ESG ವಿಷಯ ಕುರಿತು ಉಪನ್ಯಾಸ ನೀಡುತ್ತಾ ತಿಳಿಸಿದರು. ಕಟ್ಟುನಿಟ್ಟಾದ ನಿಯಮಗಳ ಅನುಸರಣೆ ಮತ್ತು ಮಾನದಂಡಗಳ ಮೂಲಕ 2070ರ ವೇಳೆಗೆ ಗುರಿಯನ್ನು ಸಾಧಿಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಹೊಸ ಮಾನದಂಡಗಳು ಹೂಡಿಕೆದಾರರು ಮತ್ತು ಸರ್ಕಾರದ ನಡುವೆ ಪಾರದರ್ಶಕತೆಯನ್ನು ಹೆಚ್ಚಿಸಲಿವೆ. ಅಕೌಂಟೆಂಟ್‌ರನ್ನು ವಿಶ್ವಾಸಾರ್ಹ ಸಲಹೆಗಾರರು ಎಂದು ಕರೆಯಲಾಗುತ್ತದೆ. ಜಾಗತಿಕ ಆರ್ಥಿಕ ಅಭಿವೃದ್ಧಿಯಲ್ಲಿ ಅವರುಗಳ ಪಾತ್ರ ಮಹತ್ವದ್ದು. ಸಾರ್ವಜನಿಕರ ಮತ್ತು ಗ್ರಾಹಕರ ವಿಶ್ವಾಸವನ್ನು ಲೆಕ್ಕಪರಿಶೋಧಕರು

ಗಳಿಸಿದ್ದಾರೆ. ಸಣ್ಣ ವ್ಯಾಪಾರೋದ್ಯಮದಿಂದ ಹಿಡಿದು ಜಾಗತಿಕ ಆರ್ಥಿಕತೆಯ ರಕ್ಷಣೆಯಲ್ಲಿ ಅವರುಗಳ ಪಾತ್ರವಿದೆ. ಲೆಕ್ಕಪರಿಶೋಧಕರು ವೃತ್ತಿಯಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳುವ ಪ್ರಮುಖ ಮಾರ್ಗವೆಂದರೆ ಇಎಸ್‌ಜಿ. ಪರಿಸರ, ಸಮಾಜ ಮತ್ತು ಆಡಳಿತಗಳು ಲೆಕ್ಕ ಪರಿಶೋಧಕರಿಗೆ ಸ್ಥಿರತೆಯನ್ನು ಒದಗಿಸುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಭಾರತದಲ್ಲಿ ಇಎಸ್‌ಜಿ ಮಾಪನಕ್ಕೆ ಹಲವಾರು ಸವಾಲುಗಳಿವೆ. ಇಲ್ಲಿ ಕೋವಿಡ್–19ರ ಆರ್ಥಿಕ ಹಿಂಜರಿತದೊಂದಿಗೆ ಇನ್ನೂ ಹೋರಾಡಲಾಗುತ್ತಿದೆ. ಜಾಗತಿಕವಾಗಿ ನಿರುದ್ಯೋಗ, ಬೆಲೆ ಏರಿಕೆ, ಭೌಗೋಳಿಕ ಮತ್ತು ರಾಜಕೀಯ ಉದ್ವಿಗ್ನತೆಗಳು ಹೆಚ್ಚುತ್ತಿವೆ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಸದೃಢ ನಾಯಕತ್ವವನ್ನು ಹೊಂದಬೇಕಿದೆ. ಧೈರ್ಯದಿಂದ ಮುಂದಿನ ಹೆಜ್ಜೆ ಇಡಬೇಕು. ಬೆಳವಣಿಗೆಗೆ ಅವಕಾಶಗಳನ್ನು ಹುಡುಕಬೇಕು. ನಮ್ಮ ನಾಯಕತ್ವವು ಪ್ರಸ್ತುತದ ಬಿಕ್ಕಟ್ಟನ್ನು ತೊಡೆದುಹಾಕಿ ಭವಿಷ್ಯಕ್ಕಾಗಿ ಶ್ರಮಿಸಬೇಕಿದೆ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳು ಸಮಾಜದಲ್ಲಿನ ಸೌಲಭ್ಯ ವಂಚಿತರಿಗೆ ಸೌಲಭ್ಯಗಳನ್ನು ಕಲ್ಪಿಸಲೆಂದೇ ರಾಜೇಂದ್ರ ಶ್ರೀಗಳು ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸಿದರು. ಮೂಲಭೂತ ಸೌಲಭ್ಯಗಳು ಇಲ್ಲದಂತಹ ಪ್ರದೇಶಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ ಜನರಿಗೆ ಆಸರೆಯಾದರು. ಇಂದು ನಾಡಿನ ತುಂಬೆಲ್ಲ ಸಂಸ್ಥೆಗಳಿವೆ. ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ನೆನಪಿಗಾಗಿ ಪ್ರಚಲಿತ ವಿಚಾರಗಳು ಮತ್ತು ವಿದ್ಯಮಾನಗಳ ಕುರಿತಾಗಿ ಪ್ರತಿ ವರ್ಷ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ. ವೈಯಕ್ತಿಕ ಹಿತಾಸಕ್ತಿಯನ್ನು ಬದಿಗೊತ್ತಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕಿದೆ. ಸರ್ಕಾರದ ಯೋಜನೆಗಳು ನೇರವಾಗಿ ಹಳ್ಳಿಗಳನ್ನು ತಲುಪಬೇಕಿದೆ. ಹಳ್ಳಿಗಳು ಅಭಿವೃದ್ಧಿಗೊಂಡರೆ ದೇಶ ಅಭಿವೃದ್ಧಿ ಹೊಂದಿದಂತೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಡಾ. ಹರೀಶ್ ಹಂದೆಯವರು ಕಳೆದ ವರ್ಷ ನೀಡಿದ 11ನೇ ದತ್ತಿ ಉಪನ್ಯಾಸ Poverty and Sustainability ಕೃತಿಯನ್ನು ಮೈಸೂರಿನ ಜಿಲ್ಲಾಧಿಕಾರಿಗಳಾದ ಡಾ. ಕೆ.ವಿ. ರಾಜೇಂದ್ರರವರು ಲೋಕಾರ್ಪಣೆಗೊಳಿಸಿದರು. ಬೆಂಗಳೂರಿನ ಆದಾಯ ತೆರಿಗೆ ಇಲಾಖೆ ವಿನಾಯಿತಿಗಳ ವಿಭಾಗದ ಆಯುಕ್ತರಾದ ಶ್ರೀ ಮಣಿಯನ್ ಮದಿವನ್ನನ್‌ರವರು ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಡಾ. ಹೆಚ್. ಬಸವನಗೌಡಪ್ಪ ಸ್ವಾಗತಿಸಿದರು. ಶ್ರೀ ಭಗವಾನ್ ವಂದಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

**ವಿವೇಚನಾಶಕ್ತಿಯಿರುವ ಶಿಕ್ಷಣದ ಅಗತ್ಯವಿದೆ**

ಸಮಾಜವನ್ನು ಸರಿಯಾದ ದಾರಿಗೆ ತರುವ ವಿವೇಚನಾಶಕ್ತಿಯಿರುವ ಶಿಕ್ಷಣದ ಅವಶ್ಯಕತೆಯಿದೆ ಎಂದು ಕೇರಳದ ರಾಜ್ಯಪಾಲರಾದ ಘನತೆವೆತ್ತ ಶ್ರೀ ಆರಿಫ್ ಮೊಹಮ್ಮದ್ ಖಾನ್‌ರವರು ಫೆಬ್ರವರಿ 17ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ

ನಡೆದ ಮೈಸೂರು ಜೆಎಸ್‌ಎಸ್ ಔಷಧವಿಜ್ಞಾನ ಕಾಲೇಜಿನ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಬುದ್ಧಿವಂತಿಕೆ ಇಲ್ಲದ ಶಿಕ್ಷಣ ನಿಷ್ಪ್ರಯೋಜಕ. ಶಿಕ್ಷಣದ ಉದ್ದೇಶ ಮಾಹಿತಿಯನ್ನು ನೀಡುವುದು ಮಾತ್ರವಲ್ಲದೆ, ವ್ಯಕ್ತಿಯಲ್ಲಿ ಆಧ್ಯಾತ್ಮಿಕತೆಯನ್ನು ಬೆಳೆಸುವುದಾಗಿದೆ. ಶಿಕ್ಷಣ ಮಾನವ ಬದುಕಿನಲ್ಲಿ ಬದಲಾವಣೆ ತರಬೇಕು. ಔಷಧ ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲಿಯೇ ಮೂರನೇ ದೊಡ್ಡ ದೇಶವಾಗಿದೆ. ಇದಕ್ಕೆ ಸಾಕ್ಷಿ ಕೋವಿಡ್ ಸಂದರ್ಭದಲ್ಲಿ ಲಸಿಕೆಯನ್ನು ಉತ್ಪಾದಿಸಿ ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳಿಗೂ ಪೂರೈಸಲಾಯಿತು ಎಂದರು.

ಪರಮಪೂಜ್ಯ ಜಗದ್ಗುರುಗಳವರು ಈ ಕಾಲೇಜು 1973ರಲ್ಲಿ ಪ್ರಾರಂಭಗೊಂಡು 50 ವರ್ಷಗಳ ಅವಧಿಯಲ್ಲಿ ಫಾರ್ಮಸಿ ಶಿಕ್ಷಣದಲ್ಲಿ ಜಾಗತಿಕ ಮಟ್ಟದಲ್ಲಿ ಬೆಳೆದು ನಿಂತಿದೆ. ಕಾಲೇಜಿನ ಅಭಿವೃದ್ಧಿಯಲ್ಲಿ ಪಾಲುದಾರರಾದ ಪ್ರಾಂಶುಪಾಲರು, ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಹಾಗೂ ಕಳೆದ 50 ವರ್ಷಗಳಲ್ಲಿ ಕಾಲೇಜಿನ ಮುಂದಾಳತ್ವ ವಹಿಸಿದ ಪ್ರತಿಯೊಬ್ಬರೂ ಅಭಿನಂದನೀಯರು ಎಂದು ಹೇಳಿದರು.

ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಜೆಎಸ್‌ಎಸ್ ಬೃಹತ್ ಸಂಸ್ಥೆ. ಐವತ್ತು ವರ್ಷಗಳಲ್ಲಿ ಒಂದು ಸಂಸ್ಥೆಯನ್ನು ವಿಶ್ವಮಟ್ಟದಲ್ಲಿ ಗುರುತಿಸುವಂತೆ ಮಾಡುವುದು ಸುಲಭದ ಮಾತಲ್ಲ. ಇದರ ಹಿಂದೆ ಇರುವ ಎಲ್ಲ ಸಿಬ್ಬಂದಿಯ ಪರಿಶ್ರಮ ಶ್ಲಾಘನೀಯ ಎಂದರು.

ಡಾ. ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ಡಾ. ಬಿ. ಸುರೇಶ್ ಉಪಸ್ಥಿತರಿದ್ದರು. ಕು. ಅರುಣಿಮಾ ಪ್ರಕಾಶ್ ಮತ್ತು ಕು. ನಿವೇದಿತಾ ಶಿವಕುಮಾರ್ ಪ್ರಾರ್ಥಿಸಿದರು. ಡಾ. ಸುರೀಂದರ್ ಸಿಂಗ್ ಪ್ರಾರ್ಥಿಸಿದರು. ಡಾ. ಟಿ.ಎನ್. ಪ್ರಮೋದ್ ಕುಮಾರ್ ವಂದಿಸಿದರು. ಡಾ. ಶಿಲ್ಪಾ ಪಾಲಾಕ್ಷ ಕಾರ್ಯಕ್ರಮ ನಿರೂಪಿಸಿದರು.

**ಮಾಧ್ಯಮ ಅಕ್ಯಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಶ್ರೀ ಸುತ್ತೂರು ಮಠದಿಂದ ಸನ್ಮಾನ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಫೆಬ್ರವರಿ 20ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ 2019ರಿಂದ 2022ರವರೆಗಿನ ಮಾಧ್ಯಮ ಅಕ್ಯಾಡೆಮಿ ಪ್ರಶಸ್ತಿ ಪುರಸ್ಕೃತ ಅಂಕಣಕಾರರಾದ ಪ್ರೊ. ಆರ್. ಇಂದಿರಾ, ಪತ್ರಕರ್ತಕರಾದ ಶ್ರೀ ಮುಳ್ಳೂರು ರಾಜು, ಶ್ರೀ ನಾಗೇಶ್ ಪಾಣತ್ತಲೆ, ಶ್ರೀ ರಮೇಶ್‌ಕುಮಾರ್ ನಾಯಕ್, ಶ್ರೀ ಕೆ.ಪಿ. ನಾಗರಾಜ್‌ರವರುಗಳನ್ನು ಸನ್ಮಾನಿಸಲಾಯಿತು.

ಕರ್ನಲ್ ಶ್ರೀ ಆರ್.ಆರ್. ಮೆನನ್, ಕರ್ನಲ್ ಶ್ರೀ ಮನೀಷ್ ಪ್ರಸಾದ್, ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾದ ಶ್ರೀ ಸಿ.ಕೆ. ಮಹೇಂದ್ರ, ಶ್ರೀ ಕೂಡ್ಲಿ ಗುರುರಾಜ್ ರವರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಎನ್‌ಸಿಸಿ ರಾಷ್ಟ್ರಭಕ್ತಿ, ಆತ್ಮವಿಶ್ವಾಸ, ಶಿಸ್ತು ಮತ್ತು ಶ್ರದ್ಧೆ ಬೆಳೆಸುತ್ತದೆ**

ಎನ್‌ಸಿಸಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಕ್ತಿ, ಆತ್ಮವಿಶ್ವಾಸ, ಶಿಸ್ತು ಮತ್ತು ಶ್ರದ್ಧೆಯನ್ನು ಬೆಳೆಸುತ್ತದೆ. ದೇಶದ ರಕ್ಷಣೆಗೆ ಇದು ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಫೆಬ್ರವರಿ 20ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ದೆಹಲಿಯಲ್ಲಿ ನಡೆದ 74ನೇ ಗಣರಾಜ್ಯೋತ್ಸವ ಹಾಗೂ ಎನ್‌ಸಿಸಿ ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗಾಗಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ತಿಳಿಸಿದರು. ಎನ್‌ಸಿಸಿಯಲ್ಲಿ ಇದ್ದು ತರಬೇತಿಯನ್ನು ಪಡೆದರೆ ಶಿಸ್ತನ್ನು ಕಲಿತಂತೆ. ಶಿಸ್ತನ್ನು ಕಲಿತರೆ ರಾಷ್ಟ್ರಭಕ್ತನಾದಂತೆ. ನಮ್ಮ ದೇಶದ ರಕ್ಷಣಾ ವ್ಯವಸ್ಥೆ ಅತ್ಯುತ್ತಮವಾಗಿದೆ. ಎಂತಹ ಸಂದರ್ಭದಲ್ಲಿಯೂ ಸವಾಲುಗಳನ್ನು ಎದುರಿಸುವ ಶಕ್ತಿ ನಮ್ಮ ರಕ್ಷಣಾ ವ್ಯವಸ್ಥೆಗೆ ಇದೆ. ಇಂತಹ ರಕ್ಷಣಾ ವ್ಯವಸ್ಥೆಗೆ ಎನ್‌ಸಿಸಿ ಸಾಕಷ್ಟು ವಿದ್ಯಾರ್ಥಿಗಳನ್ನು ತರಬೇತಿಗೊಳಿಸುತ್ತಿದೆ. ಮೈಸೂರು ವಿಭಾಗದಲ್ಲಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲರನ್ನು ರಾಷ್ಟ್ರಸೇವೆಗೆ ಸಿದ್ಧಗೊಳಿಸಬೇಕು ಎಂದು ಹೇಳಿದರು.

ಮೈಸೂರು ವಿಭಾಗದ ಎನ್‌ಸಿಸಿ ಗ್ರೂಪ್ ಕಮಾಂಡರ್ ಕರ್ನಲ್ ಶ್ರೀ ಆರ್.ಆರ್. ಮೆನನ್‌ರವರು ಶ್ರೀ ಸುತ್ತೂರು ಮಠ ಕಳೆದ ವರ್ಷದಿಂದ ನಮ್ಮ ಕೆಡೆಟ್‌ಗಳ ಸಾಧನೆಯನ್ನು ಗುರುತಿಸಿ ಅಭಿನಂದಿಸುತ್ತಿರುವುದು ಶ್ಲಾಘನೀಯ. ಮೈಸೂರು ವಿಭಾಗ ಅನೇಕ ದಾಖಲೆಗಳನ್ನು ಬರೆದಿದೆ. ಭೂದಳ, ವಾಯುದಳ ಮತ್ತು ನೌಕಾದಳದ ವಿಭಾಗದಲ್ಲಿ ಉತ್ತಮ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಇದಕ್ಕೆ ಕಾರಣ ಕೆಡೆಟ್‌ಗಳ ಸಮರ್ಪಣಾ ಮನೋಭಾವ ಮತ್ತು ಕಠಿಣ ಪರಿಶ್ರಮ. ಎಲ್ಲ ಅಧಿಕಾರಿಗಳು ಉತ್ತಮ ತರಬೇತಿ ನೀಡಿದ್ದಾರೆ ಎಂದು ಹೇಳಿದರು.

14 ಕರ್ನಾಟಕ ಬೆಟಾಲಿಯನ್ನಿನ ಕಮಾಂಡಿಂಗ್ ಆಫೀಸರ್ ಕರ್ನಲ್ ಶ್ರೀ ಮನೀಷ್ ಪ್ರಸಾದ್‌ರವರು ಕೆಡೆಟ್‌ಗಳನ್ನು ತರಬೇತುದಾರರು ದತ್ತು ತೆಗೆದುಕೊಂಡು ಪರಿಶ್ರಮದಿಂದ ತರಬೇತಿ ನೀಡುತ್ತಾರೆ. ಈ ವಿಭಾಗದ ಕೆಡೆಟ್‌ಗಳಿಗೆ ಉತ್ಸಾಹ ಮತ್ತು ಬದ್ಧತೆ ಹೆಚ್ಚಿದೆ. ಎಲ್ಲರ ಪರಿಶ್ರಮದಿಂದ ಇಂತಹ ಒಂದು ದೊಡ್ಡ ಸಾಧನೆ ಸಾಧ್ಯವಾಗಿದೆ. ಶುದ್ಧವಾದ ಆಧ್ಯಾತ್ಮಿಕ ಸ್ಥಳದಲ್ಲಿ ಎನ್‌ಸಿಸಿ ಕೆಡೆಟ್‌ಗಳನ್ನು ಅಭಿನಂದಿಸುತ್ತಿರುವುದು ಬಹಳ ಸುಂದರ ಹಾಗೂ ಔಚಿತ್ಯಪೂರ್ಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದೆಹಲಿಯಲ್ಲಿ ನಡೆದ 74ನೇ ಗಣರಾಜ್ಯೋತ್ಸವ, ಭೂ, ಜಲ ಮತ್ತು ವಾಯು ಸೈನಿಕ ಶಿಬಿರ, ಯೊಟಿಂಗ್, ರೆಗಟ್ಟಾ ಶಿಬಿರ ಮತ್ತು ಇಂಟರ್ ಡೈರೆಕ್ಟರೇಟ್ ಸರ್ವಿಸಸ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ 83

ಶಿಬಿರಾರ್ಥಿಗಳು, ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ 32 ಕೆಡೆಟ್‌ಗಳನ್ನು ಅಭಿನಂದಿಸಲಾಯಿತು ಹಾಗೂ ಎನ್‌ಸಿಸಿ ಮೈಸೂರು ವಿಭಾಗ ಹಾಗೂ ಘಟಕಗಳ ಅಧಿಕಾರಿಗಳು, ಸಂಬಂಧಿಸಿದ ಕಾಲೇಜುಗಳ ಎನ್‌ಸಿಸಿ ಅಧಿಕಾರಿಗಳು, ಪ್ರಾಂಶುಪಾಲರುಗಳು ಮತ್ತು ಕೆಡೆಟ್‌ಗಳ ಪೋಷಕರನ್ನು ಸನ್ಮಾನಿಸಲಾಯಿತು. ಅಭಿನಂದಿತರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕು. ಸುಸ್ಮಿತಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಆರ್. ಮೂಗೇಶಪ್ಪ ಅವರು ಸ್ವಾಗತಿಸಿದರು. ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎನ್‌ಸಿಸಿ ಅಧಿಕಾರಿಗಳಾದ ಶ್ರೀ ಹರ್ಷಕುಮಾರ್ ವಂದಿಸಿದರು. ಡಾ. ಎಲ್. ವಿನಯ್‌ಕುಮಾರ್ ನಿರೂಪಿಸಿದರು.

**ಮೂಢನಂಬಿಕೆಗೆ ಒಳಗಾಗದೇ ಚಿಕಿತ್ಸೆ ಕೊಡಿಸಬೇಕು**

ವಾಕ್ ಮತ್ತು ಶ್ರವಣ ದೋಷವಿದ್ದರೆ ಮೂಢನಂಬಿಕೆಗೆ ಒಳಗಾಗದೇ ಚಿಕಿತ್ಸೆ ಕೊಡಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಫೆಬ್ರವರಿ 28ರಂದು ವಿಶ್ವ ಶ್ರವಣ ದಿನಾಚರಣೆಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯನಿಗೆ ಪಂಚೇಂದ್ರಿಯಗಳು ಬಹಳ ಮುಖ್ಯ. ಇದರಲ್ಲಿ ಯಾವುದೇ ಒಂದು ದೋಷವಿದ್ದರು ಅವರಿಗೆ ಇನ್ನೊಬ್ಬರ ಅವಲಂಬನೆ ಬೇಕಾಗುತ್ತದೆ. ವಯಸ್ಕರಲ್ಲಿ ಮತ್ತು ವೃದ್ಧರಲ್ಲಿ ಕಿವಿಯ ಮೇಲೆ ಹೆಚ್ಚು ಒತ್ತಡದಿಂದ ಶ್ರವಣ ಸಮಸ್ಯೆ ಉಂಟಾಗುತ್ತದೆ. ಆದರೆ ಜನಿಸಿದ ಮಕ್ಕಳಲ್ಲಿ ಈ ಸಮಸ್ಯೆಯು ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಮೂಢನಂಬಿಕೆಗೆ ಒಳಗಾಗದೆ ಪೋಷಕರು ಇದನ್ನು ಅರಿತು ಶ್ರವಣ ಸಮಸ್ಯೆ ಕಂಡುಬಂದ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಮತ್ತು ಭಾಷಾ ತರಬೇತಿ ನೀಡಿದರೆ ಶ್ರವಣ ಸಮಸ್ಯೆಯನ್ನು ನಿವಾರಿಸಬಹುದು ಎಂದು ತಿಳಿಸಿದರು.

ಅಮೆರಿಕದ ಅಭಿ ಫ್ಯಾಮಿಲಿ ಫೌಂಡೇಶನ್ ಮತ್ತು ಅಭಿ ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ದೀಪಕ್ ಅಭಿರವರು ಶ್ರವಣದೋಷವು ಸಾಮಾನ್ಯ ಸಮಸ್ಯೆಯಾಗಿದೆ. ಇದಕ್ಕೆ ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ನೀಡಿ ಗುಣಪಡಿಸಬಹುದು. ಈ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಹುಟ್ಟಿದ ಮಕ್ಕಳಲ್ಲಿ ಶ್ರವಣದೋಷ ಕಂಡುಬಂದರೆ ತಡಮಾಡದೇ ವೈದ್ಯರ ಬಳಿ ತಪಾಸಣೆ ಮಾಡಿಸಬೇಕು. ಕಾಕ್ಲಿಯರ್ ಇಂಪ್ಲಾಂಟ್ ಸರ್ಜರಿ ಮುಖಾಂತರ ಚಿಕಿತ್ಸೆ ನೀಡಿ ನಂತರ ನಿಯಮಿತವಾಗಿ ಶ್ರವಣ ತರಬೇತಿಯನ್ನು ನೀಡಿದರೆ ಅದನ್ನು ಗುಣಪಡಿಸಬಹುದು. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ಇದಕ್ಕೆ ಸಹಾಯಹಸ್ತ ನೀಡಲಿದೆ ಎಂದು ತಿಳಿಸಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಡಾ. ಸಿ.ಜಿ. ಬೆಟಸೂರಮಠ ಮಾತನಾಡಿದರು. ಡಾ. ಬಿ. ಸುರೇಶ್, ಡಾ.

ಸುರಿಂದರ್ ಸಿಂಗ್, ಡಾ. ಎನ್.ಪಿ. ನಟರಾಜು ಡಾ. ಹೆಚ್. ಬಸವನಗೌಡಪ್ಪ, ಶ್ರೀ ಆರ್. ಮಹೇಶ್, ಡಾ. ಸಿ.ಪಿ. ಮಧು, ಡಾ. ಭಾರತಿ ಹಾಗೂ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಕನ್ನಡವನ್ನು ಕಲಿಯಿರಿ ಕನ್ನಡವನ್ನು ಕಲಿಸಿರಿ**

ಕನ್ನಡವನ್ನು ಕಲಿಯಿರಿ ಕನ್ನಡವನ್ನು ಕಲಿಸಿರಿ ಎಂಬ ಮಾತನ್ನು ಸ್ವಯಂಪ್ರೇರಣೆಯಿಂದ ಪಾಲಿಸಬೇಕು ಎಂದು ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಫೆಬ್ರವರಿ 25ರಂದು ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವದ ಅಂಗವಾಗಿ ಬಾರಿಸು ಕನ್ನಡ ಡಿಂಡಿಮವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳು, ಆದಿಚುಂಚನಗಿರಿ, ಸಿರಿಗೆರೆ, ಪೇಜಾವರ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ತಿಳಿಸಿದರು. ಕನ್ನಡವನ್ನು ಕಲಿಯುವ ಜೊತೆಗೆ ಕನ್ನಡವನ್ನು ಕಲಿಸಬೇಕು. ಕನ್ನಡವೊಂದು ವಿಶಿಷ್ಟ ಭಾಷೆ. ಕನ್ನಡ ಸಾಹಿತ್ಯವೂ ವಿಶಾಲವಾಗಿ ಹಬ್ಬಿದೆ. ಕನ್ನಡ ಓದುವುದರಿಂದ ಸಹಜವಾಗಿಯೇ ವ್ಯಕ್ತಿಯಲ್ಲಿ ಧರ್ಮ ಹಾಗೂ ಸಂಸ್ಕೃತಿಯ ಕಾಳಜಿ ಹುಟ್ಟಿಕೊಳ್ಳುತ್ತದೆ. ಬೇರೆ ಭಾಷೆಗಳಿಗೆ ಇಂಥದ್ದೊಂದು ಭಾಗ್ಯವಿಲ್ಲ. ಬಸವಣ್ಣನವರ ವಚನ, ಕುಮಾರವ್ಯಾಸನ ಕಾವ್ಯಗಳು, ಕುವೆಂಪುರವರ ರಾಮಾಯಣ ದರ್ಶನಂನಂತಹ ಕೃತಿಗಳು ವಿಶಾಲ ದೃಷ್ಟಿಕೋನವುಳ್ಳ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಆದಿಚುಂಚನಗಿರಿ ಮತ್ತು ಸಿರಿಗೆರೆ ಜಗದ್ಗುರುಗಳವರು ಮಾತನಾಡಿದರು. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆ, ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ, ಶ್ರೀ ವಿ. ಸುನೀಲ್‌ಕುಮಾರ್, ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿ, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರುಗಳು ಉಪಸ್ಥಿತರಿದ್ದರು.

**ಭಾರತೀಯ ಮಹಿಳೆಯರು ಉದ್ಯಮಿಗಳಾಗಲು ಮುಂದಾಗಬೇಕು**

ಭಾರತೀಯ ಮಹಿಳೆಯರು ಉದ್ಯಮಿಗಳಾಗಲು ಮುಂದಾಗಬೇಕು ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಉಪ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್‌ರವರು ಮಾರ್ಚ್ 5ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ 15ನೇ ಪದವೀಧರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಮಹಿಳೆಯರು ಆತ್ಮಸ್ಥೈರ್ಯ ಬೆಳೆಸಿಕೊಳ್ಳುವುದರ ಮೂಲಕ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದು ಇಲ್ಲ. ಪ್ರತಿಯೊಬ್ಬರಲ್ಲಿಯೂ ಸಹಾಯ ಮಾಡುವ ಮನೋಭಾವನೆ ಇರಬೇಕು. ಸಮಾಜದ ಸರ್ವಾಂಗೀಣ ಅಭಿವೃದ್ಧಿ ಪ್ರತಿಯೊಬ್ಬರ ಕರ್ತವ್ಯ. ಜೆಎಸ್‌ಎಸ್ ವಿದ್ಯಾಸಂಸ್ಥೆ ಎಲ್ಲಾ ವರ್ಗದವರಿಗೂ ಶಿಕ್ಷಣ ನೀಡುವುದರ

ಮೂಲಕ ಸಮಾಜದ ಅಭಿವೃದ್ಧಿಗೂ ಶ್ರಮಿಸುತ್ತಿದೆ. ಭಾರತವು ಜಿ–20 ಸಮ್ಮೇಳನದ ಮುಂದಾಳತ್ವ ವಹಿಸಿರುವುದು ಹೆಮ್ಮೆಯ ವಿಷಯ. ಈ ಸಮ್ಮೇಳನ ಯಶಸ್ವಿಯಾಗಲು ಅಂತಾರಾಷ್ಟ್ರೀಯ ಸಹಕಾರ ಅತ್ಯಗತ್ಯ ಎಂದು ಹೇಳಿದರು.

2021–22ನೇ ಸಾಲಿನ ಶೈಕ್ಷಣಿಕ ವರ್ಷದ ಒಟ್ಟು 687 ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು. ಕಲಾ ವಿಭಾಗದಲ್ಲಿ ಕು. ಬಿ.ಹೆಚ್. ಹರ್ಷಿತರಾವ್, ವಿಜ್ಞಾನ ವಿಭಾಗದಲ್ಲಿ ಕು. ಎಸ್.ಎಸ್. ಅಪೂರ್ವ, ವಾಣಿಜ್ಯ ವಿಭಾಗದಲ್ಲಿ ರಂಜಲ್‌ದಿಯಾ ಶೆಣೈ, ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ಕು. ಪಿ. ಭವ್ಯಶ್ರೀ, ಗಣಕ ವಿಜ್ಞಾನ ವಿಭಾಗದಲ್ಲಿ ಕು. ಎಸ್. ಅಶ್ವಿನಿ, ಎಂಎ ಅರ್ಥಶಾಸ್ತ್ರದಲ್ಲಿ ಪ್ರಿಯಾ, ಎಂಕಾಂನಲ್ಲಿ ಕು. ಸಾಲ್ ಸಬಿಯಾ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಕು. ಎ. ನಿಹಿಲಾ ಶಿಲ್ವಿಯಾ ಮೊದಲಿಗರಾಗಿ ಪದವಿ ಪಡೆದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ವಿದ್ಯಾರ್ಥಿನಿಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು ಹಾಗೂ ಸ್ವತಃ ಚಿತ್ರಿಸಿದ ಅರ್ಥಶಾಸ್ತ್ರಜ್ಞರ ಚಿತ್ರಪಟವನ್ನು ಅರ್ಥಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿನಿಗೆ ಬಹುಮಾನವಾಗಿ ನೀಡಿದರು. ಪ್ರಾಂಶುಪಾಲರಾದ ಡಾ. ಹೆಚ್.ಬಿ. ಸುರೇಶ್, ಕಾಲೇಜಿನ ಶೈಕ್ಷಣಿಕ ಡೀನ್‌ರಾದ ಡಾ. ರೇಚಣ್ಣ, ಪರೀಕ್ಷಾಂಗ ನಿಯಂತ್ರಣಾಧಿಕಾರಿಗಳಾದ ಶ್ರೀ ಎಂ.ಎಂ ಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ, ಕಾಲೇಜಿನ ನಿವೃತ್ತ ಪ್ರಾಂಶುಪಾಲರುಗಳು, ಕಾಲೇಜಿನ ಬೋಧಕ–ಬೋಧಕೇತರವರ್ಗ, ಪೋಷಕರು ಹಾಗೂ ನೂತನ ಪದವೀಧರರು ಪಾಲ್ಗೊಂಡಿದ್ದರು. ಡಾ. ಎಚ್.ಬಿ. ಸುರೇಶ್ ಸ್ವಾಗತಿಸಿದರು. ಶ್ರೀ ಹೊನ್ನಶೆಟ್ಟಿ ವಂದಿಸಿದರು. ಶ್ರೀ ಆರ್.ಎಸ್. ಕುಮಾರ್ ನಿರೂಪಿಸಿದರು.

**ಸಮಾಜಕ್ಕೆ ಬದುಕು ಸಮರ್ಪಿಸಿಕೊಂಡವರು**

ಸಿದ್ಧಗಂಗಾ ಮತ್ತು ಸಿದ್ಧೇಶ್ವರ ಶ್ರೀಗಳು ಬದುಕನ್ನು ಸಮಾಜಕ್ಕೆ ಸಮರ್ಪಿಸಿಕೊಂಡವರು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 1ರಂದು ಧಾರವಾಡದ ಲಿಂಗಾಯತ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪುಣ್ಯಸ್ಮರಣೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸಿದ್ಧಗಂಗಾ ಶ್ರೀಗಳು ಕಾಯಕ ಜೀವಿಗಳಾದರೆ, ಸಿದ್ಧೇಶ್ವರ ಶ್ರೀಗಳು ಜ್ಞಾನ ಜೀವಿಗಳು. ಇಬ್ಬರೂ ಶ್ರೇಷ್ಠ ಸಂತರು. ಇಬ್ಬರದೂ ಪ್ರಭಾವಶಾಲಿ ವ್ಯಕ್ತಿತ್ವ. ಅವರು ತೋರಿದ ಮಾರ್ಗದಲ್ಲಿ ಎಲ್ಲರೂ ಸಾಗಬೇಕಿದೆ ಎಂದು ಹೇಳಿದರು.

ಶ್ರೀ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಶ್ರೀ ಹರ್ಷಾನಂದ ಸ್ವಾಮಿಗಳು, ಡಾ. ವೀರಣ್ಣ ರಾಜೂರ, ಡಾ. ಪಿ.ಎಸ್. ಹಳಿಯಾಳರವರುಗಳು ಮಾತನಾಡಿದರು. ಶ್ರೀ ಗುರುರಾಜ ಹುಣಸಿಮರದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಂಕರ ಕುಂಬಿ ಕಾರ್ಯಕ್ರಮ ನಿರೂಪಿಸಿದರು.

**ಭಕ್ತರ ಸಹಾಯ – ಸಹಕಾರದಿಂದ ಮಠಗಳ ಅಭಿವೃದ್ಧಿ**

ಭಕ್ತರ ಸಹಾಯ – ಸಹಕಾರದಿಂದ ಮಠಗಳ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 1ರಂದು ಧಾರವಾಡ ಜಿಲ್ಲೆಯ ಉಪ್ಪಿನಬೆಟಗೇರಿ ಮೂರುಸಾವಿರ ವಿರಕ್ತಮಠದ ನೂತನ ಶಿಲಾಮಠದ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನಸ್ಸು ವಿಶಾಲವಾಗಿದ್ದರೆ ಭಗವಂತ ಎಲ್ಲವನ್ನೂ ದಯಪಾಲಿಸುತ್ತಾನೆ. ಇಲ್ಲಿನ ಜನಪ್ರತಿನಿಧಿಗಳು, ಭಕ್ತರ ಸಹಕಾರದೊಂದಿಗೆ ಭವ್ಯವಾದ ಶಿಲಾಮಠ ನಿರ್ಮಿಸಿದ್ದು ಶ್ಲಾಘನೀಯ. ಮೂರುಸಾವಿರ ವಿರಕ್ತಮಠವು ಧರ್ಮೋಪದೇಶದ ಜೊತೆಗೆ ಭಾವೈಕ್ಯದ ಸಂದೇಶವನ್ನು ಸಾರುತ್ತಿದೆ ಎಂದು ಹೇಳಿದರು.

ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು, ಶಾಸಕರಾದ ಶ್ರೀ ಅಮೃತ್ ದೇಸಾಯಿ, ಮಾಜಿ ಶಾಸಕರಾದ ಶ್ರೀಮತಿ ಸೀಮಾ ಮಸೂತಿ ಮತ್ತು ಶ್ರೀ ತವನಪ್ಪ ಅಷ್ಟಗಿಯವರು ಮಾತನಾಡಿದರು. ಅಮೀನಗಡ, ಮುನವಳ್ಳಿ, ಬೈಲಹೊಂಗಲ, ಜಂಬಗಿ, ಖೇಡಗಿ ಮಠಗಳ ಶ್ರೀಗಳು ಹಾಗೂ ಶ್ರೀ ಏಕಗಮ್ಯಾನಂದ ಸ್ವಾಮಿಗಳು ಉಪಸ್ಥಿತರಿದ್ದರು.

**ದೊಡ್ಡ ಕನಸುಗಳೊಂದಿಗೆ ಪರಿಶ್ರಮದಿಂದ ದುಡಿಯಿರಿ**

ದೊಡ್ಡ ಕನಸುಗಳನ್ನು ಕಂಡು ಅವುಗಳನ್ನು ನನಸು ಮಾಡಿಕೊಳ್ಳಲು ಪರಿಶ್ರಮದಿಂದ ದುಡಿದು ಸಾಧಕರಾಗಿ ಹೊರಹೊಮ್ಮಬೇಕು ಎಂದು ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಸಿ. ಶಿಖಾರವರು ಮಾರ್ಚ್ 12ರಂದು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 15ನೆಯ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳಿಗೆ ಪದವೀಧರರ ದಿನಾಚರಣೆ ಬಹುಮುಖ್ಯವಾದ ದಿನ. ಹಿಂದಿನ ನಿಮ್ಮ ಗುರಿ ಕನಸುಗಳು ಸಾಕಾರಗೊಂಡು ಮುಂದಿನ ಜೀವನದ ಗುರಿ ಮತ್ತು ಕನಸುಗಳನ್ನು ಕಾಣುವ ಕ್ಷಣವಿದು. ವಿದ್ಯಾರ್ಥಿಗಳು ಸದಾ ಕ್ರಿಯಾಶೀಲರಾಗಿರಬೇಕು. ಹೊಸ ಅನ್ವೇಷಣೆಗಳ ಕಡೆ ಚಿಂತಿಸಬೇಕು. ನಕಾರಾತ್ಮಕವಾದ ಆಲೋಚನೆಯಿಂದ ದೂರವಿರಬೇಕು. ದೇಶ, ರಾಜ್ಯ, ಊರು ಹಾಗೂ ಸಮಾಜಕ್ಕೆ ಕೊಡಬಹುದಾದ ಅತ್ಯುತ್ತಮ ಕೊಡುಗೆಗಳ ಬಗ್ಗೆ ಸದಾ ಚಿಂತಿಸಿ. ತಂತ್ರಜ್ಞಾನ ಇಂದು ತುಂಬಾ ಅಗತ್ಯವಾಗಿದ್ದು, ಇದರೊಂದಿಗೆ ವಿದ್ಯಾರ್ಥಿಗಳ ಒಡನಾಟ ಹೆಚ್ಚಿದೆ. ಸಾಮಾಜಿಕ ಜಾಲತಾಣಗಳ ಬಳಕೆ ಇಂದು ವ್ಯಸನವಾಗಿದೆ. ಎಲ್ಲಕ್ಕಿಂತ ಮನುಷ್ಯನ

ಮೆದುಳಿನ ಕಾರ್ಯಶಕ್ತಿಯೇ ಅತ್ಯುತ್ತಮವಾದದ್ದು. ಆದುದರಿಂದ ವಿದ್ಯಾರ್ಥಿಗಳು ಮೆದುಳನ್ನು ನಂಬಿ ಮನೋಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ನೂತನ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿಭಾಗಗಳಿಂದ ಒಟ್ಟು 1054 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಹೆಚ್ಚು ಅಂಕ ಪಡೆದ ಒಟ್ಟು 65 ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು. 10 ವಿದ್ಯಾರ್ಥಿಗಳು ವಿವಿಧ ದತ್ತಿ ಪುರಸ್ಕಾರಗಳಿಗೆ ಪಾತ್ರರಾದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಸನ್ನಿಧಿ ಮತ್ತು ಕು. ವಾಸವಿ ಭಟ್ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್ ವಂದಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ ಉಪಸ್ಥಿತರಿದ್ದರು. ಡಾ. ಎನ್. ರಾಜೇಂದ್ರ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

**ಸಾಮಾಜಿಕ ಚಿಂತನೆಯ ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ**

ಪ್ರೊ. ಮಲೆಯೂರು ಗುರುಸ್ವಾಮಿಯವರು ಸಾಮಾಜಿಕ ಚಿಂತನೆಯನ್ನು ಒಳಗೊಂಡ ಬರಹಗಾರರಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 16ರಂದು ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಮತ್ತು ನಗರ ಘಟಕಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಪ್ರೊ. ಮಲೆಯೂರು ಗುರುಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಗುರುಸ್ವಾಮಿಯವರು ಸಮಾಜದ ಆಗು–ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿ, ಆಳವಾದ ಅಧ್ಯಯನ ನಡೆಸುತ್ತಿದ್ದರು. ಈ ಗುಣಗಳಿಂದ ಅವರಿಗೆ ಸಾಮಾಜಿಕ ನೆಲೆಗಟ್ಟಿನ ಚಿಂತನೆಯುಳ್ಳ ಸಾಹಿತ್ಯ ರಚಿಸಲು ಸಾಧ್ಯವಾಯಿತು. ಅವರು ಬದುಕನ್ನು ಸಹಜವಾಗಿ ಸ್ವೀಕರಿಸಿದ್ದರು. ಜನರನ್ನು ಹಿಡಿದಿಟ್ಟುಕೊಳ್ಳಬಲ್ಲ ಮಾತಿನ ಶೈಲಿ ಅವರಲ್ಲಿತ್ತು. ಸಾರ್ವಜನಿಕರು ಕುತೂಹಲದಿಂದ ಕೇಳುವಂತೆ ಮಾತನಾಡುತ್ತಿದ್ದರು. ನಿರ್ಲಿಪ್ತವಾದ ಜೀವನ ನಡೆಸಿದ ಅವರು, ಅನವಶ್ಯಕ ಚರ್ಚೆಗಳಲ್ಲಿ ಭಾಗವಹಿಸುತ್ತಿರಲಿಲ್ಲ ಎಂದು ಹೇಳಿದರು.

ಹೊಸಮಠ, ನೀಲಕಂಠಸ್ವಾಮಿ ಮಠಗಳ ಶ್ರೀಗಳು, ಶ್ರೀ ತೋಂಟದಾರ್ಯ, ಶ್ರೀ ಹೆಚ್.ವಿ. ರಾಜೀವ್, ಶ್ರೀ ಕೆ.ಸಿ. ಶಿವಪ್ಪ, ಪ್ರೊ. ಎನ್.ಎಂ. ತಳವಾರ್, ಶ್ರೀ ಶಂಕರ್ ದೇವನೂರು, ಪ್ರೊ. ಕೆ.ಸಿ. ಬಸವರಾಜು, ಡಾ. ಪದ್ಮಾಶೇಖರ್, ಡಾ. ಲತಾ ರಾಜಶೇಖರ್, ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಕೆ.ವಿ. ಮಲ್ಲೇಶ್, ಶ್ರೀ ರಘುರಾಂ ವಾಜಪೇಯಿ, ಶ್ರೀ

ಚಿನ್ನಸ್ವಾಮಿ ವಡ್ಡಗೆರೆ, ಶ್ರೀ ಮಡ್ಡೀಕೆರೆ ಗೋಪಾಲ್, ಶ್ರೀ ಕೃಷ್ಣಪ್ಪ, ಶ್ರೀ ಶಿವಾಜಿ ಜೋಯಿಸ್ ಮೊದಲಾದವರುಗಳು ಮಾತನಾಡಿದರು.

**ಮಹಾತಪಸ್ವಿ ಮಹದೇಶ್ವರರು**

ಮಹದೇಶ್ವರರು ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿದ ಮಹಾತಪಸ್ವಿಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 18ರಂದು ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಹದೇಶ್ವರರ 108 ಅಡಿ ಎತ್ತರದ ಪ್ರತಿಮೆ ಲೋಕಾರ್ಪಣೆ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮಹದೇಶ್ವರರು ಬರಿಗಾಲಿನಲ್ಲೇ ಬೆಟ್ಟ–ಗುಡ್ಡ, ಕಾಡು–ಮೇಡುಗಳಲ್ಲಿ ಸಂಚಾರ ಮಾಡಿದರು. ಕತ್ತಲ ರಾಜ್ಯವನ್ನು ಬೆಳಗಿದ ಕೀರ್ತಿ ಮಹದೇಶ್ವರರಿಗೆ ಸಲ್ಲುತ್ತದೆ. ರಾಜ್ಯ ಮಾತ್ರವಲ್ಲದೇ ನೆರೆ ರಾಜ್ಯಗಳಿಂದಲೂ ಶಿವರಾತ್ರಿ ಮತ್ತು ಯುಗಾದಿಯ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಾರೆ. ಬೆಟ್ಟದಲ್ಲಿ ಯಾವುದೇ ಭಾಗದಲ್ಲಿ ನಿಂತು ನೋಡಿದರು ಹುಲಿಯ ಮೇಲೆ ಸವಾರಿ ಮಾಡುತ್ತಿರುವ ಮಹದೇಶ್ವರರ ಮೂರ್ತಿ ದರ್ಶನವಾಗುತ್ತದೆ. ಎಲ್ಲರ ಶ್ರಮದಿಂದ ಕಾರ್ಯ ಸಾಧ್ಯವಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಮಹದೇಶ್ವರರ ಪವಾಡಗಳು ಇನ್ನೂ ಜನರ ಮನಸ್ಸಿನಲ್ಲಿದ್ದು, ಜಾತಿ ಮತ ಭೇದವಿಲ್ಲದೆ ದಕ್ಷಿಣ ಕರ್ನಾಟಕದಲ್ಲಿ ರೈತಾಪಿ ವರ್ಗದವರು ಹೆಚ್ಚಾಗಿ ಭಾಗವಹಿಸುವಂತಹ ಶ್ರದ್ಧಾ ಭಕ್ತಿಯ ಕೇಂದ್ರವಾಗಿದೆ. ಈ ಭಾಗದ ಲಕ್ಷಾಂತರ ಜನರು ಮಲೆ ಮಹದೇಶ್ವರರಿಗೆ ಪೂಜೆ ಸಲ್ಲಿಸುವ ಮೂಲಕ ತಮ್ಮ ಕಾಯಕವನ್ನು ಪ್ರಾರಂಭಿಸುವಂತಹ ಸಾಂಪ್ರದಾಯಿಕ ಪದ್ಧತಿ ಇಲ್ಲಿದೆ. ಮನುಷ್ಯನಿಗೆ ಎಷ್ಟೇ ವ್ಯಾಕುಲಗಳಿದ್ದರೂ ದೇವಸ್ಥಾನಕ್ಕೆ ತೆರಳಿ ಶಾಂತಿ ಮತ್ತು ಸಮಾಧಾನದಿಂದ ದೈವ ಚಿತ್ತರಾಗಿ ನಡೆದುಕೊಳ್ಳುತ್ತೇವೆ. ಇಲ್ಲಿ ಎಷ್ಟೇ ದೂರದಲ್ಲಿ ನಿಂತರು ಕೂಡ ಸುಂದರವಾಗಿ ಕಾಣುವ ಪ್ರತಿಮೆಯನ್ನು ನಿರ್ಮಾಣ ಮಾಡಲಾಗಿದೆ. ಈ ಪ್ರತಿಮೆ ಕ್ಷೇತ್ರದ ಮಹತ್ವ ಹಿರಿಮೆ ಮತ್ತು ಗರಿಮೆಯನ್ನು ಸಾರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಾಲೂರು ಮಠದ ಉಭಯ ಶ್ರೀಗಳು, ಸಚಿವರುಗಳಾದ ಶ್ರೀ ವಿ. ಸೋಮಣ್ಣ, ಶ್ರೀ ಎಸ್.ಟಿ. ಸೋಮಶೇಖರ್, ಶಾಸಕರುಗಳಾದ ಶ್ರೀ ಎನ್. ಮಹೇಶ್, ಶ್ರೀ ಆರ್. ನರೇಂದ್ರ, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಬಿ. ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷರಾದ ಶ್ರೀ ನಿಜಗುಣರಾಜು, ಜಿಲ್ಲಾಧಿಕಾರಿಗಳಾದ ಶ್ರೀ ಡಿ.ಎಸ್. ರಮೇಶ್, ಪ್ರಾಧಿಕಾರದ ಶ್ರೀಮತಿ ಎಸ್. ಕಾತ್ಯಾಯಿನಿದೇವಿ, ಶ್ರೀ ಬಸವರಾಜು, ಶ್ರೀಮತಿ ಶೈಲಜ ಸೋಮಣ್ಣ ಮೊದಲಾದವರುಗಳು ಉಪಸ್ಥಿತರಿದ್ದರು.

□



-

**ಭಕ್ತಿ ಇಲ್ಲದ ಬಡವ ನಾನಯ್ಯ**
ಡಾ. ಆರ್.ಬಿ. ಚಿಲುಮಿ
ಪ್ರ.: ಎಸ್ಎಲ್ಎನ್ ಪಬ್ಲಿಕೇಷನ್
ಬನಶಂಕರಿ 2ನೇ ಹಂತ
ಬೆಂಗಳೂರು
ಪು. 168, ಬೆಲೆ: 150/-

**ಪುಸ್ತಕಾವಲೋಕನ ಮಾರ್ಗ (ಲೇಖನಮಾಲೆ)**
ಡಾ. ಆರ್.ಬಿ. ಚಿಲುಮಿ
ಪ್ರ.: ಶುಭದಾ ಎಂಟರ್ ಪ್ರೈಸಸ್
ನಾಗರಬಾವಿ 2ನೇ ಹಂತ
ಬೆಂಗಳೂರು
ಪು: 244. ಬೆಲೆ: 180/–

**ಅವಲೋಕನದ ದಾರಿ ಕ್ರಮಿಸಿದಾಗ**
ಡಾ. ಆರ್.ಬಿ. ಚಿಲುಮಿ
ಪ್ರ.: ನಿವೇದಿತ ಪ್ರಕಾಶನ
ಬನಶಂಕರಿ 2ನೇ ಹಂತ
ಬೆಂಗಳೂರು, ಪು: 232. ಬೆಲೆ: 200/–

**ಸುಭಾಷಿತ ಸೌರಭ**
ಗಮಕಿ ವಿದ್ವಾನ್
ಎಂ.ಜಿ. ಸಿದ್ದರಾಮಯ್ಯ
ಪ್ರ.: ತಾಯಿ ಪ್ರಕಾಶನ, ತುಮಕೂರು
ಪು. 128/- ಬೆಲೆ: 120/-

**ನಡೆದಾಡಿದ ದೇವರು**
ಡಾ. ಪ್ರದೀಪಕುಮಾರ್ ಹೆಬ್ರಿ
ಪ್ರ.: ಐಡಿಯಲ್ ಪಬ್ಲಿಕೇಷನ್, ಮಂಡ್ಯ
ಪು: 220. ಬೆಲೆ: 200/–

**ವಚನ ಸಂಶೋಧನಾ ಪಿತಾಮಹ ಡಾ. ಫ.ಗು. ಹಳಕಟ್ಟಿಯವರು**
ಪ್ರೊ. ಸಿದ್ದಣ್ಣ ಲಂಗೋಟಿ
(ಚಾಂದಕವತೆ)
ಪ್ರ.: ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ, ಬಸವಬೆಳಗು, ಮಹಂತೇಶ ನಗರ
ರಾಮದುರ್ಗ, ಬೆಳಗಾವಿ ಜಿ.
ಪು: 52. ಬೆಲೆ: 40/–

**ಶಿಲೆಗಳಲ್ಲಡಗಿದ ಸತ್ಯ**
ಸದ್ಯೋಜಾತ ಭಟ್
ಪ್ರ.: ಸಮನ್ವಿತ, ಬೆಂಗಳೂರು
ಪು: 284. ಬೆಲೆ: 250/–

**ಮಿಹಿರ ಕುಲಿ**
ಸದ್ಯೋಜಾತ ಭಟ್
ಪ್ರ.: ಸಮನ್ವಿತ, ಬೆಂಗಳೂರು
ಪು: 232. ಬೆಲೆ: 250/–

**ಮಾಗಧೇಯ**
ಸದ್ಯೋಜಾತ ಭಟ್
ಪ್ರ.: ಸಮನ್ವಿತ, ಬೆಂಗಳೂರು
ಪು: 328. ಬೆಲೆ: 300/–

**ಕಾಲಯಾನ**
ಸದ್ಯೋಜಾತ ಭಟ್
ಪ್ರ.: ಸಮನ್ವಿತ, ಬೆಂಗಳೂರು
ಪು: 192. ಬೆಲೆ: 170/–

**ನಾ ಸತ್ಯ (ವೇದದಲ್ಲಿನ ಕಥೆಗಳು)**
ಸದ್ಯೋಜಾತ ಭಟ್
ಪ್ರ.: ಸಮನ್ವಿತ, ಬೆಂಗಳೂರು
ಪು: 184. ಬೆಲೆ: 150/–

**ವಚನ ಸಾಹಿತ್ಯ ಮತ್ತು ತತ್ವಜ್ಞಾನ**
ಪ್ರೊ. ಸಿದ್ದಣ್ಣ ಲಂಗೋಟಿ (ಚಾಂದಕವತೆ)
ಪ್ರ.: ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ, ಬಸವಬೆಳಗು, ಮಹಾಂತೇಶ ನಗರ
ರಾಮದುರ್ಗ, ಬೆಳಗಾವಿ ಜಿ.
ಪು: 36. ಬೆಲೆ: 40/–

# ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
ನಂ. 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ವೈ.ಸಿ. ಭಾನುಮತಿ**
# 1123, ಕೇಶವದೀಪ
ಲಲಿತಾದ್ರಿ 1ನೇ ಕ್ರಾಸ್, ಕುವೆಂಪುನಗರ
ಮೈಸೂರು 570023
ಮೊ: 9449828366

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು 570023
ಮೊ: 9845309081

**ಡಾ. ಆರ್.ಬಿ. ಚಿಲುಮಿ**
ನಂ. 03, 'ಹೊಂಬೆಳಕು'
ಓಂ ಸ್ಕೂಲ್ ಹತ್ತಿರ
ಜಲದರ್ಶಿನಿ ನಗರ
ಧಾರವಾಡ 580003
ಮೊ: 9880206032

**ಡಾ. ಸೀ.ಚ. ಯತೀಶ್ವರ**
ಕನ್ನಡ ಪ್ರಾಧ್ಯಾಪಕರು
ಎವಿಕೆ ಮಹಿಳಾ ಕಾಲೇಜು
ಹಾಸನ 573201
ಮೊ: 9448867043

**ಶ್ರೀ ನಗರ್ಲೆ ಶಿವಕುಮಾರ**
ಬಿನ್ ಲೇಟ್ ಪಟೇಲ್ ರಾಜಶೇಖರ
ನಗರ್ಲೆ ಅಂಚೆ
ನಂಜನಗೂಡು ತಾ.
ಮೊ: 9845609652

**ಶ್ರೀ ಸು. ಬಸವರಾಜ ದೊಡ್ಡಟ್ಟಿ**
ನಂ.1317, ನಾರಾಯಣರಾಯರ ಅಗ್ರಹಾರ
ನಂಜನಗೂಡು 571301
ಮೊ: 9535014572

**ಶ್ರೀ ಎಸ್. ಪುಟ್ಟಪ್ಪ ಮುಡಿಗುಂಡ**
ನಂ. 21, 4ನೇ ಮುಖ್ಯರಸ್ತೆ
ಸುಖದಾಯಿ ಪಾಮ್‌ವುಡ್ ಲೇಔಟ್
ತಿರುಮಲ ಪಬ್ಲಿಕ್ ಸ್ಕೂಲ್ ರಸ್ತೆ
ಲಲಿತಾದ್ರಿಪುರ ಅಂಚೆ
ಮೈಸೂರು 570028
ಮೊ: 8105492688

**ಹಿಂಬದಿ ಪುಟದ ಚಿತ್ರ**

ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವವನ್ನು ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಉದ್ಘಾಟಿಸಿದರು. ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಪೇಜಾವರ ಶ್ರೀಪಾದಂಗಳು, ಸಿರಿಗೆರೆ ಜಗದ್ಗುರುಗಳು, ಜಗದ್ಗುರುಗಳು, ಆದಿಚುಂಚನಗಿರಿ ಜಗದ್ಗುರುಗಳು, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಪ್ರಲ್ಹಾದ್ ಜೋಶಿ, ಶ್ರೀ ಸಿ.ಟಿ. ರವಿ, ಶ್ರೀ ವಿ. ಸುನೀಲ್‌ಕುಮಾರ್, ಶ್ರೀ ಸಿ.ಎಂ. ನಾಗರಾಜರವರುಗಳಿದ್ದಾರೆ (25 ಫೆಬ್ರವರಿ 2023)



ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಹದೇಶ್ವರರ 108 ಅಡಿ ಎತ್ತರದ ಪ್ರತಿಮೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಲೋಕಾರ್ಪಣೆ ಮಾಡಿದರು. ಶ್ರೀ ಬಸವರಾಜು, ಶ್ರೀಮತಿ ಎಸ್. ಕಾತ್ಯಾಯಿನಿದೇವಿ, ಶ್ರೀಮತಿ ಶೈಲಜ ಸೋಮಣ್ಣ, ಸಾಲೂರು ಮಠದ ಶ್ರೀಗಳು, ಶ್ರೀ ಆರ್. ನರೇಂದ್ರ, ಶ್ರೀ ವಿ. ಸೋಮಣ್ಣ, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಎನ್. ಮಹೇಶ್, ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ ಹಾಗೂ ಶ್ರೀ ನಿಜಗುಣರಾಜುರವರುಗಳಿದ್ದಾರೆ (18 ಮಾರ್ಚ್ 2023)



ಬೆಳಗಾವಿಯಲ್ಲಿ ಶ್ರೀ ಮಹಾಂತೇಶ ಕವಟಗಿಮಠ ಸೌಹಾರ್ದ ಸಹಕಾರಿ ನೂತನ ಸಂಘವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಉದ್ಘಾಟಿಸಿದರು. ಶ್ರೀ ಮಹಾಂತೇಶ ಕವಟಗಿಮಠ, ಶ್ರೀ ಈರಣ್ಣ ಕಡಾಡಿ, ನಿಡಸೋಸಿ ಜಗದ್ಗುರುಗಳು, ನಾಗನೂರು ಶ್ರೀಗಳು, ಗದಗಿನ ಜಗದ್ಗುರುಗಳು, ಶ್ರೀ ಶರತ್ ಕವಟಗಿಮಠ, ಡಾ. ಪ್ರಭಾಕರ್ ಕೋರೆ ಮೊದಲಾದವರುಗಳಿದ್ದಾರೆ (15 ಮಾರ್ಚ್ 2023)



ಚಿಕ್ಕಬಳ್ಳಾಪುರದ ಈಶ ಫೌಂಡೇಷನ್‌ನಲ್ಲಿ ಏರ್ಪಡಿಸಿದ್ದ 'ಸಪ್ತಋಷಿ ಆವಾಹನಂ' ಕಾರ್ಯಕ್ರಮದಲ್ಲಿ ಶ್ರೀ ಮಾದಾರ ಚನ್ನಯ್ಯ ಸ್ವಾಮಿಗಳು, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಠದ ಜಗದ್ಗುರುಗಳು, ಪರಮಪೂಜ್ಯ ಜಗದ್ಗುರುಗಳು, ಶ್ರೀ ಸದ್ಗುರು ಜಗ್ಗಿ ವಾಸುದೇವ್‌ರವರು (18 ಮಾರ್ಚ್ 2023)




ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಶ್ರವಣ ದಿನಾಚರಣೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಮೆರಿಕದ ಅಭಿ ಫ್ಯಾಮಿಲಿ ಫೌಂಡೇಶನ್ ಮತ್ತು ಅಭಿ ಟ್ರಸ್ಟ್‌ನ ಮುಖ್ಯಸ್ಥರಾದ ಶ್ರೀ ದೀಪಕ್ ಅಭಿಯವರು ಉದ್ಘಾಟಿಸಿದರು. ಡಾ. ಸಿ.ಪಿ. ಮಧು, ಡಾ. ಹೆಚ್. ಬಸವನಗೌಡಪ್ಪ, ಡಾ. ಬಿ. ಸುರೇಶ್, ಡಾ. ಸಂಧ್ಯಾ, ಡಾ. ಭಾರತಿ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುರಿಂದರ್ ಸಿಂಗ್, ಡಾ. ಎನ್.ಪಿ. ನಟರಾಜು, ಶ್ರೀ ಆರ್. ಮಹೇಶ್, ಡಾ. ಎಂ. ಪುಷ್ಪವತಿಯವರುಗಳಿದ್ದಾರೆ (28 ಫೆಬ್ರವರಿ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗಾಗಿ 'ತನುಜಾ' ಚಲನಚಿತ್ರ ಪ್ರದರ್ಶನವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳು, ವಿವಿಧ ಮಠಾಧಿಪತಿಗಳು, ಜೆಎಸ್‌ಎಸ್ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಚಿತ್ರತಂಡದೊಂದಿಗೆ ವೀಕ್ಷಿಸಿದರು (11 ಮಾರ್ಚ್ 2023)




ಬೆಂಗಳೂರಿನಲ್ಲಿ ರಾಜ್ ನ್ಯೂಸ್ ಸುದ್ದಿ ವಾಹಿನಿಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ವರ್ಷದ ಸಾಧಕಿ ಪ್ರಶಸ್ತಿ ಪ್ರದಾನ ಮಾಡಿದರು. ಶ್ರೀ ಶ್ರೀನಿವಾಸ್ ಹಳಕಟ್ಟಿ, ಸಚಿವರಾದ ಶ್ರೀ ಎನ್. ಮುನಿರತ್ನ, ಕು. ಸಪ್ತಮಿ ಗೌಡ, ಡಾ. ಡಿ.ಎಸ್. ಶಿವರುದ್ರಪ್ಪ, ಶ್ರೀ ಮಂಜುನಾಥ್ ಪ್ರಸಾದ್, ಶ್ರೀ ಅರವಿಂದ ಸಾಗರ್ ಮೊದಲಾದವರುಗಳಿದ್ದಾರೆ (14 ಮಾರ್ಚ್ 2023)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ದೆಹಲಿಯಲ್ಲಿ ನಡೆದ 74ನೇ ಗಣರಾಜ್ಯೋತ್ಸವ ಹಾಗೂ ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ಕರ್ನಲ್ ಶ್ರೀ ಆರ್.ಆರ್. ಮೆನನ್ ಮತ್ತು ಕರ್ನಲ್ ಶ್ರೀ ಮನೀಷ್ ಪ್ರಸಾದ್‌ರವರುಗಳಿದ್ದಾರೆ (20 ಫೆಬ್ರವರಿ 2023)



ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಜಿಲ್ಲಾ ಮತ್ತು ನಗರ ಘಟಕದ ಶರಣ ಸಾಹಿತ್ಯ ಪರಿಷತ್ತು ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಪ್ರೊ. ಮಲೆಯೂರು ಗುರುಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಶ್ರೀ ಎಂ. ಚಂದ್ರಶೇಖರ್, ಶ್ರೀ ಹೆಳವರಹುಂಡಿ ಸಿದ್ದಪ್ಪ, ಶ್ರೀ ಮಡ್ಡೀಕೆರೆ ಗೋಪಾಲ್, ಡಾ. ಲತಾ ರಾಜಶೇಖರ್, ಶ್ರೀ ಶಂಕರ್ ದೇವನೂರು, ಶ್ರೀ ಕೆ.ಎಸ್. ಶಿವರಾಂ, ನೀಲಕಂಠಸ್ವಾಮಿ ಮಠದ ಶ್ರೀಗಳು ಮತ್ತು ಶ್ರೀ ಮ.ಗು. ಸದಾನಂದಯ್ಯನವರುಗಳಿದ್ದಾರೆ (16 ಮಾರ್ಚ್ 2023)





ಮೈಸೂರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 15ನೆಯ ಪದವೀಧರರ ದಿನಾಚರಣೆಗೆ ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀಮತಿ ಸಿ. ಶಿಖಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಸಿ. ಶಿಖಾ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಡಾ. ಬಿ. ಪ್ರಭುಸ್ವಾಮಿ ಮತ್ತು ಪ್ರಶಸ್ತಿ ವಿಜೇತ ಪದವೀಧರರು (12 ಮಾರ್ಚ್ 2023)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ರಮೇಶ್‌ಕುಮಾರ್ ನಾಯಕ್, ಶ್ರೀ ಮುಳ್ಳೂರು ರಾಜು, ಪ್ರೊ. ಆರ್. ಇಂದಿರಾ, ಶ್ರೀ ನಾಗೇಶ್ ಪಾಣತ್ತಲೆ, ಶ್ರೀ ಕೆ.ಪಿ. ನಾಗರಾಜ್‌ರವರುಗಳನ್ನು ಸನ್ಮಾನಿಸಲಾಯಿತು. ಕರ್ನಲ್ ಶ್ರೀ ಆರ್.ಆರ್. ಮೆನನ್, ಶ್ರೀ ಕೂಡ್ಲಿ ಗುರುರಾಜ್, ಕರ್ನಲ್ ಶ್ರೀ ಮನೀಷ್ ಪ್ರಸಾದ್, ಶ್ರೀ ಸಿ.ಕೆ. ಮಹೇಂದ್ರರವರುಗಳಿದ್ದಾರೆ (20 ಫೆಬ್ರವರಿ 2023)





ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ 15ನೇ ಪದವೀಧರ ದಿನಾಚರಣೆಯಲ್ಲಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಉಪ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್‌ರವರು ಮಾತನಾಡುತ್ತಿರುವುದು. ಡಾ. ರೇಚಣ್ಣ, ಡಾ. ಸಿ.ಜಿ. ಬೆಟಸೂರಮಠ, ಡಾ. ಹೆಚ್.ಬಿ. ಸುರೇಶ್, ಮತ್ತು ಶ್ರೀ ಎಂ.ಎಂ. ಸ್ವಾಮಿಯವರುಗಳಿದ್ದಾರೆ (5 ಮಾರ್ಚ್ 2023)




ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 13ನೇ ದತ್ತಿ ಉಪನ್ಯಾಸದಲ್ಲಿ ಅಂತಾರಾಷ್ಟ್ರೀಯ ವೃತ್ತಿಪರ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷರಾದ ಶ್ರೀ ಅನೂಪ್ ಎನ್. ಮೆಹ್ತಾರವರು ಟುಮಾರೋಸ್ ಇಂಡಿಯಾ ಬಿಗಿನ್ಸ್ ಟುಡೇ : ಲೆವೆರೇಜಿಂಗ್ ಅಕೌಂಟೆಬಿಲಿಟಿ ಫಾರ್ ಇಎಸ್‌ಜಿ ವಿಷಯ ಕುರಿತು ಉಪನ್ಯಾಸ ನೀಡಿದರು. ಬೆಂಗಳೂರಿನ ಆದಾಯ ತೆರಿಗೆ ಇಲಾಖೆ ವಿನಾಯಿತಿಗಳ ವಿಭಾಗದ ಆಯುಕ್ತರಾದ ಶ್ರೀ ಮಣಿಯನ್ ಮದಿವನ್ನನ್ ಜಿಲ್ಲಾಧಿಕಾರಿಗಳಾದ ಡಾ. ಕೆ.ವಿ. ರಾಜೇಂದ್ರರವರುಗಳಿದ್ದಾರೆ (17 ಫೆಬ್ರವರಿ 2023)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 3, March 2023




ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org